ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 3 ಶನಿವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

43

ಸಂಪುಟ: 43 | ಸಂಚಿಕೆ: 226 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

75+ ವಿಶ್ವ ದರ್ಜೆಯ ಸೌಕರ್ಯಗಳು ಮತ್ತು 10,000 Sft ಅದ್ದೂರಿ ಕ್ಲಬ್ ಹೌಸ್ ಹೊಂದಿರುವ ಮೈಸೂರಿನ ಮೊದಲ ಐಷಾರಾಮಿ ಗೇಟೆಡ್ ಪ್ಲಾಟ್ ಸಮುದಾಯ







75+ ವರ್ಲ್ಡ್ ಕ್ಲಾಸ್ ಅಮೆನಿಟೀಸ್

ಝೋನ್ 01 – ಪ್ಲುಮೇರಿಯಾ ಪಾರ್ಕ್

01. ಪ್ಲುಮೇರಿಯಾ ಗ್ರೂವ್
02. ಮಲ್ಟಿಪರ್ಪಸ್ ಗ್ರೌಂಡ್
03. ರಿಫ್ರೆಶ್‌ಮೆಂಟ್ ಕಿಯೋಸ್ಕ್

ಝೋನ್ 02 – ಟ್ರಾ ್ಯಂಕ್ವಿಲ್ ಪಾರ್ಕ್

04. ಮೆಡಿಟೇಶನ್ ಝೋನ್
05. ವಾಟರ್‌ಫ್ರಂಟ್ ವ್ಯೂ ಡೆಕ್
06. ಅರೋಮಾ ಗಾರ್ಡನ್
07. ಪೆಬಲ್ ಗಾರ್ಡನ್
08. ಸೀನಿಯರ್ ಸಿಟಿಝನ್ ಗೇಝಿಬೋ
09. ಸ್ವಿಂಗ್ ಪಾರ್ಕ್
10. ಪೆಟ್ ಝೋನ್
11. ಲಾಫಿಂಗ್ ಪಾರ್ಕ್
12. ಕಿಡ್ಸ್‌ಸ್ಕೇಟಿಂಗ್ ಏರಿಯಾ
13. ಹರ್ಬಲ್ ಗಾರ್ಡನ್
14. ಗಾರ್ಡನ್ ವಾಕ್
15. ರಿಫ್ಲೆಕ್ಸಾಲಾಜಿ ಪಾಥ್

ಝೋನ್ 03 – ಕಿಡ್ಸ್ ಪಾರ್ಕ್

16. ಬ್ಯಾಡ್‌ಮಿಂಟನ್ ಕೋರ್ಟ್
17. ಬಾಸ್ಕೆಟ್‌ಬಾಲ್ ಪೋಸ್ಟ್
18. ಕಿಡ್ಸ್ ಪ್ಲೇ ಝೋನ್
19. ಟಾಡ್ಲರ್ಸ್ ಪ್ಲೇ ಝೋನ್
20. ಸ್ಯಾಂಡ್ ಪಿಟ್
21. ಔಟ್‌ಡೋರ್ ಟೇಬಲ್ ಟೆನಿಸ್
22. ವಾಲಿಬಾಲ್ ಕೋರ್ಟ್
23. ಗಾಗಾ ಪಿಟ್
24. ರೆಸ್ಟಿಂಗ್ ಪೆವಿಲಿಯನ್
25. ಸ್ಪ್ಲ್ಯಾಶ್ ಪಾಂಡ್ (ಕಿಡ್ಸ್)

ಝೋನ್ 04 – ಫಿಟ್ನೆಸ್ ಹಬ್

26. ಓಪನ್ ಜಿಮ್
27. ಔಟ್‌ಡೋರ್ ಏರೋಬಿಕ್ಸ್
28. ಸೆರೆನಿಟಿ ಫೌಂಟೇನ್
29. ಸ್ಕಲ್ಪ್ಚರ್ ಆಫ್ ಪೀಸ್
30. ಔಟ್‌ಡೋರ್ ಯೋಗಾ ಕಬಾನ

ಝೋನ್ 05 – ಲೀಝರ್ ಪಾರ್ಕ್

31. ಪಾರ್ಟಿ ಲಾನ್
32. ಬಿಬಿಕ್ಯೂ ಕಾರ್ನರ್
33. ಹಮ್ಮಾಕ್
34. ಬೋನ್ ಫಾಯರ್ ಪಿಟ್
35. ಲಾಂಜ್ ಡೆಕ್
36. ಡಿಜೆ ಕನ್ಸೋಲ್
37. ಕಿಡ್ಸ್ ಪೂಲ್
38. ಸ್ವಿಮ್ಮಿಂಗ್ ಪೂಲ್
39. ಪೂಲ್ ಡೆಕ್ ಆಲ್‌ಫ್ರೆಸ್ಕೋ
40. ಬಗಿ ಕಾರ್ ಸ್ಟೇಶನ್
41. ಔಟ್‌ಡೋರ್ ಕೆಫೆ ಕಿಯೋಸ್ಕ್

ಝೋನ್ 06 – ಅಡ್ವೆಂಚರ್ ಪಾರ್ಕ್

42. ಕ್ರಿಕೆಟ್ ನೆಟ್
43. ಔಟ್‌ಡೋರ್ ಕಿಡ್ಸ್ ಮೇಝ್
44. ಕಿಡ್ಸ್ ಪ್ಲೇ ಕ್ಯಾಸ್ಟಲ್
45. ಕಿಡ್ಸ್ ರೋಪ್ ಬ್ರಿಜ್
46. ಕಿಡ್ಸ್ ರಾಕ್ ಕ್ಲೈಂಬಿಂಗ್ ವಾಲ್
47. ಸೈಕ್ಲಿಂಗ್ ಟ್ರ್ಯಾಕ್
48. ಕಿಡ್ಸ್ ಝಿಪ್ ಲೈನ್
49. ಟ್ರ್ಯಾಂಪೋಲೈನ್ ಪಾರ್ಕ್


ಕ್ಲಬ್‌ಹೌಸ್

50. ವೇಟಿಂಗ್ ಲಾಂಜ್
51. ಕೆಫೆಟೇರಿಯಾ
52. ಲಾಕರ್‌ಗಳೊಂದಿಗೆ ಚೇಂಜ್ ರೂಮ್‌ಗಳು
53. ಕನ್ವಿನಿಯೆನ್ಸ್ ಸ್ಟೋರ್
54. ಫಾರ್ಮಸಿ
55. ಹೆಲ್ತ್ ಕೇರ್
56. ಸೀನಿಯರ್ ಕಾರ್ನರ್ – ಆ್ಯಕ್ಯುಪ್ರೆಶರ್ ಏರಿಯಾ ಪಾಯಿಂಟ್
57. ಲಾಂಡ್ರೊಮ್ಯಾಟ್
58. ಬ್ಯೂಟಿ ಸಲೂನ್
59. ಕಿಡ್ಸ್ ಲೈಬ್ರರಿ
60. ಕಿಡ್ಸ್ ಡೇ ಕೇರ್ / ಕ್ರೇಶ್
61. ಇಂಡೋರ್ ಜಿಮ್
62. ಏರೋಬಿಕ್ಸ್
63. ಝುಂಬಾ ಫ್ಲೋರ್
64. ಸೌನಾ
65. ಸ್ಟೀಮ್
66. ಜಾಕುಝಿ
67. ಕಾನ್‌ಫರೆನ್ಸ್ / ಬೋರ್ಡ್ ರೂಮ್
68. ಗೆಸ್ಟ್ ಸೂಟ್ಸ್
69. ಮಿನಿ ಥಿಯೇಟರ್
70. ಬಾಂಕ್ವೆಟ್ ಹಾಲ್
71. ಇಂಡೋರ್ ಗೇಮ್ಸ್ (ಚೆಸ್ ಹಾಗೂ ಕ್ಯಾರಮ್)
72. ಬಿಲಿಯಾರ್ಡ್ಸ್
73. ಕಿಡ್ಸ್ ಅಮ್ಯೂಝ್‌ಮೆಂಟ್ ಆರ್ಕೇಡ್
74. ಬ್ಯಾಡ್‌ಮಿಂಟನ್
75. ಸ್ಕ್ವ್ಯಾಶ್ ಕೋರ್ಟ್ (ಮಿನಿ)
76. ಟೇಬಲ್ ಟೆನ್ನಿಸ್ (ಇಂಡೋರ್)

PRICE TABLE

Size Range (Sft.)	Neighbourhood Market Price (Bannimantap / SS Nagar)	G Square Launch Price	G Square Early Bird Price
800 - 1200	~~50L - 74L~~	~~41L - 61L~~	40L - 59L
1201 - 1900	~~75L - 1.17Cr~~	~~61.25L - 96L~~	60L - 94L
1901 - 3000	~~1.18Cr - 1.86Cr~~	~~97L - 1.53L~~	95L - 1.49Cr

LOCATION MAP



97431 93000
www.gsquarehousing.com

G SQUARE BUILD ASSIST
A POST-PURCHASE GUIDANCE PROGRAM

G SQUARE GROUP
YOUR PLOT. YOUR HOME. YOUR WAY.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 3 ಶನಿವಾರ 2022

ಸಂಪುಟ: 43 | ಸಂಚಿಕೆ: 226 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ವಿಧಾನಸಭೆ ಚುನಾವಣೆ ಹಿನ್ನೆಲೆ: ಆಡಳಿತ ವಿರೋಧಿ ಅಲೆ ಅಪಾಯದ ಭೀತಿ

ವಿದ್ಯುತ್ ದರ ಇಳಿಕೆ ನಿರ್ಧಾರ



● ಪ್ರತಿ ಯೂನಿಟ್‌ಗೆ 70 ಪೈಸೆಯಿಂದ ಎರಡು ರೂ. ಇಳಿಕೆ ನಿರೀಕ್ಷೆ ● ದರ ಇಳಿಕೆ ಗೃಹೋಪಯೋಗಿ ಮಾತ್ರವಲ್ಲ: ವಾಣಿಜ್ಯ ಉದ್ದೇಶಿತ ಬಳಕೆಗೂ ಅನ್ವಯ

ನೂತನ ವರ್ಷಾರಂಭಕ್ಕೆ ಮೊದಲೇ ಸಿಹಿ ಸುದ್ದಿ ನೀಡುವ ಸಾಧ್ಯತೆ

ಬೆಂಗಳೂರು, ಡಿ.2(ಕೆಎಂಶಿ)– ಹಾಲು, ಮೊಸರು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಆಡಳಿತ ವಿರೋಧಿ ಅಲೆ ಉಂಟಾಗುವ ಅಪಾಯವನ್ನು ಅರಿತಿರುವ ಸರ್ಕಾರ ಇತ್ತೀಚೆಗೆ ಹೆಚ್ಚಳ ಮಾಡಲಾದ ವಿದ್ಯುತ್ ದರ ಇಳಿಸಲು ಮುಂದಾಗಿದೆ.

ನೂತನ ವರ್ಷಾರಂಭಕ್ಕೆ ಮೊದಲೇ ವಿದ್ಯುತ್ ದರ ಇಳಿಸಿ ಗ್ರಾಹಕರಿಗೆ ಸಿಹಿ ಸುದ್ದಿ ನೀಡುವ ಪ್ರಸ್ತಾಪವನ್ನು ಇಂಧನ ಇಲಾಖೆ ಸಿದ್ಧಪಡಿಸಿದೆ. ಗೃಹ ಬಳಕೆಯೂ ಸೇರಿದಂತೆ ಎಲ್ಲ ಬಗೆಯ ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಇಂಧನ ದರ ಕಡಿತಕ್ಕೆ ಗಂಭೀರ ಚಿಂತನೆ ನಡೆಸಿದ್ದು, ಬಳಕೆದಾರರ ಶುಲ್ಕವನ್ನು ಕಡಿಮೆ ಮಾಡಲು ನಿರ್ಧರಿಸಲಾಗಿದೆ. ಪ್ರತಿ ಯುನಿಟ್‌ಗೆ 70 ಪೈಸೆಯಿಂದ 2 ರೂ.ವರೆಗೂ ಶುಲ್ಕ ಇಳಿಕೆಯಾಗುವ ನಿರೀಕ್ಷೆ ಇದೆ. ನಾಲ್ಕು ರೂ. ಹೆಚ್ಚಳಕ್ಕೆ ಕೆಎಂಎಫ್ ಪ್ರಸ್ತಾವನೆ ಸಲ್ಲಿಸಿದ್ದರೂ ಗ್ರಾಹಕರ ಕೆಂಗಣ್ಣಿಗೆ ಗುರಿಯಾಗಬೇಕು ಎಂಬ ಕಾರಣಕ್ಕೆ ಹಾಲಿನ ದರವನ್ನು ಎರಡು ರೂ. ಹೆಚ್ಚಿಸಲು ಅನುಮತಿ ನೀಡಿತ್ತು.

ಚುನಾವಣೆ ಹೊಸ್ತಿಲಲ್ಲಿ ವಿಪಕ್ಷಗಳಿಗೆ ಅಸ್ತ್ರವಾಗಿ ಆಡಳಿತ ವಿರೋಧಿ ಅಲೆ ಸೃಷ್ಟಿಯಾಗುವುದನ್ನು ತಪ್ಪಿಸಲು ಬೆಲೆ ಏರಿಕೆಗೆ ಕಡಿವಾಣ ಹಾಕುತ್ತಿದೆ. ಡೀಸೆಲ್ ಬೆಲೆ ಏರಿಕೆಯಾದರೂ ಬಸ್ ಪ್ರಯಾಣ ದರ ಹೆಚ್ಚಿಸದೇ ಇರುವುದು ಇದೇ ಕಾರಣಕ್ಕೆ. ರಾಜ್ಯದಲ್ಲಿ ಆಡಳಿತ ಪರವಾದ ಅಲೆ ಉಂಟು ಮಾಡಲು ಹರ ಸಾಹಸ ಮಾಡುತ್ತಿರುವ ಸರ್ಕಾರ ಇಂಧನ ದರ ಇಳಿಸಲು ಮುಂದಾಗಿದೆ. ಪ್ರತಿ ವರ್ಷ ನಡೆಸುವ ವಾರ್ಷಿಕ ದರ ಪರಿಷ್ಕರಣೆಯಲ್ಲಿ ವಿದ್ಯುತ್ ಶುಲ್ಕ ಹೆಚ್ಚಳದಿಂದ ಗ್ರಾಹಕರ ಮೇಲೆ ಹೊರೆ ಹೇರಲಾಗುತ್ತಿದೆ ಎಂಬ ಆರೋಪದಿಂದ ಮುಕ್ತವಾಗಲು ಇಂಧನ ಇಲಾಖೆ ಈ ನಿರ್ಧಾರಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಂದ ಕೆಇಆರ್‌ಸಿಗೆ ಸಲ್ಲಿಸುವ ಪ್ರಸ್ತಾವನೆಯಲ್ಲಿ ಬಳಕೆದಾರರ ಶುಲ್ಕವನ್ನು ಕಡಿಮೆ ಮಾಡಿದ ದರಪಟ್ಟಿಯನ್ನು ಸಲ್ಲಿಸಲು ನಿರ್ಧರಿಸಲಾಗಿದೆ ಎಂಬ ಮಾಹಿತಿ ದೊರೆತಿದೆ. ಇದು ಕೇವಲ ಗೃಹ ಬಳಕೆ ಗ್ರಾಹಕರಿಗೆ ಮಾತ್ರವಲ್ಲ, ಎಚ್ ಟಿ, ಕೈಗಾರಿಕೆ, ವಾಣಿಜ್ಯ ಮತ್ತು ಎಲ್ ಟಿ ಗ್ರಾಹಕರಿಗೂ ಅನ್ವಯವಾಗಲಿದೆ. ವಾಣಿಜ್ಯ ಬಳಕೆದಾರರಿಗೆ ವಿಧಿಸಿದ್ದ ಕ್ರಾಸ್ ಸಬ್ಸಿಡಿ ಗ್ರಾಹಕರಿಗೆ ಕಿರಿಕಿರಿ ಉಂಟಾಗುವ ಹಿನ್ನೆಲೆಯಲ್ಲಿ ಅವರು ಗ್ರಿಡ್ ತೊರೆಯುತ್ತಿದ್ದರು.

ಹೀಗಾಗಿ ಎಚ್.ಟಿ.ಗ್ರಾಹಕರನ್ನು ಉಳಿಸಿಕೊಳ್ಳಲು ಕ್ರಾಸ್ ಸಬ್ಸಿಡಿಯನ್ನು ಸಡಿಲಿಸಲು ಬೆಸ್ಕಾಂ ವ್ಯಾಪ್ತಿಯಲ್ಲಿ ಹೊಸ ಪ್ರಸ್ತಾಪ ಸಲ್ಲಿಕೆಯಾಗಿದ್ದು, ಪ್ರತ್ಯೇಕ ಶುಲ್ಕ ಪದ್ಧತಿಯನ್ನು ಪ್ರಸ್ತಾಪಿಸಲಾಗಿದೆ ಎಂದು ತಿಳಿದು ಬಂದಿದೆ. ಇಂಧನ ಇಲಾಖೆ ಮೂಲಗಳಿಂದ ಲಭ್ಯವಾಗಿರುವ ಮಾಹಿತಿ ಪ್ರಕಾರ, ಗ್ರಾಮೀಣ ವಿದ್ಯುತ್ ಬಳಕೆದಾರರಿಗೆ ತುಸು ರಿಯಾಯಿತಿ ನೀಡುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಹಕರಿಗೆ ಬಳಕೆದಾರರ ಶುಲ್ಕದಲ್ಲಿ 25 ಪೈಸೆಯಷ್ಟು ರಿಯಾಯಿತಿ ನೀಡುವ ಬಗ್ಗೆ ಚಿಂತನೆ ನಡೆಸಲಾಗಿದೆ. 50 ಯುನಿಟ್‌ವರೆಗೆ ಲೈಫ್‌ಲೈನ್ ಬಳಕೆಯ ಎಲ್‌ಟಿ 2 (ಎ1) ಹಾಗೂ ▶ 9ನೇ ಪುಟಕ್ಕೆ



“ ವಿದ್ಯುತ್ ಶುಲ್ಕ ಪರಿಷ್ಕರಣೆ ಸಂದರ್ಭದಲ್ಲಿ ಜನಪರ ನಿಲುವು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೆ. ಈ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಸಾಕಷ್ಟು ಪೂರ್ವ ಸಿದ್ಧತೆ ನಡೆಸಲಾಗುತ್ತಿದೆ. ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಿ ಗ್ರಾಹಕ ಸ್ನೇಹಿಯಾಗುವ ಮೂಲಕ ರಾಜ್ಯ ಸರ್ಕಾರ ಇನ್ನಷ್ಟು ಜನಪರವಾಗಲಿದೆ. ಬಳಕೆದಾರರ ಶುಲ್ಕ ಇಳಿಕೆಗೆ ಚಿಂತನೆ ನಡೆದಿದೆ.

–ವಿ.ಸುನಿಲ್‌ಕುಮಾರ್, ಇಂಧನ ಸಚಿವ

ಸಿದ್ದರಾಮಯ್ಯ ವಿಶ್ರಾಂತಿಗೆ ವೈದ್ಯರ ಸಲಹೆ



ಬೆಂಗಳೂರು, ಡಿ.2(ಕೆಎಂಶಿ)–ಅನಾರೋಗ್ಯದಿಂದ ಬಳಲುತ್ತಿರುವ ವಿಧಾನ ಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ನಾಲ್ಕು ದಿನಗಳ ಕಾಲ ಅವರು ಪೂರ್ಣ ವಿಶ್ರಾಂತಿ ಪಡೆಯುವಂತೆ ವೈದ್ಯರು ಸಲಹೆ ನೀಡಿದ್ದಾರೆ.

ಖಾಸಗಿ ಆಸ್ಪತ್ರೆಗೆ ಇಂದು ಮುಂಜಾನೆ ಶಸ್ತ್ರ ಚಿಕಿತ್ಸೆಗೆಂದು ದಾಖಲಾಗಿದ್ದ ಅವರಿಗೆ ಪರಿಣಿತ ವೈದ್ಯರು ತಪಾಸಣೆ ಮಾಡಿದ ನಂತರ ಸದ್ಯಕ್ಕೆ ಶಸ್ತ್ರ ಚಿಕಿತ್ಸೆ ಅಗತ್ಯವಿಲ್ಲ. ಮನೆಯಲ್ಲಿ ವಿಶ್ರಾಂತಿ ಪಡೆದುಕೊಳ್ಳಿ ಎಂದು ಸಲಹೆ ಮಾಡಿದ್ದಾರೆ. ವೈದ್ಯರ ಸಲಹೆ ಮೇರೆಗೆ ಮುಂದಿನ ಒಂದು ವಾರ ಕಾಲ ತಮ್ಮೆಲ್ಲ ಕಾರ್ಯಕ್ರಮಗಳನ್ನು ರದ್ದು ಮಾಡಿರುವ ಅವರು, ವಿಶ್ರಾಂತಿ ಮೊರೆ ಹೋಗಿದ್ದಾರೆ.

ಡಿ.8ರಿಂದ ಭಾರತೀಯತೆ ಸಾರುವ ಬಹುರೂಪಿ ರಾಷ್ಟ್ರೀಯ ರಂಗೋತ್ಸವ

● ಡಿ.10ರಂದು ಸಿಎಂ ಬೊಮ್ಮಾಯಿ ಅವರಿಂದ ಉದ್ಘಾಟನೆ
● ಡಿ.15ರವರೆಗೆ ವಿವಿಧ ರಾಜ್ಯಗಳ 22 ನಾಟಕಗಳ ಪ್ರದರ್ಶನ



ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಶುಕ್ರವಾರ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಪೋಸ್ಟರ್ ಬಿಡುಗಡೆ ಗೊಳಿಸಿದರು.

ಮೈಸೂರು,ಡಿ.2(ಆರ್‌ಕೆಬಿ)–ಮೈಸೂರು ರಂಗಾಯಣದ ಈ ಬಾರಿಯ ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಡಿ.8ರಿಂದ 15ರವರೆಗೆ ನಡೆಯಲಿದ್ದು, 'ಭಾರತೀಯತೆ' ಶೀರ್ಷಿಕೆಯಡಿಯ ಈ ರಾಷ್ಟ್ರೀಯ ರಂಗ ಉತ್ಸವಕ್ಕೆ ಡಿ.10ರಂದು ಸಂಜೆ 5.30ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಾಲನೆ ನೀಡಲಿದ್ದಾರೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ತಿಳಿಸಿದರು.

ರಂಗಾಯಣದ ಆವರಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಕುರಿತ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಈ ಬಾರಿಯ ಬಹುರೂಪಿ ರಂಗೋತ್ಸವದಲ್ಲಿ ▶ 9ನೇ ಪುಟಕ್ಕೆ

ನಾಟಕಗಳು ಯಾವುವು?

● ಡಿ.9ರಂದು ಸಂಜೆ 6.30ಕ್ಕೆ ಭೂಮಿಗೀತದಲ್ಲಿ ಟಿಪ್ಪು ನಿಜಕನಸುಗಳು (ಕನ್ನಡ), ● 10ರಂದು ಸಂಜೆ 6.30ಕ್ಕೆ ಭೂಮಿಗೀತದಲ್ಲಿ ಕರ್ಣ ಬಾರಂ (ಸಂಸ್ಕೃತ), ಸಂಜೆ 7 ಗಂಟೆಗೆ ಕಿರು ರಂಗಮಂದಿರದಲ್ಲಿ ಚಿದಂಬರ ರಹಸ್ಯ (ಕನ್ನಡ), ಸಂಜೆ 7.30ಕ್ಕೆ ಕಲಾಮಂದಿರದಲ್ಲಿ ಕರಿಮಾಯಿ (ಕನ್ನಡ). ● 11ರಂದು ಸಂಜೆ 6.30ಕ್ಕೆ ಭೂಮಿಗೀತದಲ್ಲಿ ಗಣಿತಜ್ಞ ಭಾಸ್ಕರಾಚಾರ್ಯ ಜೀವನ ಆಧಾರಿತ ಲೀಲಾವತಿ (ಕನ್ನಡ), ಸಂಜೆ 7ಕ್ಕೆ ಕಿರು ರಂಗಮಂದಿರದಲ್ಲಿ ಕುವೆಂಪು ರಚಿಸಿದ ಚಂದ್ರಹಾಸ (ಕನ್ನಡ), ಸಂಜೆ 7.30ಕ್ಕೆ ಕಲಾಮಂದಿರದಲ್ಲಿ ಎಸ್.ಮೃಗ ಭೂಪತಿ ರಚಿಸಿ ನಿರ್ದೇಶಿಸಿದ ಇಡಕಿಣಿ ಕಥಾಯರಥಂ (ತಮಿಳು). ● 12ರಂದು ಸಂಜೆ 6.30ಕ್ಕೆ ಭೂಮಿಗೀತದಲ್ಲಿ ಇಮಾನಂಗಿ ನತಂ ಬಾ (ಮಣಿಪುರಿ), ಸಂಜೆ 7ಕ್ಕೆ ಕಿರು ರಂಗಮಂದಿರದಲ್ಲಿ ಕಾಪ (ತುಳು), ಸಂಜೆ 7.30ಕ್ಕೆ ಕಲಾಮಂದಿರದಲ್ಲಿ ಗೌಡ್ರ ಗದ್ಲ (ಕನ್ನಡ) ● 13 ರಂದು ಸಂಜೆ 6.30ಕ್ಕೆ ಭೂಮಿಗೀತದಲ್ಲಿ ಬೈಟುಕಾಫಿ (ಕನ್ನಡ), ಸಂಜೆ 7ಕ್ಕೆ ಕಿರು ರಂಗಮಂದಿರದಲ್ಲಿ ತುಕ್ಕೋಜಿ (ಕನ್ನಡ), ಸಂಜೆ 7.30ಕ್ಕೆ ಕಲಾಮಂದಿರದಲ್ಲಿ ಉಡಿಯೊಳಗಣ ಕಿಚ್ಚು (ಕನ್ನಡ), ಸಂಜೆ 7.30ಕ್ಕೆ ಬೋಡಾಸ್ ದೇ ಸಾಂಗ್ರೆ (ಪಂಜಾಬಿ), ● 14ರಂದು ಸಂಜೆ 6.30ಕ್ಕೆ ಭೂಮಿಗೀತದಲ್ಲಿ ಬೆಟರ್ ಆಫ್ (ಹಿಂದಿ), ಸಂಜೆ 7ಕ್ಕೆ ಕಿರು ರಂಗಮಂದಿರದಲ್ಲಿ ಪಂಚಕನ್ಯಾಸ್ಮರೆ ನಿತ್ಯಂ (ಕನ್ನಡ), ಸಂಜೆ 7:30ಕ್ಕೆ ಕಲಾ ಮಂದಿರದಲ್ಲಿ ವಿದ್ಯಾ ಸುಂದರಿ ಬೆಂಗಳೂರು ನಾಗರತ್ನಮ್ಮ (ಕನ್ನಡ). ● 15ರಂದು ಸಂಜೆ 6.30ಕ್ಕೆ ಭೂಮಿಗೀತದಲ್ಲಿ ಛಾಯಾ ಚಿತ್ರಂ ಮಾಯಾ ಚಿತ್ರಂ (ಮಲಯಾಳಂ), ಸಂಜೆ 7ಕ್ಕೆ ಕಲಾಮಂದಿರದಲ್ಲಿ ಆವನಿ (ಕನ್ನಡ), ಸಂಜೆ 7:30 ಗಂಟೆಗೆ ಕಿರು ರಂಗಮಂದಿರದಲ್ಲಿ ಮಾಯಾಬಜಾರ್ (ತೆಲುಗು).

ಶೀಘ್ರವೇ ಮೈಸೂರು–ಬೆಂಗಳೂರು ಇ–ಬಸ್ ಸೇವೆ



ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಚಾರ್ಜಿಂಗ್ ಪಾಯಿಂಟ್ ಸಿದ್ಧವಾಗುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

● ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಚಾರ್ಜಿಂಗ್ ಸ್ಟೇಷನ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿ ● ಡಿ.18ರಂದು ಪ್ರಾಯೋಗಿಕ ಸಂಚಾರ

ಮೈಸೂರು, ಡಿ.2(ಆರ್‌ಕೆ)– ಬೆಂಗಳೂರು ನಗರದಲ್ಲಿ ಯಶಸ್ವಿಯಾಗಿರುವ ಇ–ಬಸ್ (ಎಲೆಕ್ಟ್ರಿಕ್ ಬಸ್) ಸೇವೆಯನ್ನು ರಾಜ್ಯಾದ್ಯಂತ ವಿಸ್ತರಿಸಲು ಚಿಂತನೆ ನಡೆಸಿರುವ ಕೆಎಸ್‌ಆರ್‌ಟಿಸಿ, ಮೊದಲಿಗೆ ಪೈಲಟ್ ಪ್ರಾಜೆಕ್ಟ್ ಆಗಿ ಮೈಸೂರು–ಬೆಂಗಳೂರು ನಡುವೆ ಇ–ಬಸ್ ಸಂಚಾರಕ್ಕೆ ಸಿದ್ಧತೆ ನಡೆಸಿದ್ದು, ಅದಕ್ಕೆ ಪೂರಕವಾಗಿ ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ▶ 9ನೇ ಪುಟಕ್ಕೆ

ಸಿಸಿಟಿವಿ ಕ್ಯಾಮರಾ, ಟ್ರ್ಯಾಕಿಂಗ್ ಸಿಸ್ಟಂ, ಸುಸಜ್ಜಿತ ಆಸನ, ಲಗ್ಗೇಜ್ ಇರಿಸಲು ಸೂಕ್ತ ಸ್ಥಳಾವಕಾಶ, ಆಧುನಿಕ ಮಾಡ್ಯುಲರ್ ಬ್ಯಾಟರಿ, ಮಲ್ಟಿ ಆಕಲ್ ಹೊಂದಿರುವ ಹವಾನಿಯಂತ್ರಿತ ಇ–ಬಸ್‌ಗಳು, ಐರಾವತದಲ್ಲಿರುವಂತೆ ಎಲ್ಲಾ ಸುಸಜ್ಜಿತ ಸೌಲಭ್ಯ ಹೊಂದಿವೆ.

ನಕ್ಕರೆ ಅದೇ ಸ್ವರ್ಗ

ಶಂಕರ : (ಆತುರಾತುರವಾಗಿ ಓಡಿ ಬಂದು) ಸ್ವಾಮಿ ನನ್ನ ಹೆಂಡತಿ ಮೂರು ದಿನಗಳಿಂದ ಕಾಣ್ತಾ ಇಲ್ಲ.

ನೌಕರ : ಅದಕ್ಕೆ ಪೊಲೀಸ್ ಠಾಣೆಗೆ ಹೋಗಿ, ಇದು ಪೋಸ್ಟ್ ಆಫೀಸ್.

ಶಂಕರ : ಹೌದಾ ಕ್ಷಮಿಸಿ... ಸಂತೋಷದಲ್ಲಿ ಎಲ್ಲಿಗೆ ಹೋಗಬೇಕು ಎಂದು ಗೊತ್ತಾಗದೆ ಇಲ್ಲಿಗೆ ಬಂದುಬಿಟ್ಟೆ..!

ಮೈಸೂರು ಮಿತ್ರ

ಶನಿವಾರ, 3 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಆತ್ಮಸಾಕ್ಷಿಯೆಂದರೆ ನಿಮ್ಮನ್ನು ಯಾರೋ ಗಮನಿಸುತ್ತಿರುವರೆಂದು ಎಚ್ಚರಿಸುವ ಒಳದನಿ–ಮೆನ್‌ಕೆನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು
{ ಆಳ ನೋಡಿ ಬಾವಿಗೆ ಇಳಿಯಬೇಕು.
ಕುಲ ನೋಡಿ ಹೆಣ್ಣು ಕೊಡಬೇಕು.

ನಿಮ್ಮ ಪತ್ರಗಳು

ಹಾರ್ಡಿಂಜ್ ವೃತ್ತದ ಟ್ರಾಫಿಕ್ ವೃತ್ತಾಂತ



ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ಹಾಗೂ ಅರಮನೆಗೆ ಹೊಂದಿಕೊಂಡಿರುವ ಒಂದು ವೃತ್ತಕ್ಕೆ ಜಯಚಾಮರಾಜೇಂದ್ರ ಒಡೆಯರ್ ವೃತ್ತ, ಹಾರ್ಡಿಂಜ್ ವೃತ್ತ, ಆರುಗೇಟ್ ಎಂಬುದಾಗಿ ಕರೆಯಲ್ಪಡುವುದು ವಿಶೇಷ. ಬಹುಶಃ ಮೈಸೂರಿನ ಇತರೆ ಯಾವ ವೃತ್ತಕ್ಕೂ ಹೀಗೆ ಮೂರು ಹೆಸರು ಇರಲಾರದು. ಈಗ ಟ್ರಾಫಿಕ್ ಕಿರಿಕಿರಿ ವೃತ್ತವೆಂಬ ಮತ್ತೊಂದು ಹೆಸರು ಸೇರುವ ಸಂಭವ ಇದೆ. ಆರು ಮುಖ್ಯ ರಸ್ತೆಗಳು ಕೂಡುವ ವೃತ್ತದಲ್ಲಿ ದಿನಪೂರ ವಾಹನಗಳ ದಟ್ಟಣೆ ಹೆಚ್ಚಿರುತ್ತದೆ. ಟ್ರಾಫಿಕ್ ಪೊಲೀಸ್‌ನವರು ಸದುದ್ದೇಶದಿಂದ ಸುಗಮ ಸಂಚಾರಕ್ಕಾಗಿ ಜಯಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಪೀಠದಿಂದ ಅಂದಾಜು ಹದಿನೈದು ಅಡಿಗಳಷ್ಟು ಅಂತರದಲ್ಲಿ ಸುತ್ತಲೂ ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದಾರೆ. ಇದರಿಂದ ಸುಗಮ ಸಂಚಾರದ ಉದ್ದೇಶ ಸಫಲವಾಗುತ್ತಿಲ್ಲ ಎಂಬುದು ವೃತ್ತದಲ್ಲಿ ವಾಹನವನ್ನು ಚಾಲನೆ ಮಾಡುವಾಗ ಅನಿಸುವುದುಂಟು. ಮೊದಲಿದ್ದ ವ್ಯವಸ್ಥೆಯಲ್ಲಿ ಆತಂಕವಿಲ್ಲದೆ ಸರಾಗವಾಗಿ ಒಂದು ರಸ್ತೆಯಿಂದ ಮತ್ತೊಂದು ರಸ್ತೆಗೆ ಚಲಿಸಿಬಿಡಬಹುದಿತ್ತು. ಆದರೆ ಯಾಕೋ ಈಗ ಸಾಧ್ಯವಾಗದು!.

ತಾಂತ್ರಿಕವಾಗಿ ಹೇಳುವುದಾದರೆ ವೃತ್ತದ ಸುತ್ತಳತೆ ಹೆಚ್ಚಿದಂತೆ ವಾಹನಗಳು ಚಲಿಸುವ ದೂರ ಹೆಚ್ಚಾಗಿ ವೃತ್ತದಿಂದ ವಾಹನಗಳು ಹೊರ ಹೋಗುವ ಸಮಯ ದೀರ್ಘವಾಗಿ ವೃತ್ತದೊಳಗೆ ವಾಹನಗಳ ದಟ್ಟಣೆ ಮೊದಲಿಗಿಂತ ಸಂಖ್ಯೆಯಲ್ಲಿ ಜಾಸ್ತಿ ಆಗುವುದು. ಇದು ವಾಯು ಮಾಲಿನ್ಯಕ್ಕೆ, ಶಬ್ಧಮಾಲಿನ್ಯಕ್ಕೆ ಮತ್ತು ಇಂಧನ ಬಳಕೆಯ ಮೇಲೆ ಅಗಾದವಾದ ಪರಿಣಾಮ ಬೀರುವುದು, ಜೊತೆಗೆ ಸವಾರರಿಗೆ ಟ್ರಾಫಿಕ್ ಕಿರಿಕಿರಿ. ಸಿದ್ಧಾರ್ಥ ಹೋಟೆಲ್ ಕಡೆಯಿಂದ ಬಂದು ಒಂದಷ್ಟು ದೂರ ವೃತ್ತಾಕಾರವಾಗಿ ಚಲಿಸಿ ಆಲ್ಬರ್ಟ್ ವಿಕ್ಟರ್ ರಸ್ತೆಯ ಕಡೆಗೆ ತಿರುಗಬೇಕಾದರೆ ಕಷ್ಟವೆನಿಸುವುದು, ಬಹಳವೇ ಎಚ್ಚರವಹಿಸಿ ಹೋಗಬೇಕಾಗುತ್ತದೆ. ಇದೇ ರೀತಿಯ ಸಮಸ್ಯೆ ಊಟಿ ರಸ್ತೆಯಿಂದ ಬಂದು ಗ್ರಾಮಾಂತರ ಬಸ್ ನಿಲ್ದಾಣದ ಕಡೆಗೆ ಹೋಗುವಾಗಲೂ ಆಗುವುದುಂಟು, ಹಾಗಾಗಿ ವೈಜ್ಞಾನಿಕವಾಗಿ ಪರಿಶೀಲಿಸಿ ನಗರ ಯೋಜನಾ ಪರಿಣಿತರೊಂದಿಗೆ ಚರ್ಚಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವುದು ಒಳಿತು.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಕನ್ನಡ ಬಾವುಟ ಹಾರಿಸುವುದು ಅಪರಾಧವೆ?

ಮಾನ್ಯರೆ,

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದೆ. ಅಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ. ಭಾರತ ದೇಶ ಹೇಗೆ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದೆಯೋ ಅದೇ ರೀತಿ ಕರ್ನಾಟಕ ಸಹ ಹಲವಾರು ಭಾಷಿಕರನ್ನು ಹೊಂದಿದ್ದರೂ ಕನ್ನಡ ಭಾಷೆಗೆ ಇಲ್ಲಿ ಪ್ರಥಮ ಆದ್ಯತೆಯಾಗಿದೆ.

ಬೆಳಗಾವಿಯಲ್ಲಿ ಮರಾಠಿ ಭಾಷಿಕರ ಸಂಖ್ಯೆ ಹೆಚ್ಚಾಗಿದ್ದು, ಅವರ ಭಾಷೆಗೆ ಯಾರು ಅಡ್ಡಿಪಡಿಸುತ್ತಿಲ್ಲ. ಕನ್ನಡ ಭಾಷೆಗೂ ಸಹ ಯಾರು ಅಡ್ಡಿ ಪಡಿಸಬಾರದು. ಬೆಳಗಾವಿಯಲ್ಲಿರುವ ಪ್ರತಿಯೊಬ್ಬರು ಭಾರತೀಯರಾಗಿದ್ದಾರೆ. ಇತ್ತೀಚೆಗೆ ಬೆಳಗಾವಿಯ ಕಾಲೇಜಿನಲ್ಲಿ ಕನ್ನಡ ಬಾವುಟವನ್ನು ಹಾರಿಸಿದ ವಿದ್ಯಾರ್ಥಿಯ ಮೇಲೆ ಹಲ್ಲೆ ನಡೆದಿರುವುದು ಖಂಡನೀಯವಾಗಿದೆ.

ಕನ್ನಡ ಭಾಷೆ, ಕರ್ನಾಟಕ ರಾಜ್ಯ ನಮ್ಮ ಹೆಮ್ಮೆ. ನಮ್ಮ ರಾಜ್ಯದಲ್ಲಿ ಯಾವ ಭಾಗದಲ್ಲಾದರೂ ಕನ್ನಡ ಬಾವುಟ ಹಾರಿಸುವುದು ಪ್ರತಿಯೊಬ್ಬ ಕನ್ನಡಿಗನ ಹಕ್ಕಾಗಿದೆ. ಇದನ್ನು ಯಾರು ಪ್ರಶ್ನಿಸಬಾರದು. ಬೆಳಗಾವಿಯ ಟಿಳಕವಾಡಿಯಲ್ಲಿರುವ ಗೋಗಟೆ ಕಾಲೇಜಿನಲ್ಲಿ ನಡೆದ ಫೆಸ್ಟ್‌ನಲ್ಲಿ ಅನಗೋಳ ರಾಜಹಂಸ ಗಲ್ಲಿಯ ಯುವಕ ಕನ್ನಡ ಬಾವುಟ ಹಾರಿಸಿ ಸಂಭ್ರಮ ಪಟ್ಟಿದ್ದನ್ನು ಸಹಿಸದ ಕೆಲವರು ಅವನ ಮೇಲೆ ಹಲ್ಲೆ ಮಾಡಿರುವುದು ವರದಿಯಾಗಿತ್ತು.

ಕನ್ನಡ ಬಾವುಟ ಹಾರಿಸಿದ ಯುವಕನ ಮೇಲೆ ಹಲ್ಲೆ ಮಾಡಿದ ಯುವಕರ ಮೇಲೆ ಪೋಲಿಸರು ಶಿಸ್ತು ಕ್ರಮ ಕೈಗೊಳ್ಳದಿರುವುದಕ್ಕೆ ಕನ್ನಡ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿದ್ದು, ಯುವಕನಿಗೆ ನೈತಿಕ ಬೆಂಬಲ ದೊರಕಿದಂತಾಗಿದೆ.

ಕನ್ನಡ ಭಾಷೆ ದೇಶದಲ್ಲಿ ಅತ್ಯಂತ ಪ್ರಾಚೀನ ಭಾಷೆಯಾಗಿದ್ದು ಮೂರು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. ಭಾರತದಲ್ಲಿ ತನ್ನದೆ ಅದ ವಿಶೇಷತೆಯನ್ನು ಹೊಂದಿರುವ ಕನ್ನಡ ಭಾಷೆಗೆ ಎಲ್ಲರೂ ಗೌರವ ಸಲ್ಲಿಸಬೇಕು. ಕರ್ನಾಟಕ ಸರ್ಕಾರ ಕನ್ನಡ ಭಾಷೆ ಮತ್ತು ಕನ್ನಡ ಹೋರಾಟಗಾರಿಗೆ ಸೂಕ್ತ ಬೆಂಬಲ ಮತ್ತು ರಕ್ಷಣೆಯನ್ನು ನೀಡಬೇಕು ಮತ್ತು ಕನ್ನಡ ಭಾಷೆಯ ಅಭಿವೃದ್ಧಿಗೆ ಪೂರಕವಾದ ಕಾನೂನುಗಳನ್ನು ಜಾರಿಗೆ ತರಬೇಕು.

–ರಾಸುಮ ಭಟ್, ಚಿಕ್ಕಮಗಳೂರು

ಜಾತಿಗೆ ಸೀಮಿತವಾದ ಮಹನೀಯರು

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ರಾಜಕೀಯ ನಾಯಕರು ಜನಸಾಮಾನ್ಯರಲ್ಲಿ ಜಾತಿ ವಿಷ ಬೀಜ ಬಿತ್ತುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಒಂದು ಸಂಗತಿ ಎಂದರೆ ಮಹನೀಯರುಗಳಾದ ವಾಲ್ಮೀಕಿ ಮಹರ್ಷಿ, ಪುರಂದರ ದಾಸರು, ಕನಕದಾಸರು, ಮಹಾವೀರರು, ಬಸವಣ್ಣನವರು, ಕೆಂಪೇಗೌಡರು, ಗಾಂಧೀಜಿ, ಡಾ ಬಾಬಾ ಸಾಹೇಬ್ ಅಂಬೇಡ್ಕರ್, ಇನ್ನೂ ಮುಂತಾದವರ ಜಯಂತಿ ಆಚರಿಸುವ ನೆಪದಲ್ಲಿ ಈ ಮಹನೀಯರುಗಳನ್ನು ಒಂದು ಜಾತಿಗೆ ಸೀಮಿತಗೊಳಿಸುತ್ತಿರುವುದು ತುಂಬಾ ದುರದೃಷ್ಟ ಸಂಗತಿ. ನಾಲ್ಕು, ಐದು, ದಶಕಗಳ ಹಿಂದೆ ಯಾವುದೇ ಜಯಂತಿಗಳಿಗೆ ಸರ್ಕಾರಿ ರಜಾ ಇಲ್ಲದೆ ಮಹನೀಯರುಗಳ ಬಗ್ಗೆ ಶಾಲೆಗಳಲ್ಲಿ ಮಕ್ಕಳಿಗೆ ಅವರುಗಳ ಆದರ್ಶದ ಬಗ್ಗೆ ಅರಿವು ಮೂಡಿಸುತ್ತಿದ್ದರು. ಇಂದು ಎಲ್ಲಾ ಜಯಂತಿಗಳಿಗೂ ರಜಾ ಘೋಷಣೆ ಮಾಡಿ ಮಕ್ಕಳಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ ಮತ್ತು ಸರ್ಕಾರಿ ಕಚೇರಿಗಳಲ್ಲಿ ಕೆಲಸಗಳು ಆಗುತ್ತಿಲ್ಲ. ಇನ್ನೂ ಮುಂದಾದರು ರಾಜಕೀಯ ನಾಯಕರು ಹಾಗೂ ಮಠ ಮಾನ್ಯಗಳ ಸ್ವಾಮೀಜಿಗಳು ಚಿಂತನೆ ಮಾಡಿ, ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಮಹನಿಯರುಗಳನ್ನು ಯಾವುದೇ ಜಾತಿಗೆ ಸೀಮಿತಗೊಳಿಸಬಾರದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಗುಜರಾತ್ ಗದ್ದುಗೆ ಮತ್ತೆ ಬಿಜೆಪಿಗೆ ಒಲಿಯುವುದೇ?

ಗುಜರಾತ್‌ನ 182 ಸದಸ್ಯ ಬಲದ ವಿಧಾನಸಭೆಗೆ ಡಿಸೆಂಬರ್ 1 ಮತ್ತು 5ರಂದು ಎರಡು ಹಂತಗಳಲ್ಲಿ ಅನುಕ್ರಮವಾಗಿ 89 ಮತ್ತು 93 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಈಗಾಗಲೇ 89 ಕ್ಷೇತ್ರಗಳ ಫಲಿತಾಂಶ ಮತ ಯಂತ್ರಗಳಲ್ಲಿ ಭದ್ರವಾಗಿದೆ. ಎಲ್ಲಾ ಚುನಾವಣಾ ಪೂರ್ವ ಸಮೀಕ್ಷೆಗಳು ಬಿಜೆಪಿ ಭರ್ಜರಿ ಬಹುಮತದಿಂದ ಮತ್ತೆ ಅಧಿಕಾರಕ್ಕೇರುವುದಾಗಿ ತಿಳಿಸಿವೆ.



ಗುಜರಾತಿನಲ್ಲಿ ಬಿಜೆಪಿಯ ಸಾಧನೆ

ಬಿಜೆಪಿ ಮೊದಲ ಬಾರಿ 1995ರಲ್ಲಿ 121 ಕ್ಷೇತ್ರಗಳಲ್ಲಿ ಗೆಲುವಿನೊಂದಿಗೆ ಅಧಿಕಾರಕ್ಕೇರಿತು. ಗುಜರಾತ್ ಗಲಭೆಗಳ ನಂತರ 2002ರಲ್ಲಿ ನಡೆದ ಚುನಾವಣೆಯಲ್ಲಿ ಮೋದಿ ನೇತೃತ್ವದಲ್ಲಿ 127 ಸ್ಥಾನಗಳಲ್ಲಿ ಗೆಲುವಿನೊಂದಿಗೆ ಭಾರೀ ಸಾಧನೆ ಮಾಡಿತು. ಇದು ಗುಜರಾತಿನಲ್ಲಿ ಬಿಜೆಪಿಯ ಈವರೆಗಿನ ಅತೀ ದೊಡ್ಡ ಗೆಲುವಾಗಿದೆ. ಈ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಸೋನಿಯಾ ಗಾಂಧಿಯವರು ಮೋದಿ ವಿರುದ್ಧ ಬಳಸಿದ ಮೌತ್ ಕಾ ಸೌದಾಗರ್ (ಸಾವಿನ ದಲ್ಲಾಳಿ) ಎಂಬ ಪದಪ್ರಯೋಗ ಬಿಜೆಪಿಗೆ ವರವಾಯಿತು. ಈ ಗೆಲುವಿನ ನಂತರ ಮೋದಿಯವರು ಗುಜರಾತ್ ಬಿಜೆಪಿಯಲ್ಲಿ ಪ್ರಶ್ನಾತೀತ ನಾಯಕರಾದರು. 2007 ಹಾಗೂ 2012ರಲ್ಲಿ ಮೋದಿ ನಾಯಕತ್ವದಲ್ಲಿ 117 ಮತ್ತು 115 ಸ್ಥಾನ ಗಳಿಸಿ ಬಿಜೆಪಿ ಅಧಿಕಾರದಲ್ಲಿ ಮುಂದುವರೆಯಿತು. 2017ರಲ್ಲಿ ಚುನಾವಣೆಯಲ್ಲಿ ಬಿಜೆಪಿಗೆ ಪ್ರಬಲ ಸ್ಪರ್ಧೆ ನೀಡಿದ ಕಾಂಗ್ರೆಸ್ ಒಂದು ಹಂತದಲ್ಲಿ ಬಹುಮತ ಗಳಿಸುವಷ್ಟು ಮುನ್ನಡೆ ಸಾಧಿಸಿತ್ತು. ಬಿಜೆಪಿಗೆ ಭಾರೀ ಪ್ರಮಾಣದಲ್ಲಿ ಆಡಳಿತ ವಿರೋಧಿ ಅಲೆ ಎದುರಾಗಿತ್ತು. ಇದರೊಂದಿಗೆ ಗುಜರಾತ್‌ನ ಪ್ರಬಲ ಪಾಟೀದಾರ್ ಸಮುದಾಯಕ್ಕೆ ಮೀಸಲಾತಿ ನೀಡಲು ಆಗ್ರಹಿಸಿ ಹಾರ್ದಿಕ್ ಪಟೇಲ್, ಓಬಿಸಿ (ಇತರ ಹಿಂದುಳಿದ ವರ್ಗಗಳು)ಗಳ ಮೀಸಲಾತಿ ಪ್ರಮಾಣ ಯಥಾಸ್ಥಿತಿಗಾಗಿ ಅಲ್ಪೇಶ್ ಠಾಕೋರ್, ಪರಿಶಿಷ್ಟ ಜಾತಿ/ಪಂಗಡಗಳಿಗಾಗಿ ಜಿಗ್ನೇಶ್ ಮೇವಾನಿ ಇವರೆಲ್ಲ ನಡೆಸಿದ ಹೋರಾಟಗಳು. ತದನಂತರ ಚುನಾವಣೆ ವೇಳೆ ಇವರು ಕಾಂಗ್ರೆಸ್ ಸೇರಿದ್ದು ಒಂದು ಹಂತದಲ್ಲಿ ಬಿಜೆಪಿಯ ಹಾದಿಯನ್ನು ಕಠಿಣಗೊಳಿಸಿತು. ಈ ಚುನಾವಣೆಯಲ್ಲಿ ಸೋತಲ್ಲಿ ತನಗೆ ಮುಖಭಂಗವಾಗುವುದೆಂದು ಅರಿತ ಮೋದಿಯವರು ಪ್ರಚಾರದ ನೇತೃತ್ವವನ್ನು ಸ್ವತಃ ತಾವೇ ವಹಿಸಿಕೊಂಡು, ಚುನಾವಣಾ ಕಣದಲ್ಲಿ ಕಹಳೆ ಮೊಳಗಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕ ಮಣಿಶಂಕರ್ ಅಯ್ಯರ್ ಅವರು ಪ್ರಧಾನಿ ಮೋದಿಯವರ ವಿರುದ್ಧ ಬಳಸಿದ ಅಪಮಾನಕಾರಿ ಶಬ್ಧಗಳು ಚುನಾವಣಾ ಫಲಿತಾಂಶವನ್ನು ಬದಲಾಯಿಸಿತು. ಬಿಜೆಪಿ ಪ್ರಯಾಸದಿಂದ 99 ಸ್ಥಾನಗಳಲ್ಲಿ ಜಯ ಸಾಧಿಸಿ ಅಧಿಕಾರ ಉಳಿಸಿಕೊಂಡರೆ, ಕಾಂಗ್ರೆಸ್ 77 ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

ನಾಯಕರಿಲ್ಲದೇ ದುರ್ಬಲವಾಗಿರುವ ಕಾಂಗ್ರೆಸ್

1985ರಲ್ಲಿ ಮಾಧವ ಸಿನ್ಹ ಸೋಲಂಕಿ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಗಳಿಸಿದ 149 ಸ್ಥಾನಗಳು ಇದುವರೆಗೆ ದಾಖಲೆಯಾಗಿ ಉಳಿದಿದೆ. ಪ್ರಸ್ತುತ ಕಾಂಗ್ರೆಸ್ ಗುಜರಾತ್‌ನಲ್ಲಿ ವರ್ಚಸ್ವಿ ನಾಯಕರಿಲ್ಲದೇ, ಸಂಘಟನೆ ಇಲ್ಲದೇ ದುರ್ಬಲಗೊಂಡಿದೆ. ಆ ರಾಜ್ಯದ ಪ್ರಬಲ ನಾಯಕರು, ಗಾಂಧಿ ಪರಿವಾರಕ್ಕೆ ಅತ್ಯಾಪ್ತರು. ಚುನಾವಣಾ ತಂತ್ರಗಾರಿಕೆಯಲ್ಲಿ ಚಾಣಾಕ್ಷರಾಗಿದ್ದ ಅಹ್ಮದ್ ಪಟೇಲ್ ನಿಧನಾ ನಂತರ ಕಾಂಗ್ರೆಸ್ ದಯನೀಯ ಸ್ಥಿತಿಯಲ್ಲಿದೆ. ಶಂಕರ್ ಸಿಂಘ್ ವಗೇಲಾ ಕಾಂಗ್ರೆಸ್ ತೊರೆದಿದ್ದಾರೆ. ಹಾರ್ದಿಕ ಪಟೇಲ್, ಅಲ್ಪೇಶ್ ಠಾಕೋರ್ ಬಿಜೆಪಿ ಪಾಳೆಯ ಸೇರಿದ್ದಾರೆ. ಸೋನಿಯಾ ಪ್ರಚಾರದಿಂದ ದೂರ ಉಳಿದರೆ, ಗುಜರಾತ್‌ನಲ್ಲಿ ಸೋಲು ನಿಶ್ಚಯವೆಂದು ಪ್ರಾಯಶಃ ಭಾವಿಸಿರುವ ರಾಹುಲ್ ಗಾಂಧಿಯವರು ತೀರಾ ಇತ್ತೀಚೆಗೆ ಚುನಾವಣಾ ಪ್ರಚಾರ ಪ್ರಾರಂಭಿಸಿದ್ದಾರೆ. ಪ್ರಚಾರ ಭಾಷಣಗಳಲ್ಲೂ ಗುಜರಾತ್‌ನ ಅಭಿವೃದ್ಧಿಗಿಂತ ಹೆಚ್ಚಾಗಿ ಕೇವಲ ಪ್ರಧಾನಿ ಮೋದಿಯವರನ್ನು ಟೀಕಿಸುವುದು, ಸ್ವಾತಂತ್ರ್ಯ ಹೋರಾಟದ ಸೇನಾನಿ ವೀರ ಸಾವರ್ಕರ್‌ರ ಚಾರಿತ್ರ್ಯ ಹನನ ಮಾಡುತ್ತಿರುವುದು ಗುಜರಾತಿನ ಕಾಂಗ್ರೆಸ್ ನಾಯಕರು, ಕಾರ್ಯಕರ್ತರಲ್ಲಿ ತೀವ್ರ ಅಸಮಾಧಾನ ಉಂಟು ಮಾಡಿದೆ. ಗುಜರಾತ್ ಕಾಂಗ್ರೆಸ್‌ನ ಹಿರಿಯ ನಾಯಕ ಮಧುಸೂದನ ಮಿಸ್ತ್ರಿಯವರು ಪ್ರಧಾನಿ ಮೋದಿಯವರ ಯೋಗ್ಯತೆ ಏನೆಂದು ತಿಳಿಸುವುದಾಗಿ ನೀಡಿರುವ ಹೇಳಿಕೆಯೂ ಕಾಂಗ್ರೆಸ್‌ಗೆ ಇನ್ನೂ ಹೆಚ್ಚಿನ ಸಂಕಷ್ಟ ತಂದಿದೆ.

ದಿಲ್ಲಿ ನಾಯಕರು ಚುನಾವಣಾ ಟಿಕೆಟ್‌ನ್ನು 1 ಕೋಟಿ ರೂ.ಗೆ ಮಾರಾಟ ಮಾಡುವ ದಂಧೆಯಲ್ಲಿ ಮಗ್ನರಾಗಿದ್ದಾರೆಂದು ಆರೋಪಿಸಿ ದಹೇಗಾಂವ್‌ನ ಮಾಜಿ ಶಾಸಕ ಕಾಮಿನಿ ಬೆನ್ ರಾಥೋಡ್ ಬಿಜೆಪಿ ಸೇರಿದ್ದಾರೆ. ಆಮ್ ಆದ್ಮಿ ಪಾರ್ಟಿಯು ಪೂರ್ಣ ಪ್ರಮಾಣದಲ್ಲಿ ಗುಜರಾತ್ ಚುನಾವಣಾ ಅಖಾಡಕ್ಕೆ ಧುಮುಕಿರುವುದು ಕಾಂಗ್ರೆಸ್‌ಗೆ ಹೊಡೆತ ನೀಡಲಿದೆ ಎಂದು ಸಮೀಕ್ಷೆಗಳು ತಿಳಿಸಿವೆ. ಈ ಎಲ್ಲ ಕಾರಣಗಳಿಂದ ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ 31 ರಿಂದ 39 ಸ್ಥಾನ ಗಳಿಸಿ ಅವಮಾನಕಾರಿ ಸೋಲು ಅನುಭವಿಸಲಿದೆಯೆಂದು ಎಲ್ಲ ಸಮೀಕ್ಷೆಗಳು ಹೇಳಿವೆ.

> ❝ ಬಿಜೆಪಿ ನಿಂತ ನೀರಾಗಬಾರದು. ಹೊಸ ರಕ್ತ, ಹೊಸ ಮುಖಗಳು, ಯುವಕರಿಗೆ ಆದ್ಯತೆ ನೀಡುವ ಉದ್ದೇಶದಿಂದ ಶೇ.20ರಷ್ಟು ಹೊಸಬರಿಗೆ ಟಿಕೆಟ್ ನೀಡಲಾಗಿದೆ. ಪಕ್ಷದ ಸಂಘಟನೆ ಬಲವಾಗಿರುವುದರಿಂದ ಟಿಕೆಟ್ ಸಿಗದವರು ನೀಡಬಹುದಾದ ಒಳ ಏಟು ಪಕ್ಷದ ವಿಜಯದ ಮೇಲೆ ಪರಿಣಾಮ ಬೀರದೆಂಬ ಅತೀವ ವಿಶ್ವಾಸ ಬಿಜೆಪಿ ನಾಯಕರಲ್ಲಿದೆ.

ಆಮ್ ಆದ್ಮಿ ಪಾರ್ಟಿಯ (ಆಪ್) ಆರ್ಭಟ

ಆಮ್ ಆದ್ಮಿ ಪಾರ್ಟಿಯು ಈ ಬಾರಿ ಪೂರ್ಣಶಕ್ತಿಯೊಂದಿಗೆ ಗುಜರಾತ್ ಚುನಾವಣಾ ಕಣಕ್ಕೆ ಧುಮುಕಿದೆ. ಅರವಿಂದ ಕೇಜ್ರಿವಾಲರು ತನ್ನ ಎದುರಾಳಿ ಕಾಂಗ್ರೆಸ್ ಬದಲು ಬಿಜೆಪಿಯಾಗಿದ್ದು, ಈ ಬಾರಿ ಸೋಲಿಸಿ ಅಧಿಕಾರ ಪಡೆಯುವುದಾಗಿ ಆರಂಭದಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ದುರ್ಬಲವಾಗಿ ಉಂಟಾಗಿರುವ ಶೂನ್ಯವನ್ನು ಭಾಗಶಃ ತುಂಬಲು ಕೇಜ್ರಿವಾಲ್ ಯಶಸ್ವಿಯಾಗಬಹುದು. ಆರ್ಥಿಕವಾಗಿ ಸಶಕ್ತರಾಗಿರುವ, ರಾಜಕೀಯವಾಗಿ ಪ್ರಬುದ್ಧರಾಗಿರುವ ಗುಜರಾತಿಗಳ ವಿಶ್ವಾಸ ಗೆಲ್ಲುವಲ್ಲಿ ಕೇಜ್ರಿವಾಲ್ ಇದುವರೆಗೆ ಸಫಲರಾಗಿಲ್ಲ. ಉಚಿತಗಳ ಆಶ್ವಾಸನೆ ಗುಜರಾತಿಗಳ ಮೇಲೆ ಭಾರೀ ಪರಿಣಾಮವನ್ನೇನೂ ಬೀರಿಲ್ಲ. ಇದನ್ನರಿತ ಕೇಜ್ರಿವಾಲರು ತಾನು ಮೋದಿಯವರಿಗಿಂತ ಹೆಚ್ಚು ಹಿಂದುತ್ವ ನಿಷ್ಠ ಎಂದು ಗುಜರಾತಿಗಳನ್ನು ನಂಬಿಸಲು ಪ್ರಾರಂಭಿಸಿದರು. ದೇವಸ್ಥಾನಗಳಿಗೆ ಭೇಟಿ, ಸಭೆಗಳಲ್ಲಿ ಹನುಮಾನ್ ಚಾಲೀಸ ಪಠಣ, ಅಧಿಕಾರಕ್ಕೆ ಬಂದಲ್ಲಿ ಉಚಿತ ಅಯೋಧ್ಯಾ ಯಾತ್ರೆ, ದೇಶದ ಕರೆನ್ಸಿಗಳಲ್ಲಿ ಗಣೇಶ, ಲಕ್ಷ್ಮೀ ದೇವರ ಚಿತ್ರಗಳನ್ನು ಮುದ್ರಿಸಬೇಕೆಂದು ಆಗ್ರಹ. ಇಂತಹ ಅನೇಕ ಗಿಮಿಕ್‌ಗಳನ್ನು ಮಾಡಿದರೂ ಯಾವುದೂ ಪರಿಣಾಮ ಬೀರಿಲ್ಲ. ಇದೇ ಕೇಜ್ರಿವಾಲ್ ಹಿಂದೆ ಅಯೋಧ್ಯೆಯಲ್ಲಿ ರಾಮಮಂದಿರದ ಬದಲು ಅಲ್ಲಿ ಆಸ್ಪತ್ರೆ ನಿರ್ಮಿಸಬೇಕೆಂದು ಹೇಳಿದ್ದನ್ನು ಜನತೆ ನೆನಪಿಸಲು ಪ್ರಾರಂಭಿಸಿದರು. ಇತ್ತೀಚೆಗೆ ದಿಲ್ಲಿಯ ಕೇಜ್ರಿವಾಲ್ ಸಂಪುಟದ ಸಚಿವ ರಾಜೇಂದ್ರ ಪಾಲ್ ಗೌತಮ್ ಹತ್ತು ಸಾವಿರದಷ್ಟು ಹಿಂದುಗಳನ್ನು ಬೌದ್ಧ ಮತಕ್ಕೆ ಮತಾಂತರಿಸುವ ಕಾರ್ಯಕ್ರಮದಲ್ಲಿ ಬಹಿರಂಗವಾಗಿ ಬ್ರಹ್ಮ, ವಿಷ್ಣು, ಮಹೇಶ್ವರ ದೇವರಲ್ಲಿ ರಾಮ, ಕೃಷ್ಣರು ದೇವರಲ್ಲ. ಇವರನ್ನು ಯಾರೂ ಪೂಜಿಸಬೇಡಿ ಎಂದು ಆಗ್ರಹಿಸಿದ್ದರು. ಅದೇ ರೀತಿ ಗುಜರಾತ್ ಆಪ್ ರಾಜ್ಯಾಧ್ಯಕ್ಷರಾದ ಗೋಪಾಲ್ ಇಟಾಲಿಯಾ ಕೂಡಾ ಸತ್ಯನಾರಾಯಣ ಸ್ವಾಮಿ ದೇವರಲ್ಲ, ವ್ರತವನ್ನು ಮಾಡಬೇಡಿ. ಶ್ರೀ ಕೃಷ್ಣ ದೇವರೇ ಅಲ್ಲ. ಭಾಗವತ ಓದಬೇಡಿ ಎಂದಿರುವ ವೀಡಿಯೋ ಗುಜರಾತ್‌ನಲ್ಲಿ ಭಾರೀ ಪ್ರಮಾಣದಲ್ಲಿ ವೈರಲ್ ಆಗಿರುವುದು ಕೇಜ್ರಿವಾಲರಿಗೆ ಭಾರೀ ಹಿನ್ನಡೆ ಉಂಟು ಮಾಡಿದೆ. ಇವುಗಳನ್ನು ಮೀರಿ ಸ್ವತಃ ಕೇಜ್ರಿವಾಲರು ಒಂದು ಪ್ರಚಾರ ಸಭೆಯಲ್ಲಿ ತಾನು ಗೋಕುಲಾಷ್ಟಮಿಯಂದು ಹುಟ್ಟಿದ್ದರಿಂದ ಕೃಷ್ಣನ ಅವತಾರವಾಗಿದ್ದು ಗುಜರಾತಿನ ಕಂಸನನ್ನು ನಾಶ ಮಾಡಲು ಬಂದಿರುತ್ತೇವೆಂದು ಹೇಳಿಕೆ ನೀಡಿದ್ದರು. ಪ್ರಧಾನಿ ಮೋದಿಯವರನ್ನು ತಮ್ಮ ಮನೆಯ ಸದಸ್ಯರೆಂದು ಭಾವಿಸಿರುವ ಗುಜರಾತಿಗಳು ಕೇಜ್ರಿವಾಲ್‌ರ ಈ ಹೇಳಿಕೆಯಿಂದ ತೀವ್ರ ಆಕ್ರೋಶಗೊಂಡಿದ್ದಾರೆ. ಈ ಹೇಳಿಕೆಯಿಂದಾಗಿ ಕೇಜ್ರಿವಾಲರ ಆಪ್‌ಗೆ ಸಿಗಬಹುದೆಂದು ಭಾವಿಸಲಾದ ಬೆರಳೆಣಿಕೆಯ ಕ್ಷೇತ್ರಗಳು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಾಗಿದೆ. ಆದರೆ ಕೇಜ್ರಿವಾಲರ ಆಪ್ ಸ್ಪರ್ಧೆಯು ಕಾಂಗ್ರೆಸ್‌ಗೆ ಭಾರೀ ಹೊಡೆತ ನೀಡಲಿದ್ದು, ಮೂವತ್ತಕ್ಕೂ ಹೆಚ್ಚು ಹಾಲಿ ಸ್ಥಾನಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದೆಯೆಂದು ಸಮೀಕ್ಷೆಗಳು ತಿಳಿಸಿವೆ.

ಮತ್ತೆ ಗೆಲುವಿನ ವಿಶ್ವಾಸದಲ್ಲಿ ಬಿಜೆಪಿ

ಗುಜರಾತ್ ಬಿಜೆಪಿಯ ಭದ್ರಕೋಟೆಯಾಗಿದೆ. ಈ ಬಾರಿ ದಾಖಲೆ ಸಂಖ್ಯೆಯ ಸ್ಥಾನಗಳನ್ನು ಗೆಲ್ಲಲು ಬಿಜೆಪಿ ಪೂರ್ಣಶಕ್ತಿಯೊಂದಿಗೆ ಚುನಾವಣಾ ಕಣಕ್ಕೆ ಇಳಿದಿದೆ. ಗುಜರಾತ್ ಬಿಜೆಪಿಯ ಪ್ರಯೋಗಶಾಲೆಯು ಆಗಿದೆ. ಕಳೆದ ಶಾಸಕತ್ವದ ಅವಧಿಯಲ್ಲಿ ಜನಸಂಪರ್ಕವಿಲ್ಲದ, ಅಭಿವೃದ್ಧಿ ಕಾರ್ಯ ಮಾಡದ, ಕ್ಷೇತ್ರವನ್ನು ತಮ್ಮ ಕೌಟುಂಬಿಕ ಆಸ್ತಿಯೆಂದು ಭಾವಿಸಿರುವ 38 ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿದೆ. ಇತ್ತೀಚಿನ ಮೊರ್ಬಿ ತೂಗು ಸೇತುವೆ ದುರಂತದ ಸಂದರ್ಭದಲ್ಲಿ ಅನೇಕ ಜನರ ಪ್ರಾಣ ಉಳಿಸಿದ ಕಾಂತಿಲಾಲ್ ಅಮೃತಿಯರಿಗೆ ಟಿಕೆಟ್ ನೀಡಿ ಜನರೊಂದಿಗೆ ಸ್ಪಂದಿಸುವವರಿಗೆ ಆದ್ಯತೆ ನೀಡಲಾಗುವುದೆಂಬ ಸಂದೇಶ ನೀಡಲಾಗಿದೆ. ಈ ಮೂಲಕ ಇತರ ರಾಜ್ಯಗಳ ಬಿಜೆಪಿ ಜನಪ್ರತಿನಿಧಿಗಳಿಗೆ ಎಚ್ಚರಿಕೆಯ ಸಂದೇಶ ರವಾನಿಸಲಾಗಿದೆ.

ಬಿಜೆಪಿ ನಿಂತ ನೀರಾಗಬಾರದು. ಹೊಸ ರಕ್ತ, ಹೊಸ ಮುಖಗಳು, ಯುವಕರಿಗೆ ಆದ್ಯತೆ ನೀಡುವ ಉದ್ದೇಶದಿಂದ ಶೇ.20ರಷ್ಟು ಹೊಸಬರಿಗೆ ಟಿಕೆಟ್ ನೀಡಲಾಗಿದೆ. ಪಕ್ಷದ ಸಂಘಟನೆ ಬಲವಾಗಿರುವುದರಿಂದ ಟಿಕೆಟ್ ಸಿಗದವರು ನೀಡಬಹುದಾದ ಒಳ ಏಟು ಪಕ್ಷದ ವಿಜಯದ ಮೇಲೆ ಪರಿಣಾಮ ಬೀರದೆಂಬ ವಿಶ್ವಾಸ ಬಿಜೆಪಿ ನಾಯಕರಲ್ಲಿದೆ.

ಹಾಲಿ ಮುಖ್ಯಮಂತ್ರಿ ಭೂಪೇಂದ್ರ ಪಟೇಲರು ಗುಜರಾತಿನ ಪ್ರಭಾವಿ ಪಾಟೀದಾರ್ ಸಮಾಜದ ಕಡ್ವಾ ಸಮುದಾಯದವರಾಗಿದ್ದಾರೆ. ಇವರು ವರ್ಚಸ್ವಿ ನಾಯಕರಾಗಿರುವುದು ಬಿಜೆಪಿಗೆ ಧನಾತ್ಮಕ ಅಂಶವಾಗಿದೆ. ಬಿಜೆಪಿ ಬಹುಮತ ಗಳಿಸಿದರೆ ಇವರೇ ಮತ್ತೆ ಮುಖ್ಯಮಂತ್ರಿಯಾಗಲಿದ್ದಾರೆ. ಈ ಬಾರಿ ಆಡಳಿತ ವಿರೋಧಿ ಅಲೆ ಇಲ್ಲದಿರುವುದು ಗಮನಾರ್ಹವಾಗಿದೆ. ಪ್ರಧಾನಿ ಮೋದಿ, ಗೃಹ ಮಂತ್ರಿ ಅಮಿತ್ ಶಾ, ಅಧ್ಯಕ್ಷ ಜೆ.ಪಿ ನಡ್ಡಾ, ಯೋಗಿ ಆದಿತ್ಯನಾಥ ಹಾಗೂ ಅನೇಕ ನಾಯಕರು ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ.

ಪ್ರಧಾನಿ ಮೋದಿಯವರು ತಮ್ಮ ಸರಕಾರದ ಸಾಧನೆ ಮತ್ತು ಹಿಂದಿನ ಕಾಂಗ್ರೆಸ್ ದುರಾಡಳಿತವನ್ನು ಮತದಾರರಿಗೆ ಮನವರಿಕೆ ಮಾಡುತ್ತಿದ್ದಾರೆ. ಸುರೇಂದ್ರನಗರದ ರ‍್ಯಾಲಿಯಲ್ಲಿ ಗುಜರಾತ್ ದೇಶದ ಶೇ.80ರಷ್ಟು ಉಪ್ಪನ್ನು ಉತ್ಪಾದಿಸುತ್ತಿದೆ. ಈ ಉಪ್ಪನ್ನು ತಿಂದ ನಂತರವೂ ಕೆಲವು ಗುಜರಾತ್‌ನ್ನು ನಿಂದಿಸುತ್ತಾರೆಂದು ರಾಹುಲ್ ಗಾಂಧಿಯವರನ್ನು ಪರೋಕ್ಷವಾಗಿ ಟೀಕಿಸಿದರು. ಭಾರತ್ ಜೋಡೋ ಯಾತ್ರೆ ಬಗ್ಗೆ ಅಧಿಕಾರದಿಂದ ಹೊರಕ್ಕೆಸೆಯಲ್ಪಟ್ಟವರು ಮತ್ತೆ ಅಧಿಕಾರಕ್ಕೆ ಬರುವ ಯಾತ್ರೆ ಎಂದು ಟೀಕಿಸಿದರು. ತನ್ನ ಕುರಿತಾದ ನಿಂದನೆಗಳನ್ನು ಅಭಿನಂದನೆಯಾಗಿ ಪರಿವರ್ತಿಸಿ ಪ್ರತಿಪಕ್ಷಗಳನ್ನು ಮೌನಗೊಳಿಸುವಲ್ಲಿ ಮೋದಿ ನಿಷ್ಣಾತರಾಗಿದ್ದಾರೆ. ಈ ಬಾರಿ ಮಧುಸೂದನ ಮಿಸ್ತ್ರಿಯವರು ಮೋದಿಯವರಿಗೆ ಅವರ ಯೋಗ್ಯತೆ ಏನೆಂದು ತೋರಿಸುತ್ತೇವೆಂದು ಹೇಳಿದ್ದರು. ಇದಕ್ಕೆ ಪ್ರತಿಯಾಗಿ ಮೋದಿಯವರು ತನಗೆ ಯಾವುದೇ ಸ್ಥಾನಮಾನ ಯೋಗ್ಯತೆ ಇಲ್ಲ. ಮೋದಿ ಕೇವಲ ಜನಸೇವಕ ಎಂದು ತಿರುಗೇಟು ನೀಡಿದ್ದಾರೆ. ತಮ್ಮ ಆಡಳಿತದಲ್ಲಿ ಗುಜರಾತ್ ಭಾರಿ ಅಭಿವೃದ್ಧಿ ಕಂಡರೂ ಮೋದಿ ಅದರ ಶ್ರೇಯಸ್ಸನ್ನು ಕಪ್ರಡಾ ರ‍್ಯಾಲಿಯಲ್ಲಿ ಗುಜರಾತಿಗಳಿಗೆ ನೀಡುತ್ತಾ ಗುಜರಾತಿಗಳು ನಿಷ್ಠೆ, ಪ್ರಾಮಾಣಿಕತೆಯಿಂದ ಒಟ್ಟಾಗಿ ಪರಿಶ್ರಮದಿಂದ ಈ ರಾಜ್ಯ ಕಟ್ಟಿದ್ದಾರೆ ಎಂದು ಪ್ರಶಂಸಿಸಿದರು. ಆ ಗುಜರಾತ್ ಮೈ ಬನಾವು ಛೆ (ನಾನು ಈ ಗುಜರಾತ್ ಕಟ್ಟಿರುವೆ) ಎಂಬ ಮೋದಿಯವರ ಘೋಷಣೆ ಗುಜರಾತಿನಲ್ಲಿ ಭಾರೀ ಜನಪ್ರಿಯತೆ ಗಳಿಸಿದೆ. 2019ರಲ್ಲಿ ಮೋದಿಯವರ ಜನಪ್ರಿಯ ಘೋಷಣೆ ಮೈ ಭೀ ಚೌಕಿದಾರ್‌ನಂತೆ ಈ ಬಾರಿಯ ಆ ಗುಜರಾ ಮೈ ಬನಾವು ಛೇ ಭಾರೀ ಜನಮನ್ನಣೆ ಗಳಿಸಿದೆ. ಎಲ್ಲಾ ಸಮೀಕ್ಷೆಗಳು ಹಾಗೂ ಮೇಲ್ನೋಟಕ್ಕೆ ಬಿಜೆಪಿ ಮತ್ತೆ ಅಧಿಕಾರಕ್ಕೇರುವ ಸಂಭಾವ್ಯತೆ ಹೆಚ್ಚುತ್ತಿದೆ. ಆದರೂ ಈ ಬಾರಿ ಗುಜರಾತಿನ ಗದ್ದುಗೆ ಯಾರಿಗೆ ಎಂದು ತಿಳಿಯಲು ಡಿಸೆಂಬರ್ 8ರವರೆಗೆ ಜನರು ಕಾಯಬೇಕಾಗಿದೆ.

ಮೈಸೂರು ಅರಮನೆ ಆವರಣದ ದೇವಾಲಯಗಳ ಚಿತ್ರಪಟಗಳ ಸಂರಕ್ಷಣಾ ಕಾರ್ಯ ಸ್ಥಗಿತ



ಮೈಸೂರು,ಡಿ.2(ಜಿಎ)–ಮೈಸೂರಿನ ಅರಮನೆ ಆವರಣದಲ್ಲಿರುವ ವರಾಹ ಸ್ವಾಮಿ ಮತ್ತು ಅಂಬುಜವಲ್ಲಿ ಮಹಾಲಕ್ಷ್ಮೀ ದೇವಾಲಯಗಳಲ್ಲಿನ ದೇವರ ಚಿತ್ರಪಟಗಳ ಸಂರಕ್ಷಣೆಯ ಕಾರ್ಯ ಸ್ಥಗಿತಗೊಂಡಿದೆ.

ಅತ್ಯಾಕರ್ಷಕವಾಗಿರುವ 300 ವರ್ಷಗಳ ಚಿತ್ರಪಟಗಳನ್ನು ಸಂರಕ್ಷಣೆ ಮಾಡದೆ, ಎಲ್ಲಾ ಚಿತ್ರಗಳು ಮೂಲ ಸ್ವರೂಪವನ್ನು ಕಳೆದುಕೊಂಡಿದ್ದವು. ಕರ್ನಾಟಕ ಪುರಾತತ್ವ ಇಲಾಖೆ ಇದನ್ನು ಗಮನಿಸಿ, ಅವುಗಳನ್ನು ಸಂರಕ್ಷಿಸುವ ಕಾರ್ಯಕ್ಕೆ ಮುಂದಾಗಿ ಸಾಂಸ್ಕೃತಿಕ ಸಂರಕ್ಷಣೆಗಾಗಿ ಲಕ್ನೋದಲ್ಲಿರುವ ರಾಷ್ಟ್ರೀಯ ಸಂಶೋಧನಾ ಪ್ರಯೋಗಾಲಯಕ್ಕೆ (NRLC) ಈ ಚಿತ್ರಗಳ ಸಂರಕ್ಷಣಾ ಜವಾಬ್ದಾರಿಯನ್ನು ನೀಡಲಾಗಿತ್ತು. ಅದರಂತೆ NRLCನ ಮೈಸೂರಿನ ಶಾಖೆಯಾದ ಪ್ರಾದೇಶಿಕ ಸಂರಕ್ಷಣಾ ಪ್ರಯೋಗಾಲಯದ ತಂಡ ಕಳೆದ ಸೆಪ್ಟೆಂಬರ್‌ನಿಂದಲ್ಲೇ ಚಿತ್ರಪಟಗಳ ಸಂರಕ್ಷಣೆ ಮಾಡುವ ಕಾರ್ಯ ಆರಂಭಿಸಿತ್ತು. ಆದರೆ, ಈಗ ಇದಕ್ಕಿದ್ದಂತೆ ಈ ಕಾರ್ಯ ಸ್ಥಗಿತಗೊಂಡಿದೆ.

ಈ ದೇವಾಲಯಗಳ ಮೂಲ ವಿಗ್ರಹವನ್ನು ಶ್ರೀರಂಗಪಟ್ಟಣದಲ್ಲಿ ಹೊಯ್ಸಳರ ಆಳ್ವಿಕೆ ಕಾಲದಲ್ಲಿ ನಿರ್ಮಾಣ ಮಾಡಲಾಗಿತ್ತು. ನಂತರ ಚಿಕ್ಕ ದೇವರಾಜ ಒಡೆಯರ್ ಕ್ರಿ.ಶ. 1811ರಲ್ಲಿ ವಿಗ್ರಹಗಳನ್ನು ಮೈಸೂರಿಗೆ ತಂದು ಅರಮನೆಯ ಆವರಣದಲ್ಲಿ ದೇವಾಲಯ ಸ್ಥಾಪಿಸಿದ್ದರು. ಟಿಪ್ಪು ಸುಲ್ತಾನ್ ಪತನ ನಂತರ ದಿವಾನ್ ಪೂರ್ಣಯ್ಯನವರು ದೇವಾಲಯದ ಒಳಭಾಗದ ಗೋಡೆಗಳ ಮೇಲೆ ರಾಮಾಯಣ, ಮಹಾಭಾರತ ಕಥೆಯನ್ನು ಸಾರುವ ಚಿತ್ರಗಳನ್ನು ಚಿತ್ರಿಸಿ ದೇವಾಲಯವನ್ನು ಪೂರ್ಣಗೊಳಿಸಿದ್ದರು.

ಸಂರಕ್ಷಣಾ ಜವಾಬ್ದಾರಿ ಹೊತ್ತ NRLCನ ಮೈಸೂರಿನ ಶಾಖೆಯಾದ ಪ್ರಾದೇಶಿಕ ಸಂರಕ್ಷಣಾ ಪ್ರಯೋಗಾಲಯ ತಂಡದ ಹಿರಿಯ ಸಹಾಯಕಿ ಬಿಯಾಸ್ ಘೋಷ್, ಹಿರಿಯ ಸಹಾಯಕ ನೀತಿನ್ ಮೋರ್ಯಾ, ಸುರೇಶ್ ದೀಕ್ಷಿತ್, ಹಾಗೂ ಸಹನ ಎಂಬುವರು 2021ರ ಸೆಪ್ಟೆಂಬರ್‌ನಲ್ಲಿ ಸಂರಕ್ಷಣಾ ಕಾರ್ಯ ಆರಂಭಿಸಿದ್ದರು.

ದೇವಾಲಯದ ಗೋಡೆ, ಮೇಲ್ಛಾವಣಿ, ಕಂಬಗಳು ಹಾಗೂ ಮರದ ಕಪಾಟು ಸೇರಿದಂತೆ ಎಲ್ಲಾ ಭಾಗಗಳಲ್ಲಿ ಚಿತ್ರಪಟಗಳಿದ್ದು, ಅದರಲ್ಲಿ ಚಿತ್ರದ ಕೆಲ ಭಾಗಗಳು ಉದುರಿ ಹೋಗಿದೆ. ಅದರ ಸುತ್ತಲೂ ಸ್ವಚ್ಛಗೊಳಿಸಿ ನಂತರ ಎದ್ದಿರುವ ಚಕ್ಕೆಗಳು ಬೀಳದಂತೆ ಸುಣ್ಣದಿಂದ ಪ್ಲಾಸ್ಟಿಂಗ್ ಮಾಡಿ. ಸಂರಕ್ಷಣೆಯ ಮೊದಲ ಹಂತವಾಗಿ ಈ ಕಾರ್ಯವನ್ನು ಮಾಡಿದ್ದರು.

ಇದು ಮುಗಿದ ನಂತರ ಪ್ರಾಕೃತಿಕ ಬಣ್ಣಗಳನ್ನು ಬಳಸಿ ಹಾಳಾಗಿರುವ ಭಾಗಗಳನ್ನು ಮತ್ತೆ ಚಿತ್ರಿಸಲು ಮುಂದಾಗಿದ್ದರು. ದೇವಾಲಯದ ಮೇಲ್ಛಾವಣಿಯಲ್ಲಿ ರಚಿಸಿರುವ ಚಿತ್ರಗಳು ಸಂಪೂರ್ಣವಾಗಿ ಹಾಳಾಗಿದ್ದವು. ಈಗಾಗಲೇ ಶೇ.50ರಷ್ಟು ಸಂರಕ್ಷಣಾ ಕಾರ್ಯ ಮುಗಿಸಿದ್ದಾರೆ. ಆದರೆ, ಬಾಕಿ ಕಾರ್ಯವನ್ನು ಏಪ್ರಿಲ್ ತಿಂಗಳಿನಿಂದ NRLCನ ಮೈಸೂರಿನ ಶಾಖೆಯಾದ ಪ್ರಾದೇಶಿಕ ಸಂರಕ್ಷಣಾ ಪ್ರಯೋಗಾಲಯದ ತಂಡವು ಮೊಟಕುಗೊಳಿಸಿದ್ದಾರೆ. ಇದಕ್ಕೆ ಸೂಕ್ತ ಕಾರಣ ಇನ್ನೂ ತಿಳಿದುಬಂದಿಲ್ಲ. ಎಲ್ಲವೂ ಸರಿ ಇದ್ದಿದ್ದರೆ, ಸಂಪೂರ್ಣ ದೇವಾಲಯದ ಚಿತ್ರಪಟಗಳ ಸಂರಕ್ಷಣೆ ಕಾರ್ಯ ಮುಕ್ತಾಯ ಹಂತಕ್ಕೆ ತಲುಪುತ್ತಿತು.

ಈ ಸಂಬಂಧ ಪುರಾತತ್ವ ಇಲಾಖೆ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಚಿತ್ರಪಟಗಳ ಸಂರಕ್ಷಣೆಗಾಗಿ ಎನ್‌ಆರ್‌ಎಲ್‌ಸಿ ಅವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು. ಅದಕ್ಕಾಗಿ ಮೊದಲ ಹಂತದಲ್ಲಿ ಅನುದಾನವಾಗಿ 14 ಲಕ್ಷ ರೂ. ನೀಡಲಾಗಿತ್ತು. 2ನೇ ಹಂತದ ಅನುದಾನ 15 ಲಕ್ಷ ರೂ. ನೀಡಬೇಕಿದೆ. ಅವರ ಸಿಬ್ಬಂದಿ ಕೊರತೆ, ಅಲ್ಲಿನ ನಿರ್ದೇಶಕರ ಬದಲಾವಣೆ ಸೇರಿದಂತೆ ಇನ್ನಿತರ ಕಾರಣಗಳಿಂದ ಅವರು ಸಂರಕ್ಷಣಾ ಕಾರ್ಯವನ್ನು ಸ್ಥಗಿತ ಗೊಳಿಸಿದ್ದಾರೆ ಎನ್ನಲಾಗುತ್ತಿದೆ. ಮತ್ತೆ ಕೆಲಸ ಆರಂಭಿಸುವಂತೆ ಎರಡು ಬಾರಿ ಪತ್ರದ ಮೂಲಕ ತಿಳಿಸಲಾಗಿದೆ. ಒಂದು ವಾರ ಬಿಟ್ಟು ಮತ್ತೊಂದು ಪತ್ರ ಬರೆಯಲಾಗುತ್ತದೆ ಎಂದರು.



ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕರಾಗಿ ನೇಮಕಗೊಂಡಿರುವ ಡಾ. ನೀಲಗಿರಿ ತಳವಾರ್ ಅವರನ್ನು ಮೈಸೂರಿನ ಖ್ಯಾತ ಮಧುಮೇಹ ತಜ್ಞ ಡಾ.ವಿ.ಲಕ್ಷ್ಮೀನಾರಾಯಣ್ ಹಾಗೂ ಪುರುಷೋತ್ತಮ ಅಭಿನಂದಿಸಿದರು. ಡಾ.ನೀಲಗಿರಿ ತಳವಾರ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಹಾಗೂ ಪ್ರಸಾರಾಂಗದ ನಿರ್ದೇಶಕರಾಗಿ, ವಿವಿ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಕಲಾ ವಿಭಾಗದ ಡೀನ್ ಆಗಿಯೂ ಕಾರ್ಯನಿರ್ವಹಿಸಿದ್ದರು.

ಮುಸ್ಲಿಂ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಕಾಲೇಜು ಅನಗತ್ಯ

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಅಭಿಮತ

ಮೈಸೂರು, ಡಿ.2– ಮುಸ್ಲಿಂ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಕಾಲೇಜು ಅನಾವಶ್ಯಕ. ಹಾಗೆ ಮಾಡಿದರೆ ಮುಸ್ಲಿಂ ಹೆಣ್ಣು ಮಕ್ಕಳನ್ನು ಸಮಾಜದ ಮುಖ್ಯವಾಹಿನಿಯಿಂದ ಬೇರ್ಪಡಿಸಿದಂತಾಗುತ್ತದೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಅಭಿಪ್ರಾಯಿಸಿದ್ದಾರೆ.



ಹಿಜಾಬ್ ನೆಪದಲ್ಲಿ ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣವನ್ನು ಕಸಿಯುವ ಷಡ್ಯಂತ್ರ ನಡೆಸಿದ ಸರ್ಕಾರ, ಚುನಾವಣೆ ಹೊಸ್ತಿಲಲ್ಲಿ ಮುಸ್ಲಿಂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ 10 ಕಾಲೇಜು ಸ್ಥಾಪಿಸುವುದಾಗಿ ಓಲೈಕೆ ರಾಜಕಾರಣಕ್ಕೆ ಮುಂದಾಗಿದೆ. ಪ್ರತ್ಯೇಕ ಕಾಲೇಜು ಅನಾವಶ್ಯಕವಾಗಿದ್ದು, ಇದರಿಂದ ಅವರು ಮುಖ್ಯವಾಹಿನಿಯಿಂದ ಬೇರ್ಪಡುತ್ತಾರೆ. ಪ್ರತಿ ಕಾಲೇಜಿಗೆ ಎರಡೂವರೆ ಕೋಟಿಯಂತೆ ವಕ್ಫ್ ಬೋರ್ಡ್ ಹಣವನ್ನು ಬಳಸಿಕೊಳ್ಳುವ ಉದ್ದೇಶವಿದೆ ಎನ್ನಲಾಗಿದೆ. ಈ ಹಣವನ್ನು ನಿಗದಿತ ಉದ್ದೇಶಗಳಿಗೆ ಮಾತ್ರ ಬಳಸಬೇಕು. ಮುಸ್ಲಿಂ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಕಾಲೇಜು ಮಾಡಲೇಬೇಕು ಎನ್ನುವ ಹಠವಿದ್ದರೆ ಅದಕ್ಕೆ ಪ್ರತ್ಯೇಕ ಅನುದಾನ ನೀಡಲಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪರಿಗೆ ಅಂತರರಾಷ್ಟ್ರೀಯ ಫೆಲೋಶಿಪ್

ವಿಜ್ಞಾನಕ್ಕೆ ನೀಡಿದ ಕೊಡುಗೆ ಪರಿಗಣಿಸಿ ಈ ವಿಶ್ವ ಮನ್ನಣೆ

ಮೈಸೂರು, ಡಿ.29(ಎಂಟಿವೈ)–ವಿಜ್ಞಾನ ಕ್ಷೇತ್ರದಲ್ಲಿನ ಕಳೆದ 40 ವರ್ಷಗಳ ಸೇವೆಯನ್ನು ಪರಿಗಣಿಸಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ಅವರಿಗೆ ಯುನೆಸ್ಕೋ ಅಂಗ ಸಂಸ್ಥೆಯಾದ ದಿ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸಸ್ (TWAS) ಈ ಸಾಲಿನ ಫೆಲೋಶಿಪ್ ನೀಡಿದೆ.



ಮೈಸೂರು ವಿಶ್ವವಿದ್ಯಾಲಯದ ವಿಜ್ಞಾನ ಭವನದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರೊ. ಕೆ.ಎಸ್.ರಂಗಪ್ಪ, ಈ ವಿಚಾರವನ್ನು ತಿಳಿಸಿ, 2022ನೇ ಸಾಲಿನ TWAS ಫೆಲೋಶಿಪ್ ಪಡೆದ ಏಕೈಕ ಭಾರತೀಯ ನಾನಾಗಿರುವುದಕ್ಕೆ ಹೆಮ್ಮೆಯಾಗುತ್ತಿದೆ ಎಂದರು. ಈ ಫೆಲೋಶಿಪ್‌ನಿಂದಾಗಿ ತನಗೆ ಮತ್ತೊಂದು ಅಂತರರಾಷ್ಟ್ರೀಯ ಮನ್ನಣೆ ಲಭಿಸುವುದರೊಂದಿಗೆ ಜವಾಬ್ದಾರಿ ಹೆಚ್ಚಾಗಿದೆ. ಇದರಿಂದಾಗಿ ಕನ್ನಡ ನಾಡಿನ ಅದರಲ್ಲೂ ಮೈಸೂರಿನ ಯುವ ವಿಜ್ಞಾನಿಗಳನ್ನು ಉನ್ನತ ಅಧ್ಯಯನಕ್ಕೆ ವಿವಿಧೆಡೆ ಕಳುಹಿಸಲು ಶಿಫಾರಸ್ಸು ಮಾಡುವ ಅವಕಾಶವೂ ನನಗೆ ಲಭಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಅಭಿವೃದ್ಧಿಶೀಲ ರಾಷ್ಟ್ರಗಳು ಎದುರಿಸುತ್ತಿರುವ ಪ್ರಮುಖ ಸವಾಲುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ವೈಜ್ಞಾನಿಕ ಸಂಶೋಧನೆ ನಡೆಸಲು ಈ ಫೆಲೋಶಿಪ್ ಸಹಕಾರಿಯಾಗಿದೆ. ಈ ಫೆಲೋಶಿಪ್ ಪಡೆದಿರುವುದರಿಂದ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹತ್ತರ ವಿಚಾರ ವಿನಿಮಯಕ್ಕೆ ಅವಕಾಶ ದೊರೆತಂತಾಗಿದೆ ಎಂದು ಪ್ರೊ. ರಂಗಪ್ಪ ಹೇಳಿದರು.

ಕರ್ನಾಟಕದ ವಿಶ್ವವಿದ್ಯಾಲಯಗಳಿಂದ TWAS ಫೆಲೋಶಿಪ್ ಪಡೆದಿರುವ ಮೊದಲಿಗರು ಎಂಬ ಹಿರಿಮೆಗೆ ಪ್ರೊ. ಕೆ.ಎಸ್.ರಂಗಪ್ಪ ಭಾಜನರಾಗಿದ್ದಾರೆ. ಅವರು 550ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಪತ್ರಿಕೆಗಳು ಹಾಗೂ 11 ಪೇಟೆಂಟ್‌ಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ 2 ಪೇಟೆಂಟ್‌ಗಳು ವಾಣಿಜ್ಯೀಕರಣಗೊಳಿಸಲಾಗಿದೆ. ಈ ಸಾಲಿನ ಫೆಲೋಶಿಪ್‌ಗೆ ಆಯ್ಕೆ ಮಾಡಲು ನೇಮಿಸಿದ್ದ 16 ದೇಶಗಳ ಪ್ರತಿನಿಧಿಗಳಿದ್ದ ಸಮಿತಿಯು ರಂಗಪ್ಪ ಅವರ ಎಲ್ಲಾ ವೈಜ್ಞಾನಿಕ ರುಜುವಾತುಗಳನ್ನು ಪರಿಗಣಿಸಿಯೇ ಅವರನ್ನು ಆಯ್ಕೆ ಮಾಡಿದೆ. ಪ್ರೊ ರಂಗಪ್ಪ ಅವರು ತಮ್ಮ ಹೆಸರಿನ ಮುಂದೆ FTWAS ಅಕ್ಷರಗಳನ್ನು ಬಳಸಲು ಅರ್ಹರಾಗಿದ್ದಾರೆ. 'ವಿಜ್ಞಾನಕ್ಕೆ ನಿಮ್ಮ ಅತ್ಯುತ್ತಮ ಕೊಡುಗೆ ಮತ್ತು ಅಭಿವೃದ್ಧಿಶೀಲ ಜಗತ್ತಿನಲ್ಲಿ ಅದರ ಪ್ರಚಾರಕ್ಕೆ ಸ್ಪಷ್ಟವಾದ ಮನ್ನಣೆ ದೊರೆತಿದೆ. ನಮ್ಮ ಸದಸ್ಯರಲ್ಲಿ ನಿಮ್ಮನ್ನು ಹೊಂದಲು ಹೆಮ್ಮೆ ಪಡುತ್ತೇವೆ' ಎಂದು ರಂಗಪ್ಪ ಅವರಿಗೆ ಬರೆದಿರುವ ಪತ್ರದಲ್ಲಿ TWAS ಅಧ್ಯಕ್ಷ ಪ್ರೊ. ಮಹಮ್ಮದ್ ಹೆಚ್.ಎ.ಹಸನ್ ತಿಳಿಸಿದ್ದಾರೆ.

TWAS ಬಗ್ಗೆ ಹೇಳುವುದಾದರೆ 1983ರಲ್ಲಿ ಈ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿರುವ ಪ್ರಪಂಚದ ವಿಜ್ಞಾನಿಗಳ ಒಂದು ವಿಶಿಷ್ಟ ಗುಂಪಿನಿಂದ ಸ್ಥಾಪಿಸಲಾಯಿತು. TWAS 1296 ಚುನಾಯಿತ ಫೆಲೋಗಳನ್ನು ಹೊಂದಿದೆ. ವಿಶ್ವದ ಅತ್ಯಂತ ನಿಪುಣ ವಿಜ್ಞಾನಿಗಳು ನೂರಕ್ಕೂ ಹೆಚ್ಚು ದೇಶಗಳನ್ನು ಪ್ರತಿನಿಧಿಸುತ್ತಿದ್ದಾರೆ. ಅವರಲ್ಲಿ 11 ಮಂದಿ ನೋಬೆಲ್ ಪ್ರಶಸ್ತಿ ಪುರಸ್ಕೃತರು. ಅಭಿವೃದ್ಧಿಶೀಲ ರಾಷ್ಟ್ರಗಳು ಎದುರಿಸುತ್ತಿರುವ ಪ್ರಮುಖ ಸವಾಲುಗಳನ್ನು ಪರಿಹರಿಸುವಲ್ಲಿ ವೈಜ್ಞಾನಿಕ ಸಂಶೋಧನೆಯನ್ನು ಉತ್ತೇಜಿಸುವ ಉದ್ದೇಶವನ್ನು TWAS ಹೊಂದಿದೆ. ಈ ಸಂಸ್ಥೆಯ ಪ್ರಧಾನ ಕಚೇರಿಯು ಇಟಲಿಯ ಟ್ರೈಸ್ಟೆಯಲ್ಲಿದೆ. ಇದು ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ (ಯುನೆಸ್ಕೊ) ಕಾರ್ಯಕ್ರಮ ಘಟಕವಾಗಿದೆ.

ಶಾಸಕ ಸಾ.ರಾ.ಮಹೇಶ್ ಕುರಿತು ಅವಹೇಳನ ಕಾಮೆಂಟ್; ಪ್ರಕರಣ ದಾಖಲು

ಮೈಸೂರು, ಡಿ.2–ಫೇಸ್‌ಬುಕ್ ಪೋಸ್ಟ್‌ವೊಂದರಲ್ಲಿ ಕೆ.ಆರ್.ನಗರ ಶಾಸಕ ಸಾ.ರಾ.ಮಹೇಶ್ ಅವರ ಬಗ್ಗೆ ಅವಹೇಳನಕಾರಿ ಕಾಮೆಂಟ್ ಮಾಡಿದ ಆರೋಪದ ಮೇರೆಗೆ ವ್ಯಕ್ತಿಯೋರ್ವನ ವಿರುದ್ಧ ಪ್ರಕರಣ ದಾಖಲಾಗಿದೆ.


ಸಾ.ರಾ.ಮಹೇಶ್ ಅಭಿಮಾನಿಯಾದ ರಾಕೇಶ್ ಕೆ.ಎಸ್.ರಮೇಶ್ ಎಂಬುವರು ಫೇಸ್‌ಬುಕ್‌ನ ತಮ್ಮ ಪೇಜಿನಲ್ಲಿ '2023ರಲ್ಲಿ ಸಾ.ರಾ.ಮಹೇಶ್ ಅಣ್ಣನವರು ಜಯಶೀಲರಾಗಬೇಕು' ಎಂದು ವೀಡಿಯೋ ಪೋಸ್ಟ್ ಮಾಡಿದ್ದರು. ಈ ಪೋಸ್ಟ್‌ಗೆ ಮೂಲತಃ ಕೆ.ಆರ್.ನಗರ ತಾಲೂಕು ದೊಡ್ಡಕೊಪ್ಪಲು ಗ್ರಾಮದವರಾಗಿದ್ದು, ಹಾಲಿ ಬೆಂಗಳೂರಿನಲ್ಲಿ ವಾಸವಿರುವ ಡಿ.ಎಸ್.ಮಹೇಶ್ ಎಂಬಾತ ಅವಹೇಳನಕಾರಿಯಾಗಿ ಕಾಮೆಂಟ್ ಮಾಡಿದ್ದಾನೆ ಎಂದು ಕೆ.ಆರ್.ನಗರ ಟೌನ್ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ರುದ್ರೇಶ್ ಅವರು ನೀಡಿದ ದೂರನ್ನು ನ್ಯಾಯಾಲಯದ ಅನುಮತಿ ಪಡೆದು ಭಾರತೀಯ ದಂಡ ಸಂಹಿತೆ 507ರಡಿ ಪ್ರಕರಣ ದಾಖಲಿಸಿ ಕೊಂಡಿರುವ ಕೆ.ಆರ್.ನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಜೆಡಿಎಸ್ ಪಂಚರತ್ನ ಯಾತ್ರೆ: ಕಾಂಗ್ರೆಸ್, ಬಿಜೆಪಿಯಲ್ಲಿ ತಲ್ಲಣ

● ಹಳೇ ಮೈಸೂರು ಭಾಗದಲ್ಲಿ ಜೆಡಿಎಸ್ ಪ್ರಾಬಲ್ಯ ಮುಂದುವರಿಕೆ ● ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳ ವಿಚಾರದಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಘೋಷಣೆಯಿಂದ ಕೈ, ಕಮಲ ಗಲಿಬಿಲಿ ● ತಮ್ಮ ತಮ್ಮ ಮತಬುಟ್ಟಿ ಉಳಿಸಿಕೊಳ್ಳಲು ರಾಷ್ಟ್ರೀಯ ಪಕ್ಷಗಳ ಕಸರತ್ತು

ಬೆಂಗಳೂರು, ಡಿ.2(ಕೆಎಂಶಿ)–ಜಾತ್ಯಾತೀತ ಜನತಾದಳದ ಪಂಚರತ್ನ ರಥಯಾತ್ರೆಯ ಯಶಸ್ಸು ಕಾಂಗ್ರೆಸ್ ಹಾಗೂ ಬಿಜೆಪಿ ರಾಷ್ಟ್ರೀಯ ಪಕ್ಷಗಳಲ್ಲಿ ತಲ್ಲಣವುಂಟು ಮಾಡಿದೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಬೀಗುತ್ತಿರುವ ಸಂದರ್ಭದಲ್ಲೇ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮೊದಲ ಹಂತದಲ್ಲೇ ನಡೆಸುತ್ತಿರುವ ರೋಡ್ ಶೋಗೆ ದೊರೆಯುತ್ತಿರುವ ಜನಸ್ಪಂದನೆಯು ರಾಷ್ಟ್ರೀಯ ಪಕ್ಷದ ನಾಯಕರುಗಳಿಗೆ ಇರಿಸುಮುರಿಸು ತಂದಿದೆ.



ಎರಡೂ ರಾಷ್ಟ್ರೀಯ ಪಕ್ಷಗಳು ಜೆಡಿಎಸ್ ಅನ್ನು ಕಡೆಗಣಿಸಿದ್ದಲ್ಲದೆ, ಆ ಪಕ್ಷದ ಕೆಲವು ಪ್ರಭಾವಿ ಮತ್ತು ವರ್ಚಸ್ಸುಳ್ಳ ನಾಯಕರನ್ನು ಸೆಳೆದುಕೊಳ್ಳಲು ನಿರಂತರ ಪ್ರಯತ್ನ ನಡೆಸಿದ್ದವು. ಅದರಲ್ಲಿ ಕಾಂಗ್ರೆಸ್ ದೊಡ್ಡ ಪ್ರಯತ್ನಕ್ಕೆ ಮುಂದಾಗಿತ್ತು. ಈ ಮಧ್ಯೆ ಜೆಡಿಎಸ್‌ನ ಕೆಲವು ನಾಯಕರು ಅನ್ಯ ಪಕ್ಷಗಳಿಗೆ ಜಿಗಿಯಲು ಮುಂದಾಗಿದ್ದರು. ಆದರೆ ಕುಮಾರಸ್ವಾಮಿ ಕೋಲಾರದ ಮುಳಬಾಗಿಲಿನಿಂದ ಆರಂಭವಾದ ಪಂಚರತ್ನ ರಥಯಾತ್ರೆ ಹಗಲು ಇರುಳು ಎನ್ನದೇ ಸಾಗುತ್ತಿದ್ದು, ಯಾತ್ರೆಗೆ ದೊರೆಯುತ್ತಿರುವ ಜನಬೆಂಬಲ ಜಿಗಿಯಲು ಮುಂದಾಗಿದ್ದವರು ಹಿಂದೆ ಸರಿಯುವಂತೆ ಮಾಡಿದೆ.

ಕುಮಾರಸ್ವಾಮಿ ರೋಡ್ ಶೋ ಯಶಸ್ಸು, ಬಿಜೆಪಿ ನಾಯಕರಲ್ಲಿ ಯಾರ ಮತ ಬುಟ್ಟಿಗೆ ಕೈ ಹಾಕಿದ್ದಾರೆ ಎಂಬ ಗಂಭೀರ ಚರ್ಚೆ ನಡೆದಿದೆ ಆರ್‌ಎಸ್‌ಎಸ್ ಮುಖಂಡರು ಬೆಂಗಳೂರು ಮತ್ತು ಶಿವಮೊಗ್ಗದಲ್ಲಿ ನಡೆಸಿದ ಪ್ರತ್ಯೇಕ ಸಭೆಯಲ್ಲಿ ಈ ಯಾತ್ರೆಯ ಬಗ್ಗೆ ಪ್ರಮುಖವಾಗಿ ಚರ್ಚೆಯಾಗಿದೆ ಹಳೇ ಮೈಸೂರು ಭಾಗದಲ್ಲಿ ಕುಮಾರಸ್ವಾಮಿ ಕಾಂಗ್ರೆಸ್‌ನ ಮತಗಳನ್ನು ಕಸಿದುಕೊಳ್ಳಲಿ, ಅದರಿಂದ ನಮಗೇನು ನಷ್ಟವಿಲ್ಲ. ಆದರೆ ಹಿರಿಯೂರಿನಿಂದ ಆಚೆ ಅವರ ಯಾತ್ರೆ ಯಶಸ್ವಿಯಾಗದಂತೆ ಕಟ್ಟು ಹಾಕಬೇಕಾಗಿದೆ. ನಾವು ಕೇವಲ ಕಾಟಾಚಾರಕ್ಕೆ ಸಭೆಗಳನ್ನು ನಡೆಸಿದರೆ ಸಾಲದು, ಸರ್ಕಾರದ ಸಾಧನೆಗಳನ್ನು ಮುಂದಿಟ್ಟು, ಮತದಾರರನ್ನು ಓಲೈಸುವ ಕೆಲಸ ನಡೆಯಬೇಕು.

ಅದರಲ್ಲೂ ಹಳೇ ಮೈಸೂರು ಭಾಗದಲ್ಲಿ ನಾವು ಹೆಚ್ಚು ಸ್ಥಾನ ಗಳಿಸಲು ಕಾರ್ಯಕ್ರಮ ರೂಪಿಸಬೇಕೆಂಬ ತೀರ್ಮಾನಕ್ಕೆ ಬಿಜೆಪಿ ಎರಡು ಸಭೆಗಳಲ್ಲೂ ಬಂದಿದೆ. ಇನ್ನು ಕಾಂಗ್ರೆಸ್‌ನ ನಾಯಕರೂ ಈ ಯಾತ್ರೆಯ ಬಗ್ಗೆ ತಲೆಕೆಡಿಸಿಕೊಂಡಿದ್ದಾರೆ. ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ತಮ್ಮ ಆಪ್ತರೂ ಮತ್ತು ಪಕ್ಷದ ಮುಖಂಡರ ಜೊತೆ ವಾಸ್ತವ ಸ್ಥಿತಿಯೇ ಬೇರೆ, ಜೆಡಿಎಸ್‌ಗೆ ನೀಡುತ್ತಿರುವ ಚಿತ್ರಣವೇ ಬೇರೆ.

ನಾವು ವಾಸ್ತವ ಅರಿಯದೇ ಮೈಮರೆತರೆ ಚುನಾವಣೆಯಲ್ಲಿ ನಮಗೆ ದೊಡ್ಡ ಆಘಾತವಾಗುತ್ತದೆ. ಕುಮಾರಸ್ವಾಮಿ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಡೆಸಿರುವ ಯಾತ್ರೆಗೆ ನಿರೀಕ್ಷೆಗೂ ಮೀರಿದ ಜನ ಬೆಂಬಲ ದೊರೆತಿದೆ.

ಇದನ್ನು ನಾವು ಸುಲಭವಾಗಿ ತೆಗೆದುಕೊಳ್ಳುವುದು ಬೇಡ, ಇದಕ್ಕೆ ಪರ್ಯಾಯವಾಗಿ ನಮ್ಮ ಸಂಘಟನೆ ನಡೆಯಬೇಕಾಗಿದೆ ಎಂದು ಹೇಳಿದ್ದಾರೆ. ಯಾತ್ರೆಯ ಯಶಸ್ಸಿನಿಂದ ಇನ್ನೆರಡು ದಿನಗಳ ಕಾಲ ತುಮಕೂರು ಜಿಲ್ಲೆಯಲ್ಲಿ ಯಾತ್ರೆ ಪೂರ್ಣಗೊಳಿಸಿ, ಒಂದು ವಾರಗಳ ಕಾಲ ವಿರಾಮ ನೀಡಿ, ನಂತರ ಮಂಡ್ಯ, ಮೈಸೂರು, ಹಾಸನ ಹಾಗೂ ರಾಮನಗರ ಜಿಲ್ಲೆಯಲ್ಲಿ ಮತ್ತೆ ಎರಡನೇ ಹಂತದ ಯಾತ್ರೆ ಆರಂಭಿಸಲಿದ್ದಾರೆ.

ಯಾತ್ರೆ ಸಂದರ್ಭದಲ್ಲಿ ಕುಮಾರಸ್ವಾಮಿ ಅವರು ನಮ್ಮ ಪಕ್ಷ ಸ್ವಂತ ಶಕ್ತಿ ಮೇಲೆ ಅಧಿಕಾರಕ್ಕೆ ಬಂದರೆ ಉಪಮುಖ್ಯಮಂತ್ರಿ ಮಹಿಳೆಯರು, ದಲಿತರು, ಮುಸ್ಲಿಮರಿಗೆ ನೀಡುವುದಾಗಿ ಭರವಸೆ ನೀಡಿದ್ದಾರೆ. ಅಷ್ಟೇ ಅಲ್ಲದೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಅವಕಾಶ ದೊರೆತರೆ ಮುಸ್ಲಿಮರು, ದಲಿತರು ಏಕೆ ಮುಖ್ಯಮಂತ್ರಿಯಾಗಬಾರದು ಎಂದು ಪ್ರಶ್ನಿಸಿದ್ದಾರೆ.

ನಮ್ಮ ಗುರಿಯಂತೆ 123 ಕ್ಷೇತ್ರಗಳಲ್ಲಿ ನಾಡಿನ ಜನ ಆಶೀರ್ವಾದ ಮಾಡಿ, ಜೆಡಿಎಸ್‌ನ್ನು ಅಧಿಕಾರಕ್ಕೆ ತಂದರೆ ದಲಿತರನ್ನು ಮುಖ್ಯಮಂತ್ರಿ ಮಾಡಲು ತಯಾರಿದ್ದೇವೆ ಎಂದು ಹೇಳಿರುವುದು ರಾಷ್ಟ್ರೀಯ ಪಕ್ಷಗಳಿಗೆ ನುಂಗಲಾರದ ಬಿಸಿ ತುಪ್ಪವಾಗಿ ಪರಿಣಮಿಸಿದೆ.

ಜೆಕೆ ಟೈರ್ ವಿಕ್ರಾಂತ್ ರಜತ ಮಹೋತ್ಸವ ಸಂಭ್ರಮ

ವಿಶ್ವದ ಅಗ್ರಗಣ್ಯ 25 ಕಂಪನಿಗಳಲ್ಲಿ ಜೆಕೆ ಟೈರ್ ಸಹ ಒಂದು

● ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರಶಂಸೆ ● ಸಾಮಾಜಿಕ ಕಾರ್ಯಗಳಲ್ಲೂ ಜೆಕೆ ಮೇಲ್ಪಂಕ್ತಿ

ಮೈಸೂರು, ಡಿ.2(ಎಸ್‌ಬಿಡಿ)– ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಉತ್ಪನ್ನಗಳ ಗುಣಮಟ್ಟ ಕಾಯ್ದುಕೊಳ್ಳುವುದು ಅವಶ್ಯವಾಗಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸಲಹೆ ನೀಡಿದರು.

ಮೈಸೂರಿನ ಮೇಟಗಳ್ಳಿಯ ವಿಕ್ರಾಂತ್ ಟೈರ್ ಪ್ಲಾಂಟ್ ಆವರಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ 'ಜೆಕೆ ಟೈರ್ ವಿಕ್ರಾಂತ್ ರಜತ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಸ್ತುತ ಸ್ಪರ್ಧಾತ್ಮಕ ವಾತಾವರಣವಿದೆ. ಜೊತೆಗೆ ತಂತ್ರಜ್ಞಾನ ಹಾಗೂ ಸಂಶೋಧನೆಯಲ್ಲೂ ಸಾಕಷ್ಟು ಬೆಳವಣಿಗೆಯಾಗಿದೆ. ಇಂತಹ ಸಂದರ್ಭದಲ್ಲಿ ಉತ್ಪನ್ನಗಳ ಗುಣಮಟ್ಟ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸಬೇಕಿದೆ ಎಂದರು.

ಸ್ಪರ್ಧಾತ್ಮಕ ವಿಶ್ವದಲ್ಲಿ ಕರ್ನಾಟಕ ರಾಜ್ಯ ತನ್ನದೇ ಆದ ಛಾಪು ಮೂಡಿಸಿದ್ದು, ರಾಜ್ಯವನ್ನು ವಾಣಿಜ್ಯ ಹಾಗೂ ಕೈಗಾರಿಕೆಗಳ ಆದ್ಯತೆ ಕೇಂದ್ರವನ್ನಾಗಿಸಲು ಸರ್ಕಾರ ಹಲವು ರೀತಿಯ ಪ್ರಯತ್ನ ನಡೆಸಿದೆ. ಈ ನಿಟ್ಟಿನಲ್ಲಿ ಜೆಕೆ ಸಂಸ್ಥೆ ಉತ್ತಮ ರೀತಿಯಲ್ಲಿ ಬೆಳೆದಿದೆ. ಟೈರ್ ತಯಾರಿಕಾ ಕಂಪನಿಗಳಲ್ಲಿ ಜೆಕೆ ಸಂಸ್ಥೆ ಪ್ರಮುಖವಾಗಿದೆ. ವಿಶ್ವದ ಮೊದಲ 25 ತಯಾರಕಾ ಕಂಪನಿಗಳಲ್ಲಿ ಜೆಕೆ ಟೈರ್ ಕೂಡ ಒಂದಾಗಿದೆ. ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ವಿನೂತನ ಮಾದರಿ ಉತ್ಪನ್ನಗಳ ಪರಿಚಯಿಸುವ ಮೂಲಕ ಟೈರ್ ಉತ್ಪಾದನಾ ಉದ್ಯಮದಲ್ಲಿ ಉತ್ಕೃಷ್ಟತೆ ಜೊತೆಗೆ ನಾವೀನ್ಯತೆಯನ್ನು ರೂಡಿಸಿಕೊಂಡು ಬರುವ ಮೂಲಕ ದಶಕಗಳಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ಉತ್ತಮ ಕೊಡುಗೆ ನೀಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸರ್ಕಾರದ ನಿರ್ವಹಣೆಯಲ್ಲಿದ್ದ ವಿಕ್ರಾಂತ್ ಟೈರ್ಸ್ ಲಿಮಿಟೆಡ್‌ನ ನಿರ್ವಹಣಾ ಮೈತ್ರಿ ಪಾಲುದಾರಿಕೆ ಪಡೆದ ಜೆಕೆ ಸಂಸ್ಥೆ, ಈ ಮೂಲಕ 1997ರಲ್ಲಿ ರಾಜ್ಯ ಕೈಗಾರಿಕಾ ಕ್ಷೇತ್ರವನ್ನು ಪ್ರವೇಶಿಸಿತು. ದೃಢ ನಿರ್ವಹಣೆ ಮೂಲಕ ಲಾಭದಾಯಕ ಘಟಕವನ್ನಾಗಿ



ಸುಧಾರಿಸಿತು. ಪರಿಣಾಮ ಜೆಕೆ ಟೈರ್ ಮೈಸೂರು ಘಟಕ ವಿಶ್ವದರ್ಜೆಯ ಟೈರ್ ಸ್ಥಾವರವಾಗಿ ಬೆಳೆಯಿತು. ದೇಶದ ಅತಿದೊಡ್ಡ ಆಫ್–ರೋಡ್ ಟೈರ್–ವಿಇಎಂ 045ನೊಂದಿಗೆ ಕಂಪನಿಯು 2019ರಲ್ಲಿ ಕಂಪನಿಯು ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಪ್ರವೇಶಿಸಿತು ಎಂದು ಪ್ರಶಂಸಿಸಿದರು.

ಟೈರ್ ಉತ್ಪಾದನಾ ಉದ್ಯಮದಲ್ಲಿ ಯಶಸ್ವಿಯಾಗಿ ಬೆಳೆಯುತ್ತಿರುವ ಜೆಕೆ ಟೈರ್, ಹಲವಾರು ಸಾಮಾಜಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಮೈಸೂರು ಕೇಂದ್ರ ಕಾರಾಗೃಹ ವಾಸಿಗಳಿಗೆ ವಯಸ್ಕರ ಸಾಕ್ಷರತೆ, ಐಟಿಐಗಳಲ್ಲಿ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ, ಜೀವನೋಪಾಯಕ್ಕೆ ಸಹಕಾರ, ಪ್ರಾಥಮಿಕ ಶಾಲೆಗಳ ಅಭಿವೃದ್ಧಿಗೆ ನೆರವು, ಸ್ವಚ್ಛ ಭಾರತ ಅಭಿಯಾನದಡಿ ರಸ್ತೆಗಳ ದತ್ತು ಪಡೆದು ಅವುಗಳ ಉತ್ತಮ ನಿರ್ವಹಣೆ, ಕೆರೆಕಟ್ಟೆಗಳ ಪುನರುಜ್ಜೀವನ, ಹುಣಸೂರು ತಾಲೂಕಿನ ಹಲವು ಗ್ರಾಮಗಳನ್ನು ಬಯಲು ಶೌಚಮುಕ್ತಗೊಳಿಸಲು ಶೌಚಗೃಹಗಳ ನಿರ್ಮಾಣ ಹೀಗೆ ಅನೇಕ ಸಮಾಜಮುಖಿ ಕಾರ್ಯಗಳನ್ನು ಮುಂದುವರೆಸಿರುವುದು ಅಭಿನಂದನಾರ್ಹ ಎಂದರು.

ತಾಂತ್ರಿಕ ಶ್ರೇಷ್ಠತೆಯ ಕೇಂದ್ರವಾಗಿರುವ ಮೈಸೂರಿನಲ್ಲಿ ಜೆಕೆ ಟೈರ್ ಔದ್ಯೋಗಿಕ ವಲಯವನ್ನು ವಿಸ್ತರಿಸಿದೆ. ಜೆಕೆ ಟೈರ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಡಾ.ರಘುಪತಿ ಸಿಂಘಾನಿಯಾ 2016ರಲ್ಲಿ ಎಕ್ಸಲೆನ್ಸ್ ಸೆಂಟರ್ ಆಫ್ ಗ್ಲೋಬಲ್ ರಿಸರ್ಚ್ ಆಂಡ್ ಡೆವಲಪ್‌ಮೆಂಟ್ ಆಂಡ್ ಟೆಕ್ ಸೆಂಟರ್(ಜಾಗತಿಕ ಮತ್ತು ತಾಂತ್ರಿಕ ಅಭಿವೃದ್ಧಿ ಕೇಂದ್ರ) ಸ್ಥಾಪಿಸಿ ಉದ್ಯಮ ವಿಸ್ತರಣೆ ಮಾಡಿದರು. ಈ ಕೇಂದ್ರದ ಮೂಲಕ ರಬ್ಬರ್ ಹಾಗೂ ಟೈರ್ ಉದ್ಯಮಕ್ಕೆ ಅತ್ಯಾಧುನಿಕ ತಂತ್ರಜ್ಞಾನ ಒದಗಿಸುವುದರ ಜೊತೆಗೆ ಕೌಶಲ್ಯ ಅಭಿವೃದ್ಧಿ ಹಾಗೂ ಸುಸ್ಥಿರತೆಗೆ ನೆರವಾಗಿದ್ದಾರೆ. ರಘುಪತಿ ಸಿಂಘಾನಿಯಾ ಅವರ ಸಮರ್ಥ ನಾಯಕತ್ವ ಹಾಗೂ ಸೂಕ್ತ ಮಾರ್ಗದರ್ಶನದೊಂದಿಗೆ ಮುನ್ನಡೆಯುತ್ತಿರುವ ಜೆಕೆ ಟೈರ್ ಇಂಡಸ್ಟ್ರೀಸ್ ಲಿಮಿಟೆಡ್, ಮೇಕ್ ಇನ್ ಇಂಡಿಯಾ, ಮೇಡ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಅಭಿಯಾನ ಅನುಷ್ಠಾನಕ್ಕೆ ಮಹತ್ವದ ಕೊಡುಗೆ ನೀಡುತ್ತಿದೆ. ಈ ರೀತಿಯ ಪ್ರಯತ್ನ ಮುಂದುವರೆಯಲಿ ಎಂದು ಆಶಿಸಿದರು.

ಸಾವಿರಾರು ಮಂದಿಗೆ ಉದ್ಯೋಗ: ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಾ.ರಘುಪತಿ ಸಿಂಘಾನಿಯಾ ಮಾತನಾಡಿ, ವಾರ್ಷಿಕ 5 ಲಕ್ಷ ಟೈರ್‌ಗಳ ಸಾಮರ್ಥ್ಯದೊಂದಿಗೆ ನಮ್ಮ ಮೊದಲ ಟೈರ್ ಘಟಕವನ್ನು 1977ರಲ್ಲಿ ಸ್ಥಾಪಿಸಲಾಯಿತು. ನಂತರ 1997ರಲ್ಲಿ ಸರ್ಕಾರಿ ಸ್ವಾಮ್ಯದ ಮೈಸೂರಿನ ವಿಕ್ರಾಂತ್ ಟೈರ್ಸ್ ಘಟಕವನ್ನು ಸ್ವಾಧೀನಕ್ಕೆ ಪಡೆದು ಅತ್ಯಾಧುನಿಕ ತಂತ್ರಜ್ಞಾನದ ಅಳವಡಿಸಿಕೊಂಡು ಉನ್ನತ ದರ್ಜೆಯ ಟೈರ್ ಉತ್ಪಾದಿಸಲಾಗುತ್ತಿದೆ. ಸುಸ್ಥಿರತೆಯನ್ನು ಜೀವನ ವಿಧಾನವಾಗಿ ಅಳವಡಿಸಿಕೊಂಡಿರುವ ನಮ್ಮ ಸಂಸ್ಥೆ ಹಸಿರು ಕಂಪನಿಯಾಗಿ ಗುರುತಿಸಿಕೊಂಡಿದೆ. ಆಧುನೀಕರಣ ಹಾಗೂ ಘಟಕದ ವಿಸ್ತರಣೆಗಾಗಿ 2 ಸಾವಿರ ಕೋಟಿ ರೂ. ಹೂಡಿಕೆ ಮಾಡಲಾಗಿದ್ದು, ನೇರ ಹಾಗೂ ಪರೋಕ್ಷವಾಗಿ 15 ಸಾವಿರ ಜನರಿಗೆ ಉದ್ಯೋಗ ನೀಡಲಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಜೆಕೆ ಟೈರ್‌ನ ಹಿರಿಯ ನೌಕರರಾದ ಎಸ್.ಕೆ.ಶೆಟ್ಟಿ ಹಾಗೂ ಎಸ್. ಲೋಕೇಶ್ ಅವರನ್ನು ಅಭಿನಂದಿಸಲಾಯಿತು. ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ, ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಅಂಶುಮಾನ್ ಸಿಂಘಾನಿಯಾ, ಅರುಣ್ ಬಜೋರಿಯಾ ಮತ್ತಿತರರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ರಾಜ್ಯಪಾಲರು ಜೆಕೆ ಟೈರ್ ವಿಕ್ರಾಂತ್ ಉತ್ಪಾದನಾ ಘಟಕಕ್ಕೆ ಭೇಟಿ ನೀಡಿ ವೀಕ್ಷಿಸಿದರಲ್ಲದೆ ಕೆಲವು ಘಟಕಗಳ ಉದ್ಘಾಟನೆ ನೆರವೇರಿಸಿದರು. ರಜತ ಮಹೋತ್ಸವದ ಅಂಗವಾಗಿ ವಿವಿಧ ಮನರಂಜನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಟೈರ್ ಉತ್ಪಾದನಾ ಕ್ಷೇತ್ರಕ್ಕೆ ಕೊರೊನೋತ್ತರ ಸುಗ್ಗಿ ಕಾಲ

● ಜೆಕೆ ಟೈರ್ ಅಧ್ಯಕ್ಷ ಡಾ.ರಘುಪತಿ ಸಿಂಘಾನಿಯಾ ಹರ್ಷ
● ಘಟಕವನ್ನು ಭವಿಷ್ಯದಲ್ಲಿ ವಿಸ್ತರಿಸುವ ಉದ್ದೇಶ

ಮೈಸೂರು, ಡಿ.2(ಎಸ್‌ಬಿಡಿ)– ಕೊರೊನಾ ನಂತರದಲ್ಲಿ ಟೈರ್ ಉತ್ಪಾದನಾ ಕ್ಷೇತ್ರಕ್ಕೆ ಸುಗ್ಗಿ ಕಾಲ ಪ್ರಾಪ್ತವಾಗಿದೆ ಎಂದು ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಡಾ.ರಘುಪತಿ ಸಿಂಘಾನಿಯಾ ತಿಳಿಸಿದರು.

ಜೆಕೆ ಟೈರ್ ವಿಕ್ರಾಂತ್ ರಜತ ಮಹೋತ್ಸವದ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಾಧನೆ ಬಗ್ಗೆ ಸಂತಸ ವ್ಯಕ್ತಪಡಿಸಿದ ಅವರು, ಕೊರೊನೋತ್ತರದಲ್ಲಿ ಉದ್ಯಮ ಸಾಧಾರಣವಾಗಿರುತ್ತದೆ ಎಂದು ಅಂದಾಜಿಸಲಾಗಿತ್ತು. ಆದರೆ ಟೈರ್ ಉತ್ಪಾದನಾ ಉದ್ಯಮಕ್ಕೆ ಇದು ಸುಗ್ಗಿ ಕಾಲ(ಬಂಪರ್ ಇಯರ್) ಆಗಿದೆ. ಟೈರ್‌ಗಳ ಬೇಡಿಕೆ ಗಣನೀಯ ಏರಿಕೆಯಾಗಿದ್ದು, ಆದಾಯ ಪ್ರಮಾಣವೂ ವೃದ್ಧಿಸಿದೆ. ಕೊರೊನಾ ಕಾಲಘಟ್ಟದಲ್ಲಿ ಯಾವುದೇ ಟೈರ್ ಉತ್ಪಾದನಾ ಘಟಕ ಮುಚ್ಚಲಿಲ್ಲ. ಬದಲಾಗಿ ಉತ್ತಮ ರೀತಿಯಲ್ಲಿ ಬೆಳವಣಿಗೆ ಕಾಣುತ್ತಿದೆ ಎಂದರು.

ಸರ್ಕಾರಿ ಸ್ವಾಮ್ಯದಲ್ಲಿದ್ದ ವಿಕ್ರಾಂತ್ ಟೈರ್ಸ್ ಉತ್ಪಾದನಾ ಘಟಕವನ್ನು 1997ರಲ್ಲಿ ನಮ್ಮ ಜೆಕೆ ಟೈರ್ ಪಡೆದುಕೊಂಡ ಬಳಿಕ ಅತ್ಯಾಧುನಿಕ ಘಟಕವನ್ನಾಗಿ ಪರಿವರ್ತಿಸಲಾಗಿದೆ. ವಿವಿಧ ಪ್ರದೇಶಗಳಲ್ಲಿ 12 ಉತ್ಪಾದನಾ ಘಟಕಗಳನ್ನು ವಿಸ್ತರಿಸಿದ್ದು, ಇದು ಸಂಸ್ಥೆಯ ಯಶೋಗಾಥೆಗೆ ಸಾಕ್ಷಿಯಾಗಿದೆ. ಹಲವು ವರ್ಷಗಳಿಂದ ಸರ್ಕಾರದ ಬೊಕ್ಕಸಕ್ಕೆ 8 ಸಾವಿರ ಕೋಟಿ ರೂ.ಗೂ ಅಧಿಕ ದೇಣಿಗೆ ನೀಡಲಾಗಿದೆ. ಕೊರೊನಾ ಕಾಲಘಟ್ಟದಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯಡಿ ಸಾಕಷ್ಟು ಸೇವೆ ಮಾಡಲಾಗಿದೆ. ಅಲ್ಲದೆ ವಯಸ್ಕರ ಸಾಕ್ಷರತೆ, ಕೌಶಲ್ಯ ಅಭಿವೃದ್ಧಿ, ಕೆರೆ ಸಂರಕ್ಷಣೆ ಸೇರಿದಂತೆ ಹತ್ತಾರು ಕಾರ್ಯಗಳು ನಡೆದಿವೆ ಎಂದು ಹೇಳಿದರು.


ಎಲ್ಲ ಋತುಮಾನಗಳಿಗೆ ಹೊಂದಿಕೊಳ್ಳುವ ಟೈರ್‌ಗಳ ಉತ್ಪಾದನೆಗೆ ಆದ್ಯತೆ ನೀಡಲಾಗುವುದು. ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಹಾಗೂ ರಸ್ತೆ ಸುರಕ್ಷತೆಗೆ ಆದ್ಯತೆ ನೀಡಿ ಟೈರ್ ಉತ್ಪಾದಿಸಲಾಗುತ್ತಿದೆ. ಇಲ್ಲಿನ ಸಿವಿ ಟೈರ್ ಘಟಕ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಘಟಕವನ್ನು ವಿಸ್ತರಿಸುವ ಉದ್ದೇಶವಿದೆ. ಟ್ರಕ್ ರೇಡಿಯಲ್ ಟೈರ್‌ಗಳ ಉತ್ಪಾದನೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಂಡಿರುವ ಘಟಕ ನಮ್ಮದಾಗಿದೆ. ಕಂಪನಿಯ ಬೆಳವಣಿಗೆಯೊಂದಿಗೆ ದೇಶದ ಅಭಿವೃದ್ಧಿ, ಜಿಡಿಪಿ ಬೆಳವಣಿಗೆ ಹಾಗೂ ಸಾಮಾಜಿಕ ಬದಲಾವಣೆಗೆ ಕೊಡುಗೆ ನೀಡುತ್ತಿದೆ ಎಂದು ತಿಳಿಸಿದ ಅವರು, ಟೈರ್‌ಗಳ ಮೇಲೆ ಶೇ.28ರಷ್ಟು ಜಿಎಸ್‌ಟಿ ವಿಧಿಸಿರುವುದರಿಂದ ಗ್ರಾಹಕರಿಗೆ ಹೊರೆಯಾಗಿದೆ. ಆದರೆ ಜಿಎಸ್‌ಟಿ ಸರ್ಕಾರದ ನೀತಿಯಾಗಿರುವುದರಿಂದ ಹೆಚ್ಚು ವಿಶ್ಲೇಷಣೆ ಮಾಡಲಾಗದು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.



ಜೆಕೆ ಟೈರ್ ಉತ್ಪಾದನಾ ಘಟಕವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ವೀಕ್ಷಿಸಿದರು

ಒಂದಕ್ಕಿಂತ ಹೆಚ್ಚು ಕಡೆ ಮತದಾರರ ಪಟ್ಟಿಯಲ್ಲಿ ಹೆಸರಿದ್ದರೆ ಕೈಬಿಡಲು ಚು.ಆಯೋಗಕ್ಕೆ ಸಿಎಂ ಸಲಹೆ

ಬೆಂಗಳೂರು, ಡಿ.2(ಕೆಎಂಶಿ)–ಒಂದಕ್ಕಿಂತ ಹೆಚ್ಚು ಮತದಾನದ ಹಕ್ಕು ಹೊಂದಿದ್ದರೆ ಅಂತಹವರನ್ನು ಮತದಾರರ ಪಟ್ಟಿಯಲ್ಲಿ ಒಂದೆಡೆ ಮಾತ್ರ ಉಳಿಸಿ, ಉಳಿದವನ್ನು ಪಟ್ಟಿಯಿಂದ ತೆಗೆಯುವಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ಮಾಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಪಟ್ಟಿ ಪರಿಷ್ಕರಣೆ ವೇಳೆ ಅನಧಿಕೃತವಾಗಿ ಮತದಾರರನ್ನು ಸೇರಿಸುವ ಕೆಲಸವಾಗಿದೆ. ಬಹು ಕಡೆ ಮತದಾರರ ಚೀಟಿ ಹೊಂದಿರುವವರು ಇದ್ದಾರೆ. ಅಂತಹ ವೋಟರ್ ಐಡಿ ಪತ್ತೆ ಮಾಡಿ, ಅವುಗಳನ್ನು ತೆಗೆದು ಹಾಕುವ ಕೆಲಸವನ್ನು ಆಯೋಗ ಮಾಡಬೇಕು, ಅದರ ಮೇಲ್ವಿಚಾರಣೆಯನ್ನು ಹಿರಿಯ ಅಧಿಕಾರಿಗಳೇ ವಹಿಸಿಕೊಳ್ಳಬೇಕು ಎಂದಿದ್ದಾರೆ.

ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ರಾಜ್ಯದ ಯಾವುದೇ ಭಾಗದಲ್ಲಿ ದೂರು ಬಂದರೂ, ಅದನ್ನು ಆಯೋಗ ಪರಿಶೀಲಿಸಿ, ಅರ್ಹ ಮತದಾರರ ಬಗ್ಗೆ ಕಾಳಜಿ ವಹಿಸಬೇಕು. ರಾಜ್ಯಾದ್ಯಂತ ಅನಧಿಕೃತ ಸಮೀಕ್ಷೆಗಳು ನಡೆದು ಅಲ್ಪಸಂಖ್ಯಾತರ ಮತದಾರರನ್ನು ಡಿಲೀಟ್ ಮಾಡಲಾಗುತ್ತಿದೆ ಎನ್ನುವುದು ಸುಳ್ಳು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಈಗಾಗಲೇ ರಾಜ್ಯ ಚುನಾವಣೆ ಆಯೋಗ ಈ ಬಗ್ಗೆ ಗಮನ ಹರಿಸಿದೆ. ಚುನಾವಣಾ ಆಯೋಗದ ನೇತೃತ್ವದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಯಾಗುತ್ತದೆ. ಈ ಕುರಿತು ಭಾರತ ಮತ್ತು ರಾಜ್ಯ ಚುನಾವಣಾ ಆಯೋಗ ಕಾಳಜಿ ವಹಿಸಿದೆ. ಈ ರೀತಿಯ ದೂರುಗಳು ಬಂದಲ್ಲಿ ಅಧಿಕಾರಿಗಳಿಂದ ತನಿಖೆ ಮಾಡಿಸಬೇಕು ಎಂದರು.

ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಕನ್ನಡಿಗರ ಮೇಲೆ ಹಲ್ಲೆಯಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಈ ಬಗ್ಗೆ ನಾನು ತನಿಖೆ ಕೈಗೊಳ್ಳಲು ಪೊಲೀಸ್ ಆಯುಕ್ತರಿಗೆ ಸೂಚಿಸಿದ್ದು, ವರದಿ ಬಂದ ಮೇಲೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು. ಪೊಲೀಸರು ಹಲ್ಲೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸತ್ಯಾಸತ್ಯತೆಯನ್ನು ತಿಳಿದುಕೊಂಡು ಯಾರೇ ತಪ್ಪು ಮಾಡಿದ್ದರೂ ಅವರ ಮೇಲೆ ಕ್ರಮ ಕೈಗೊಳ್ಳುತ್ತಾರೆ ಎಂದರು.

ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಅರ್ಜಿ ಆಹ್ವಾನ

ಮೈಸೂರು, ಡಿ.2– ಜಿಲ್ಲಾಧಿಕಾರಿಗಳ ಕಾರ್ಯಾಲಯ ವತಿಯಿಂದ ಯುವ ಮತದಾರರು ಹಾಗೂ ಹೊಸ ಅರ್ಹ ಮತದಾರರು ಪಟ್ಟಿಗೆ ಸೇರ್ಪಡೆಯಾಗುವವರು ಭಾರತ ಚುನಾವಣಾ ಆಯೋಗದ VHA Mobile App ಹಾಗೂ NVSP (National Voters Service Portal) ಮುಖಾಂತರ ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಯುವ ಮತದಾರರು ಹಾಗೂ ಹೊಸ ಅರ್ಹ ಮತದಾರರು ಮತದಾರರ ಪಟ್ಟಿಗೆ ಸೇರ್ಪಡೆಗೆ ಅರ್ಜಿಯನ್ನು ಸಲ್ಲಿಸುವಾಗ ಅವರು ವಾಸವಿರುವ ವಿಳಾಸದಲ್ಲೇ ವಾಸವಿರುವ ಅವರ ತಂದೆ, ತಾಯಿ, ಅಕ್ಕ, ಅಣ್ಣ ಇತರೆ ಸಂಬಂಧಿಗಳ ವೋಟರ್ ಐ.ಡಿ ಕಾರ್ಡ್ ಸಂಖ್ಯೆ ಮತ್ತು ವಿವರವನ್ನು ನಮೂದಿಸಿದಲ್ಲಿ, ಒಂದು ಕುಟುಂಬದ ಸದಸ್ಯರ ಒಂದೇ ಮತಗಟ್ಟೆಯಲ್ಲಿಯೇ ಸೇರ್ಪಡೆ ಮಾಡಲು ಸಹಕಾರಿಯಾಗುತ್ತದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಜೆ.ಪಿ.ನಗರ ಹೆಚ್‌ಡಿಎಫ್‌ಸಿ ಶಾಖೆ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಯಮಿ ಎಸ್.ಶ್ರೀಕಾಂತ್ ಉದ್ಘಾಟಿಸಿದರು. ಬ್ಯಾಂಕ್ ಸಿಬ್ಬಂದಿ ಇದ್ದಾರೆ.

ನಿಮಗೆ ಸಾಲವನ್ನೂ ಕೊಡಿಸಿ ಖಾತೆಗೆ ಕನ್ನ ಹಾಕುವ ಖದೀಮರಿದ್ದಾರೆ!



● ಉದ್ಯೋಗಿಯೊಬ್ಬರ ಖಾತೆಗೆ 24 ಲಕ್ಷ ಸಾಲ ಜಮೆ ಮಾಡಿ ಅದರಲ್ಲಿ 7 ಲಕ್ಷ ರೂ. ಡ್ರಾ ● ಎಚ್ಚೆತ್ತಿದ್ದರಿಂದ ಉಳಿದ ಹಣ ಸುರಕ್ಷಿತ

ರಾಮನಗರ, ಡಿ. 2– ಮೊಬೈಲ್‌ಗೆ ಯಾವುದಾದರೂ ಲಿಂಕ್ ಕಳುಹಿಸಿ ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ಆನ್‌ಲೈನ್ ಮೂಲಕ ಲೂಟಿ ಮಾಡುತ್ತಿದ್ದ ವಂಚಕರು ಇದೀಗ ನಿಮ್ಮ ಖಾತೆಯಲ್ಲಿ ಹಣವಿಲ್ಲದಿದ್ದರೂ ಸರಿಯೇ ಯಾವುದಾದರೂ ಬ್ಯಾಂಕ್‌ನಿಂದ ನಿಮಗೆ ಸಾಲ ಕೊಡಿಸಿ, ಆ ಹಣವನ್ನು ಲೂಟಿ ಮಾಡುವ ಹೊಸ ಕುತಂತ್ರಕ್ಕೆ ಕೈ ಹಾಕಿದ್ದಾರೆ.

ಇಂತಹ ಒಂದು ಪ್ರಕರಣ ರಾಮನಗರ ಜಿಲ್ಲೆ ಬಿಡದಿಯಿಂದ ವರದಿಯಾಗಿದೆ. ಬಿಡದಿಯ ಕಾರ್ಖಾನೆಯೊಂದರ ಉದ್ಯೋಗಿಯ ಬ್ಯಾಂಕ್ ಖಾತೆಗೆ 24 ಲಕ್ಷ ರೂ. ಸಾಲವನ್ನು ಜಮೆ ಮಾಡಿಸಿ, ಕೇವಲ 20 ನಿಮಿಷದಲ್ಲಿ 7 ಲಕ್ಷ ರೂ.ಗಳನ್ನು ವಂಚಕರು ಡ್ರಾ ಮಾಡಿಕೊಂಡಿದ್ದಾರೆ. ಸಕಾಲದಲ್ಲಿ ಕಾರ್ಖಾನೆ ಉದ್ಯೋಗಿ ಎಚ್ಚೆತ್ತುಕೊಂಡು ತನ್ನ ಖಾತೆಯನ್ನು ಬ್ಲಾಕ್ ಮಾಡಿದ್ದರಿಂದ ಅವರ ಖಾತೆಯಲ್ಲಿ 17 ಲಕ್ಷ ರೂ. ಉಳಿದುಕೊಂಡಿದೆ. ಆದರೆ, ಅರ್ಜಿ ಸಲ್ಲಿಸದೆಯೇ ಖಾಸಗಿ ಬ್ಯಾಂಕ್‌ವೊಂದು ಅವರ ಖಾತೆಗೆ 24 ಲಕ್ಷ ರೂ.ಗಳ ಸಾಲ ಜಮೆ ಮಾಡಿದ್ದು ಹೇಗೆ? ಎಂಬುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ.

ವಿವರ: ಬಿಡದಿಯ ಕಾರ್ಖಾನೆಯೊಂದರ ಉದ್ಯೋಗಿ ಮಂಜುನಾಥ್(41) ಎಂಬುವರು ಪುಣಾದ ಐಸಿಐಸಿಐ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಹೊಂದಿದ್ದಾರೆ. ಅದು ಅವರ ಸ್ಯಾಲರಿ ಖಾತೆಯಾಗಿದ್ದು, ಕಂಪನಿಯಿಂದ ವೇತನದ ಹಣ ಈ ಖಾತೆಗೆ ಜಮೆಯಾಗುತ್ತದೆ. ನವೆಂಬರ್ 27ರಂದು ಸಂಜೆ ಮೊಬೈಲ್‌ಗೆ "ವಿದ್ಯುತ್ ಬಿಲ್ ಮಾಡದ ಕಾರಣ ನಿಮ್ಮ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತದೆ. ಆದ್ದರಿಂದ ಕೂಡಲೇ ಬಾಕಿ ಇರುವ 15 ರೂ. ಪಾವತಿಸಿ" ಎಂಬ ಸಂದೇಶದೊಂದಿಗೆ 6291349260 ನಂಬರ್‌ನಿಂದ ಲಿಂಕ್‌ವೊಂದನ್ನು ರವಾನಿಸಲಾಗಿದೆ. ಮಂಜುನಾಥ್ ಅವರು ಲಿಂಕ್ ಮೇಲೆ ಕ್ಲಿಕ್ ಮಾಡಿ 15 ರೂ. ವರ್ಗಾವಣೆ ಮಾಡಿದ್ದಾರೆ. ಅದಾದ ಸುಮಾರು 2 ಗಂಟೆಗಳ ಕಾಲ ಅವರ ಮೊಬೈಲ್ ಬ್ಲಾಕ್ ಆಗಿತ್ತು

ರಾತ್ರಿ 8 ಗಂಟೆ ಸಮಯದಲ್ಲಿ ಅವರು ಖಾತೆ ಹೊಂದಿದ್ದ ಐಸಿಐಸಿಐ ಬ್ಯಾಂಕ್ ಖಾತೆಗೆ 24 ಲಕ್ಷ ರೂ. ಜಮೆಯಾಗಿರುವ ಬಗ್ಗೆ ಅವರ ಮೇಲ್‌ಗೆ ಸಂದೇಶ ರವಾನೆಯಾಗಿದೆ. ಐಸಿಐಸಿಐ ಬ್ಯಾಂಕ್ ಅವರಿಗೆ ಈ ಹಣವನ್ನು ಸಾಲವಾಗಿ ಮಂಜೂರು ಮಾಡಿ ಜಮೆ ಮಾಡಿರುವುದಾಗಿ ಮೇಲ್‌ನಲ್ಲಿ ವಿವರಿಸಿದ್ದರಿಂದ ತಾವು ಸಾಲಕ್ಕೆ ಅರ್ಜಿಯೇ ಸಲ್ಲಿಸದೆ ಹೇಗೆ ಹಣ ಜಮೆಯಾಗಿದೆ ಎಂದು ಗಾಬರಿಯಾದ ಅವರು, ತಕ್ಷಣವೇ ಬಿಡದಿಯ ಎಟಿಎಂಗೆ ಹೋಗಿ ಚೆಕ್ ಮಾಡಿದಾಗ ಅವರ ಖಾತೆಗೆ 24 ಲಕ್ಷ ರೂ. ಜಮೆಯಾಗಿರುವುದು ಖಾತರಿಯಾಗಿದೆ.

ಅಂದು ಭಾನುವಾರವಾಗಿದ್ದರಿಂದ ಅವರು ಬ್ಯಾಂಕ್ ಅನ್ನು ಸಂಪರ್ಕಿಸಲು ಸಾಧ್ಯವಿಲ್ಲ. ಹೀಗಾಗಿ ಸೋಮವಾರ ಬ್ಯಾಂಕ್ ಅನ್ನು ಸಂಪರ್ಕಿಸೋಣ ಎಂದು ಅವರು ಯೋಚಿಸುತ್ತಿರುವಾಗಲೇ ಅವರ ಖಾತೆಯಿಂದ ಒಮ್ಮೆಗೆ ಲಕ್ಷ ರೂ.ಗಳಂತೆ ಕಡಿತಗೊಳ್ಳುತ್ತಿರುವ ಮೆಸೇಜ್‌ಗಳು ಬರತೊಡಗಿದವು. ಅಂದರೆ, ಕೇವಲ 20 ನಿಮಿಷದಲ್ಲಿ 7 ಬಾರಿ ಒಮ್ಮೆಗೆ ಲಕ್ಷ ರೂ.ಗಳಂತೆ 7 ಲಕ್ಷ ರೂ. ಕಡಿತಗೊಂಡಾಗ ಗಾಬರಿಯಾದ ಅವರು, ಬ್ಯಾಂಕ್ ಖಾತೆಯನ್ನು ಬ್ಲಾಕ್ ಮಾಡಲು ತಮ್ಮ ಮೊಬೈಲ್‌ನಿಂದ ಪ್ರಯತ್ನಿಸಿದ್ದಾರೆ. ಆದರೆ, ಅದು ಸಾಧ್ಯವಾಗದ ಕಾರಣ ಪತ್ನಿಯ ಮೊಬೈಲ್ ಮೂಲಕ ಐಸಿಐಸಿಐ ಬ್ಯಾಂಕ್ ಕಸ್ಟಮರ್ ಕೇರ್ ಅನ್ನು ಸಂಪರ್ಕಿಸಿ, ಖಾತೆಯನ್ನು ಬ್ಲಾಕ್ ಮಾಡಿದ್ದಾರೆ.

ಸೋಮವಾರ ಮಂಜುನಾಥ್ ಬ್ಯಾಂಕ್ ಅನ್ನು ಸಂಪರ್ಕಿಸಿ ತಾನು ಅರ್ಜಿಯೇ ಸಲ್ಲಿಸದೇ ಸಾಲ ಮಂಜೂರಾಗಿ ಹಣ ತಮ್ಮ ಖಾತೆಗೆ ಜಮೆಯಾಗಿದ್ದು ಹೇಗೆ? ಎಂದು ವಿಚಾರಿಸಿದಾಗ, ಬ್ಯಾಂಕ್ ಸಿಬ್ಬಂದಿ ತಮ್ಮ ಬ್ಯಾಂಕ್‌ನಲ್ಲಿ ನಿಮ್ಮ ಖಾತೆ ಇದ್ದುದ್ದರಿಂದ ಅರ್ಜಿ ಬಂದ 3 ನಿಮಿಷದಲ್ಲಿ ನಿಮಗೆ ಸಾಲ ಮಂಜೂರಾಗಿ ಹಣ ಖಾತೆಗೆ ಜಮಾ ಮಾಡಲಾಗಿದೆ ಎಂದು ಉತ್ತರಿಸಿದರಂತೆ. ಅರ್ಜಿ ನಮೂನೆಯನ್ನು ಪರಿಶೀಲಿಸಿದಾಗ ಅದನ್ನು ಸಮರ್ಪಕವಾಗಿ ಭರ್ತಿ ಕೂಡ ಮಾಡಿರಲಿಲ್ಲ ಎಂದು ಮಂಜುನಾಥ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ವಂಚಕರು ತಮ್ಮ ಮೊಬೈಲ್ ಅನ್ನು ಹ್ಯಾಕ್ ಮಾಡಿ ಬ್ಯಾಂಕ್‌ಗೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿ, ಹಣ ಜಮೆಯಾದ ತಕ್ಷಣ ಅದನ್ನು ಡ್ರಾ ಮಾಡಿಕೊಳ್ಳಲು ಆರಂಭಿಸಿದ್ದಾರೆ. ತಾನು ಸ್ವಲ್ಪ ಯಾಮಾರಿದ್ದರೆ ಎಲ್ಲಾ 24 ಲಕ್ಷ ರೂ.ಗಳನ್ನು ಅವರು ಡ್ರಾ ಮಾಡಿಕೊಳ್ಳುತ್ತಿದ್ದರು. ಅನಾವಶ್ಯಕವಾಗಿ ನಾನು ಸಾಲಗಾರನಾಗುತ್ತಿದ್ದೆ ಎಂದು ಹೇಳಿದರಲ್ಲದೆ, ಸಮರ್ಪಕವಾದ ಅರ್ಜಿಯೂ ಇಲ್ಲದೆ, ಅರ್ಜಿಯಲ್ಲಿ ಆಧಾರ್ ಸಂಖ್ಯೆ, ವಿಳಾಸ ಸೇರಿದಂತೆ ಯಾವುದೇ ವಿವರಗಳನ್ನು ನಮೂದಿಸದೇ ಇದ್ದರೂ ಕೆಲವೇ ನಿಮಿಷಗಳಲ್ಲಿ ಅದೂ ಬ್ಯಾಂಕ್ ರಜಾ ದಿನವಾದ ಭಾನುವಾರದಂದು ಬ್ಯಾಂಕ್‌ನ ಕೆಲಸದ ವೇಳೆಯೂ ಅಲ್ಲದ ರಾತ್ರಿ 8 ಗಂಟೆಯಲ್ಲಿ ಹೇಗೆ 24 ಲಕ್ಷ ರೂ. ಸಾಲದ ಹಣ ಜಮೆ ಆಯಿತು ಎಂಬುದು ಅರ್ಥವಾಗುತ್ತಿಲ್ಲ ಎಂದು ತಿಳಿಸಿದ ಮಂಜುನಾಥ್ ಅವರು, ಈ ಸಂಬಂಧ ರಾಮನಗರ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ವಿ.ಸಿ.ಫಾರಂನಲ್ಲಿ ರೈತಸ್ನೇಹಿ ಕೃಷಿ ಮೇಳಕ್ಕೆ ಅದ್ದೂರಿ ಚಾಲನೆ

ಕೃಷಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಕೆ ಅವಶ್ಯಕ

ಮಂಡ್ಯ, ಡಿ.2– ಕೃಷಿಯಲ್ಲಿ ಆರ್ಥಿಕವಾಗಿ ಸದೃಢವಾಗಬೇಕಾದರೆ, ರೈತರು ಕೃಷಿಯಲ್ಲಿ ಹೊಸ ತಂತ್ರಜ್ಞಾನ, ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಶುಕ್ರವಾರ ತಾಲೂಕಿನ ವಿ.ಸಿ.ಫಾರಂನಲ್ಲಿ ಕೃಷಿ ವಿಶ್ವವಿದ್ಯಾಲಯದಿಂದ ಆಯೋಜಿಸಿದ್ದ ಕೃಷಿ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಜಮೀನು ಹೊಂದಿರುವ ಶ್ರೀಮಂತರು ಕೃಷಿಯನ್ನು ಕೆಲವು ಕೃಷಿ ಕಾರ್ಮಿಕರ ಸಹಾಯದಿಂದ ಹವ್ಯಾಸಕ್ಕಾಗಿ ನಡೆಸುತ್ತಾರೆ. ಆದರೆ ಪೂರ್ಣ ಕುಟುಂಬ ಕೃಷಿಯಲ್ಲೇ ತೊಡಗಿಕೊಂಡು ಜೀವನ ನಡೆಸುತ್ತಿರುವವರಿಗೆ ಕೃಷಿ ಬಗ್ಗೆ ಹೆಚ್ಚಿನ ಮಾಹಿತಿ ಬೇಕು. ಸರ್ಕಾರ ಒದಗಿಸುವ ಸವಲತ್ತುಗಳು ಅವರಿಗೆ ತಲುಪಬೇಕು ಎಂದರು.



ಕೃಷಿ ಮೇಳದಲ್ಲಿ ಹಲವು ಸುಧಾರಿತ ತಳಿ, ಯಾವ ರೀತಿ ರೈತ ಹೊಸ ಮಾದರಿ ಅಳವಡಿಸಿಕೊಂಡು ಜೀವನ ಕಟ್ಟಿಕೊಳ್ಳಬಹುದು ಎಂದು ವಿವಿಧ ಪ್ರಾತ್ಯಕ್ಷಿಕೆಗಳ ಮೂಲಕ ತಿಳಿಸಲಾಗಿದೆ. ರೈತರು ಮಾಹಿತಿ ಪಡೆದು ಸದುಪಯೋಗಪಡಿಸಿಕೊಳ್ಳಿ ಎಂದರು.

ಜಿಲ್ಲಾಧಿಕಾರಿ ಡಾ.ಎಚ್.ಎನ್.ಗೋಪಾಲಕೃಷ್ಣ ಮಾತನಾಡಿ, ಅತ್ಯಾಧುನಿಕ ಕೃಷಿ ಯಂತ್ರೋಪಕರಣ, ಹೆಚ್ಚು ಇಳುವರಿ ಹಾಗೂ ಆದಾಯ ತಂದು ಕೊಡುವ ಸುಧಾರಿತ ತಳಿಗಳನ್ನು ಅನಾವರಣಗೊಳಿಸಲಾಗಿದೆ. ವಿ.ಸಿ.ಫಾರಂನಲ್ಲಿ ನಿರಂತರವಾಗಿ ರೈತರ ಅಭಿವೃದ್ಧಿಗಾಗಿ ವಿವಿಧ ಸಂಶೋಧನಾ ಕಾರ್ಯ ನಡೆಯುತ್ತಲೇ ಇರುತ್ತದೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ತಿಳಿಸಿದರು. ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ವಿ. ಸುರೇಶ್ ಮಾತನಾಡಿ, ವಿ.ಸಿಫಾರಂನಲ್ಲಿ ಮಂಡ್ಯ ಮತ್ತು ಸುತ್ತಮುತ್ತಲಿನ ಜಿಲ್ಲೆಯ ರೈತರಿಗೆ ಬೇಕಿರುವ ತಾಂತ್ರಿಕತೆ ಬಗ್ಗೆ ತಿಳಿದು ಕೃಷಿ ಮೇಳದಲ್ಲಿ ಸುಧಾರಿತ ಹಾಗೂ ಬಿಡುಗಡೆಗೆ ಸಿದ್ಧವಿರುವ ತಳಿಗಳನ್ನು ಅನಾವರಣಗೊಳಿಸಲಾಗಿದೆ. ಮೇಳದಲ್ಲಿ ರೈತರೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ. ಸಂವಾದದಲ್ಲಿ ರೈತರು ತಮಗೆ ಇರುವ ಸಂಶಯಗಳನ್ನು ನೇರ ವಾಗಿ ವಿಜ್ಞಾನಿಗಳೊಂದಿಗೆ ಮಾತನಾಡಿ ಪರಿಹರಿಸಿಕೊಳ್ಳಬಹುದು ಎಂದರು.

ಕಾರ್ಯಕ್ರಮದಲ್ಲಿ ಗಣದಾಳು ಗ್ರಾಪಂ ಅಧ್ಯಕ್ಷೆ ರೂಪರಾಣಿ, ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ವಿ.ಸಿ.ಫಾರಂ ಕೃಷಿ ಮಹಾವಿದ್ಯಾಲಯದ ಡೀನ್ ಡಾ.ಎಸ್.ಎಸ್.ಪ್ರಕಾಶ್, ವಲಯ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕ ಡಾ.ಎನ್.ಶಿವಕುಮಾರ್, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕ ಡಾ.ಕೆ.ಬಿ.ಉಮೇಶ್, ಪ್ರಾಧ್ಯಾಪಕ ಡಾ.ರಂಗನಾಥ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಸೇರಿದಂತೆ ಅಧಿಕಾರಿಗಳಿದ್ದರು.

ಗಮನ ಸೆಳೆದ ಕೃಷಿ ಮೇಳ: ಕೃಷಿ ಮೇಳದಲ್ಲಿ ಹತ್ತಾರು ಎಕರೆಯಲ್ಲಿ ವಿವಿಧ ತಳಿಗಳ ಭತ್ತ, ರಾಗಿ, ಜೋಳದ ಬೆಳೆಗಳು ಗಮನ ಸೆಳೆದವು. ಆಧುನಿಕ ಕೃಷಿಗಳ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡುವ ಫೋಟೋಗಳು, ಮಾಹಿತಿ ಸಂಗ್ರಹದ ಪುಸ್ತಕಗಳನ್ನು ಪ್ರದರ್ಶನಕ್ಕೆ ಹಾಗೂ ಮಾರಾಟಕ್ಕೆ ಇಡಲಾಗಿತ್ತು. ಕೃಷಿಗೆ ಸಂಬಂಧಿಸಿದ ಅನೇಕ ಸಲಕರಣೆಗಳು ಸಹ ಮಾರಾಟಕ್ಕೆ ಲಭ್ಯವಿದ್ದವು. ಕೃಷಿಗೆ ಸಂಬಂಧಿಸಿದ ವಸ್ತುಗಳು, ರೈತರಿಂದ ತಯಾರಾದ ಉತ್ಪನ್ನಗಳು ಸೇರಿದಂತೆ ಅನೇಕ ವಸ್ತುಗಳು ಮಾರಾಟ ಹಾಗೂ ಪ್ರದರ್ಶನಕ್ಕೆ ಮಳಿಗೆಗಳನ್ನು ತೆರೆಯಲಾಗಿತ್ತು. ಕೃಷಿ ವಿದ್ಯಾರ್ಥಿಗಳೇ ಮಳಿಗೆಗಳ ನೇತೃತ್ವ ವಹಿಸಿದ್ದು ವಿಶೇಷವಾಗಿತ್ತು.

ಕೃಷಿ ಮೇಳಕ್ಕೆ ಸಚಿವರ ಗೈರು

ರೈತರು ದೇಶದ ಬೆನ್ನೆಲುಬು. ಇಂತಹ ರೈತ ಸ್ನೇಹಿ ಕೃಷಿ ಮೇಳಕ್ಕೆ ಸಚಿವರ ಗೈರು ಹಾಜರಿ ಎದ್ದು ಕಾಣುತ್ತಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಕೃಷಿ ಸಚಿವ ಬಿ.ಸಿ.ಪಾಟೀಲ್, ಕ್ರೀಡೆ ಹಾಗೂ ರೇಷ್ಮೆ ಸಚಿವ ಕೆ.ಸಿ.ನಾರಾಯಣಗೌಡ ಗೈರಾಗಿದ್ದರು. ಇಂದು ಮದುವೆ ಸಮಾರಂಭವೊಂದಕ್ಕೆ ಗೋಪಾಲಯ್ಯ ಮಂಡ್ಯಗೆ ಆಗಮಿಸಿದ್ದರೂ ಕಾರ್ಯಕ್ರಮಕ್ಕೆ ಬರಲಿಲ್ಲ. ಮದುವೆ ಕಾರ್ಯಕ್ರಮಕ್ಕೆ ಸಚಿವರಿಗಿರುವ ಒಲವು ರೈತರ ಕಾರ್ಯಕ್ರಮಕ್ಕೆ ಇಲ್ಲ. ಮತ್ತೊಂದೆಡೆ ಕಳೆದ ವಾರ ಮನರಂಜನಾ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ ಕೃಷಿ ಸಚಿವ ಬಿ.ಸಿ.ಪಾಟೀಲ್ ಕೃಷಿ ಮೇಳಕ್ಕೆ ಗೈರಾದರೆ, ಸದಾ ಕ್ಷೇತ್ರದಲ್ಲೇ ಇರುವ ರೇಷ್ಮೆ ಸಚಿವ ನಾರಾಯಣಗೌಡರ ಗೈರು ಸಹ ಎದ್ದು ಕಾಣುತ್ತಿತ್ತು.

ಕಾಂಗ್ರೆಸ್ ಟಿಕೆಟ್ ನೀಡಿದರೆ ಗೆಲ್ಲುವೆ: ಬಿ.ನಾಗೇಂದ್ರಕುಮಾರ್



ಕೆ.ಆರ್.ಪೇಟೆ, ಡಿ.2– ತಾಲೂಕಿನ ಎಲ್ಲಾ ವರ್ಗದ ಜನರೊಂದಿಗೆ ಉತ್ತಮ ಒಡನಾಟ ಹೊಂದಿರುವ ತಮಗೆ ಈ ಬಾರಿ ಕಾಂಗ್ರೆಸ್ ಟಿಕೆಟ್ ನೀಡಿದರೆ ಗೆಲುವು ಸಾಧಿಸುತ್ತೇನೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಐಪನಹಳ್ಳಿ ಬಿ.ನಾಗೇಂದ್ರಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಸುವರ್ಣ ಸಮುದಾಯ ಭವನದಲ್ಲಿ ಅಭಿಮಾನಿಗಳು ಹಾಗೂ ಬೆಂಬಲಿಗರ ಸಭೆಯಲ್ಲಿ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ಕಾಂಗ್ರೆಸ್‌ನಲ್ಲಿದ್ದು ಪಕ್ಷವನ್ನು ತಾಯಿಯಂತೆ ನೋಡಿದ್ದೇನೆ. ನಮ್ಮ ನಾಯಕರಾದ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕೇಂದ್ರದ ಮಾಜಿ ಸಚಿವ ಕೆ.ರೆಹಮಾನ್ ಖಾನ್, ಜಿಲ್ಲಾ ಕಾಂಗ್ರೆಸ್ ನಾಯಕ ಚೆಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ ಹಾಗೂ ನನ್ನ ರಾಜಕೀಯ ಗುರುಗಳಾದ ಕೆ.ಬಿ.ಚಂದ್ರಶೇಖರ್ ಅವರ ಆಶೀರ್ವಾದ ಪಡೆದು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದೇನೆ. ಗ್ರಾಪಂ ಅಧ್ಯಕ್ಷ ಜಿಪಂ ಸದಸ್ಯನಾಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಪ್ರಸ್ತುತ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಪಕ್ಷದ ವರಿಷ್ಠರು ಗ್ರೀನ್ ಸಿಗ್ನಲ್ ಕೊಟ್ಟರೆ ಎಲ್ಲರ ಸಹಕಾರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿ ಶಾಸಕನಾಗಿ ಉತ್ತಮ ಕೆಲಸ ಮಾಡುವ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಒಳ್ಳೆಯ ಹೆಸರು ತರುವ ಕೆಲಸ ಮಾಡುತ್ತೇನೆ ಎಂದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ವಕ್ತಾರ ಡಾ.ರಾಮಕೃಷ್ಣೇಗೌಡ, ಬ್ಲಾಕ್ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ರಾಜಯ್ಯ, ಜಿಪಂ ಮಾಜಿ ಸದಸ್ಯ ದೇವರಾಜು, ಅಲ್ಪಸಂಖ್ಯಾತರ ಘಟಕದ ಹಾಫೀಜುಲ್ಲಾ ಷರೀಫ್, ಫಯಾಜ್, ಇಲಿಯಾಜ್ ಅಹಮದ್, ತಾಪಂ ಮಾಜಿ ಸದಸ್ಯ ಮಾಧವ ಪ್ರಸಾದ್, ನಾಗೇಂದ್ರ, ಮಂಜು, ಗ್ರಾಪಂ ಅಧ್ಯಕ್ಷ ನಾಗಣ್ಣ, ಕಾಂತರಾಜು, ಪುರಸಭಾ ಸದಸ್ಯ ಕೆ.ಆರ್.ರವೀಂದ್ರಬಾಬು, ವಿಜಯ್ ಕುಮಾರ್ ಸೇರಿದಂತೆ 600ಕ್ಕೂ ಹೆಚ್ಚು ಅಭಿಮಾನಿಗಳು ಸಭೆಯಲ್ಲಿದ್ದರು.

ಭತ್ತ, ರಾಗಿ ಖರೀದಿ ಕೇಂದ್ರ ತೆರೆಯಲು ಸರ್ಕಾರ ಮೀನಾಮೇಷ

ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಶಾಸಕ ರವೀಂದ್ರ ಶ್ರೀಕಂಠಯ್ಯ ಆರೋಪ



ಶ್ರೀರಂಗಪಟ್ಟಣ, ಡಿ.2– ಸರ್ಕಾರ ಭತ್ತ ಹಾಗೂ ರಾಗಿ ಖರೀದಿ ಕೇಂದ್ರತೆರೆಯಲು ಮೀನಾಮೇಷ ಎಣಿಸುತ್ತಿದ್ದು, ರೈತರ ಮೇಲೆ ಸ್ವಲ್ಪವೂ ಕಾಳಜಿ ಇಲ್ಲದಂತೆ ಕಾಣುತ್ತಿದೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಆರೋಪಿಸಿದರು.

ತಾಲೂಕಿನ ಸಬ್ಬನಕುಪ್ಪೆ ಹಾಗೂ ಮಲ್ಲೇಗೌಡನಕೊಪ್ಪಲು ಗ್ರಾಮದಲ್ಲಿ ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಹಿಂದೆ ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ರೈತರ ಕಣದಿಂದಲೇ ನೇರವಾಗಿ ಭತ್ತ ಹಾಗೂ ರಾಗಿ ಖರೀದಿ ಮಾಡಿ ರೈತರಿಗೆ ಅನುಕೂಲವಾಗುವಂತೆ ಮಾಡಿದ್ದರು. ಆ ದಿನಗಳಲ್ಲಿ ರೈತರಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಭತ್ತ ಖರೀದಿ ಮಾಡಲಾಗಿತ್ತು. ಆದರೆ ಈಗಿನ ಬಿಜೆಪಿ ಸರ್ಕಾರಕ್ಕೆ ರೈತರಿಗೆ ನೇರವಾಗಿ ದುಡ್ಡು ಹೋಗಬೇಕು. ಅದರಿಂದ ರೈತರಿಗೆ ಅನುಕೂಲವಾಗಬೇಕು ಎಂಬ ಮನೋಭಾವ ಕಾಣುತ್ತಿಲ್ಲ. ಈಗಾಗಲೇ ರೈತರು ಒಕ್ಕಣೆ ಕಾರ್ಯದಲ್ಲಿ ತೊಡಗಿದ್ದು, ಶೀಘ್ರ ಸರ್ಕಾರ ಖರೀದಿ ಕೇಂದ್ರ ತೆರೆಯದೇ ಹೋದಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಲಿದೆ. ಹಾಗಾಗಿ ಸರ್ಕಾರ ನೇರವಾಗಿ ರೈತರ ಕಣದಿಂದಲೇ ಭತ್ತ ಖರೀದಿಗೆ ಮುಂದಾಗುವಂತೆ ಒತ್ತಾಯಿಸುತ್ತೇನೆ ಎಂದರು.

ಸಕಾಲಕ್ಕೆ ಆಂಬ್ಯುಲೆನ್ಸ್ ಬಾರದಿದ್ದಕ್ಕೆ ಶಾಸಕರ ಬೇಸರ: ಸಕಾಲಕ್ಕೆ ಆಂಬುಲೆನ್ಸ್ ಬಾರದ ಕಾರಣ ಗ್ರಾಮದ ಮಹಿಳೆಯೊಬ್ಬರು ಸಾವನ್ನಪ್ಪಿರುವ ಬಗ್ಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರಿಗೆ ಸಬ್ಬನಕುಪ್ಪೆ ಗ್ರಾಮಸ್ಥರು ಗುದ್ದಲಿ ಪೂಜೆ ವೇಳೆ ದೂರಿದರು.

ಈ ಸಂಬಂಧ ಹಿರಿಯ ಆರೋಗ್ಯ ಅಧಿಕಾರಿಗಳೊಂದಿಗೆ ಚರ್ಚಿಸಿದ ಶಾಸಕರು, ಸಕಾಲಕ್ಕೆ ಆಂಬುಲೆನ್ಸ್ ಬಾರದಿದ್ದಕ್ಕೆ ತೀವ್ರ ಬೇಸರ ಹೊರ ಹಾಕಿದರು. ಇನ್ನು ಮುಂದೆ ಈ ರೀತಿ ಅನಾಹುತಗಳು ಆಗದಂತೆ ಎಚ್ಚರ ವಹಿಸಬೇಕು. ಘಟನೆಗೆ ಸಂಬಂಧಿಸಿದಂತೆ ಲೋಪವೆಸಗಿರುವ ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಈ ವೇಳೆ ಸಬ್ಬನಕುಪ್ಪೆ ಗ್ರಾಪಂ ಅಧ್ಯಕ್ಷೆ ಮಂಜುಳಾ, ಸದಸ್ಯರಾದ ಶಂಕರೇಗೌಡ, ಸಾವಿತ್ರಮ್ಮ, ತಾಪಂ ಮಾಜಿ ಸದಸ್ಯ ಪ್ರಕಾಶ್, ಮಾಜಿ ಛೇರ್‌ಮನ್ ರಾಮಲಿಂಗೇಗೌಡ, ಲೋಕೋಪಯೋಗಿ ಇಲಾಖೆ ಎಇಇ ರೇವಣ್ಣ, ಪಿಡಿಓ ಲಕ್ಷ್ಮೀಗೌಡ, ಗ್ರಾಮಸ್ಥರಾದ ಕಾಂತರಾಜು, ಸಿದ್ದೇಗೌಡ, ಚಂದ್ರಶೇಖರ್ ಸೇರಿದಂತೆ ಇತರರಿದ್ದರು.

ಹೆಳವರಕೊಪ್ಪಲಿಗೆ ಶಾಸಕ ಸಿಎಸ್‌ಪಿ ಭೇಟಿ, ಅಹವಾಲು ಸ್ವೀಕಾರ

ರೈತ ಸಂಘ ತೊರೆದ 35ಕ್ಕೂ ಹೆಚ್ಚು ಮಂದಿ ಜೆಡಿಎಸ್‌ಗೆ ಸೇರ್ಪಡೆ



ಚಿನಕುರಳಿ, ಡಿ.2– ಇಲ್ಲಿಗೆ ಸಮೀಪದ ಹೆಳವರ ಕೊಪ್ಪಲು ಗ್ರಾಮಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಶುಕ್ರವಾರ ಭೇಟಿ ನೀಡಿ ಕುಂದುಕೊರತೆ ಸಭೆ ನಡೆಸಿ, ಗ್ರಾಮಸ್ಥರ ಅಹವಾಲು ಸ್ವೀಕರಿಸಿದರು.

ಈ ವೇಳೆ ಗ್ರಾಮಸ್ಥರು ರಾಗಿಮುದ್ದನಹಳ್ಳಿಯಿಂದ ಗ್ರಾಮದ ಮಾರ್ಗವಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿಪಡಿಸಬೇಕು. ಗ್ರಾಮದಲ್ಲಿ ಸರ್ವೆ ನಂ.449ರಲ್ಲಿ 6 ಎಕರೆ ಸರ್ಕಾರಿ ಜಮೀನಿದ್ದು, ಆ ಜಾಗದಲ್ಲಿ ದೇವಸ್ಥಾನ, ಅಂಗನವಾಡಿ, ಮಕ್ಕಳಿಗೆ ಆಟವಾಡಲು ಕ್ರೀಡಾಂಗಣ ನಿರ್ಮಾಣ ಮಾಡಿಕೊಡಬೇಕು. ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಮತ್ತು ರೇಣುಕಾ ಎಲ್ಲಮ್ಮ ದೇವರ ದೇವಸ್ಥಾನ ನಿರ್ಮಿಸಿಕೊಡುವಂತೆ ಮನವಿ ಸಲ್ಲಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಗ್ರಾಮಸ್ಥರ ಮನವಿಯಂತೆ ಎಲ್ಲಾ ಕೆಲಸ ಮಾಡಿಕೊಡಲು ಬದ್ಧನಿದ್ದೇನೆ. ಸರ್ಕಾರಿ ಜಮೀನಿನಲ್ಲಿ ಕ್ರೀಡಾಂಗಣ, ದೇವಸ್ಥಾನ ಹಾಗೂ ಅಂಗನವಾಡಿ ನಿರ್ಮಾಣಕ್ಕೆ ಕ್ರಮಹಿಸಲಾಗುವುದು ಎಂದರು.

ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ತಾರತಮ್ಯ ಮಾಡಿಲ್ಲ. ನಾನು ಜನರ ಮಧ್ಯೆ ಇದ್ದು ಜನಸೇವೆ ಮಾಡಿಕೊಂಡು ಬಂದವನು. ಎಂದಿಗೂ ಸಣ್ಣತನದ ರಾಜಕಾರಣ ಮಾಡಿಲ್ಲ. ಮಾಡಿದ್ದರೆ ನಾನು ಇಷ್ಟೊತ್ತಿಗೆ ರಾಜಕಾರಣ ಬಿಟ್ಟು ಮನೆ ಸೇರಿಕೊಳ್ಳುತ್ತಿದ್ದೆ. ಜನಪರ ಕೆಲಸ ಮಾಡಿರುವು ದಕ್ಕೆ ಕ್ಷೇತ್ರದ ಜನತೆ ನನ್ನನ್ನು 3 ಬಾರಿ ಶಾಸಕನಾಗಿ, ಸಂಸದನಾಗಿ ಆಯ್ಕೆ ಮಾಡಿ ರಾಜ್ಯದ ಸಚಿವನಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಯಾವುದೇ ವ್ಯಕ್ತಿಯಾದರೂ ನೀರು ಹರಿಯುವ ಕಡೆಗೆ ಈಜಬೇಕೆ ಹೊರತು ಅದರ ವಿರುದ್ಧ ಈಜಬಾರದು ಎಂದರು.

ಇದೇ ವೇಳೆ ವಿನಾಯಕ ಗೆಳೆಯರ ಬಳಗದ ಕಾಂತರಾಜು, ಸೋಮು, ಬಸವಣ್ಣ, ಶಿವಕುಮಾರ, ಪುನೀತ್, ಸಿದ್ದರಾಜು, ಪ್ರೀತಮ್, ಅನಿಲ್, ಬಸವರಾಜು, ಅಮಿತ್, ದೇವರಾಜು, ಅಭಿಷೇಕ್, ವಿಜಿಕುಮಾರ್, ನಾಗರಾಜು ಸೇರಿದಂತೆ 35ಕ್ಕೂ ಅಧಿಕ ಮಂದಿ ಯುವಕರು ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ರೈತ ಸಂಘ ತೊರೆದು ಜೆಡಿಎಸ್ ಸೇರ್ಪಡೆಗೊಂಡರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಭವಾನಿ, ಉಪಾಧ್ಯಕ್ಷ ವರದರಾಜು, ನಿವೃತ್ತ ಪ್ರಾಂಶುಪಾಲ ಶಿವಣ್ಣ ಎಪಿಎಂಸಿ ಮಾಜಿ ಅಧ್ಯಕ್ಷ ಆರ್.ಎಂ.ಪುಟ್ಟರಾಜು, ನಾಗರಾಜು, ಗ್ರಾಮದ ಯಜಮಾನರಾದ ಚಿಕ್ಕಯ್ಯ, ಮಸಿಯಯ್ಯ, ಕೆಂಗಯ್ಯ, ಶಿವಣ್ಣ ಇತರರಿದ್ದರು.

ಮದ್ಯ ಮಾರಾಟ ನಿಷೇಧ

ಮಂಡ್ಯ, ಡಿ.2– ಶ್ರೀರಂಗಪಟ್ಟಣ ಟೌನ್ ಮತ್ತು ಗಂಜಾಂನಲ್ಲಿ ಹನುಮ ಜಯಂತಿ ಅಂಗವಾಗಿ ಡಿ.4ರಂದು ಶೋಭ ಸಂಕೀರ್ತನಾ ಯಾತ್ರೆ ನಡೆಯಲಿದ್ದು ಸಹಸ್ರಾರು ಭಕ್ತರು ಭಾಗವಹಿಸಲಿದ್ದಾರೆ.

ಶ್ರೀರಂಗಪಟ್ಟಣ ಅತೀ ಸೂಕ್ಷ್ಮ ಪ್ರದೇಶವಾಗಿರುವುದರಿಂದ ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಅಂದು ಬೆಳಗ್ಗೆ 6 ರಿಂದ ಡಿ.5ರ ಬೆಳಗ್ಗೆ 6 ರವರೆಗೆ ಶ್ರೀರಂಗ ಪಟ್ಟಣ ಟೌನ್ ಮತ್ತು ಗಂಜಾಂ ವ್ಯಾಪ್ತಿಯಲ್ಲಿ ಎಲ್ಲಾ ತರಹದ ಮದ್ಯದಂಗಡಿ/ಬಾರ್‌ಗಳನ್ನು ಮುಚ್ಚಲು ಹಾಗೂ ಮದ್ಯ ಮಾರಾಟ, ಸಾಗಾಣಿಕೆ ಮತ್ತು ಶೇಖರಣೆ ಮಾಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಡಾ.ಎಚ್.ಎನ್. ಗೋಪಾಲಕೃಷ್ಣ ಆದೇಶ ಹೊರಡಿಸಿದ್ದಾರೆ.

ಜೆಎಸ್‌ಎಸ್ ಸಂಗೀತ ಸಮ್ಮೇಳನಕ್ಕೆ ಚಾಲನೆ

ಕಲೆಯನ್ನು ಆಸ್ವಾದಿಸುವುದು ಸಂಗೀತ ಸಾಧನೆಯ ಮೊದಲ ಹೆಜ್ಜೆ: ಸಮ್ಮೇಳನಾಧ್ಯಕ್ಷ ವಿದ್ವಾನ್ ವಿ. ನಂಜುಂಡಸ್ವಾಮಿ

ಮೈಸೂರು, ಡಿ.2(ಎಸ್‌ಪಿಎನ್)– ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸ್ಮರಣಾರ್ಥ ಆಯೋಜಿಸಿರುವ ಐದು ದಿನಗಳ 27ನೇ ಸಂಗೀತ ಸಮ್ಮೇ ಳನಕ್ಕೆ ಸಮ್ಮೇಳನಾಧ್ಯಕ್ಷ ವಿದ್ವಾನ್ ವಿ. ನಂಜುಂಡಸ್ವಾಮಿ ಹಾಗೂ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಶುಕ್ರವಾರ ಚಾಲನೆ ದೊರಕಿತು.



ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸ್ಮರಣಾರ್ಥ ಆಯೋಜಿಸಿರುವ ಐದು ದಿನಗಳ 27ನೇ ಸಂಗೀತ ಸಮ್ಮೇಳನಕ್ಕೆ ಸಮ್ಮೇಳನಾಧ್ಯಕ್ಷ ವಿದ್ವಾನ್ ವಿ.ನಂಜುಂಡಸ್ವಾಮಿ ಹಾಗೂ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಶುಕ್ರವಾರ ಚಾಲನೆ ನೀಡಿದರು.

ಮೈಸೂರು ಸರಸ್ವತಿ ಪುರಂ ಮಹಿಳಾ ಕಾಲೇಜು ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸಂಗೀತ ಸಮ್ಮೇಳನಕ್ಕೆ ಚಾಲನೆ ನೀಡಿದ ನಂತರ ಮಾತನಾಡಿದ ಸಮ್ಮೇಳನಾಧ್ಯಕ್ಷ ವಿದ್ವಾನ್ ವಿ.ನಂಜುಂಡಸ್ವಾಮಿ, ನಾವೆಲ್ಲಾ ಕಂಪ್ಯೂಟರ್, ರೋಬೋಟ್, ಇಂಟರ್‌ನೆಟ್, ಫೈಜಿ ಹಾಗೂ ಗೊಗ್ಲಾ ಚಾರ್ಯ ಯುಗದಲ್ಲಿದ್ದೇವೆ ಎಂದರು.

ಕಳೆದೆರಡು ವರ್ಷಗಳಿಂದ ಕೊರೊನಾದಿಂದಾಗಿ ಇಂಟರ್‌ನೆಟ್ ಮೂಲಕ ಮನೆಯಲ್ಲೇ ಕುಳಿತು ಕೆಲಸ ಮಾಡುವ ಪರಿಸ್ಥಿತಿ ನೋಡುವಂತಾಯಿತು. ಹಾಗಾಗಿ ನಾವೆಲ್ಲಾ ಈಗ ತಂತ್ರಜ್ಞಾನ ಬಳಸಿ, ಕೆಲಸ ಮಾಡುವ ಯುಗದಲ್ಲಿದ್ದೇವೆ. ಕೊರೊನಾ ವೈರಸ್ ದೇಶವ್ಯಾಪಿ ಹರಡಿದ ಸಂದರ್ಭದಲ್ಲಿ ಮಾನವ ಹೇಗೆ ಮತ್ತೊಬ್ಬರಿಗೆ ಸ್ಪಂದಿಸಬೇಕು ಎಂಬ ಸತ್ಯವನ್ನು ಈ ಸಾಂಕ್ರಾಮಿಕ ಸೋಂಕು ತಿಳಿಸಿಕೊಟ್ಟ ಪ್ರಸಂಗವನ್ನು ವಿವರಿಸಿದರು.

ಮೈಸೂರಿನಲ್ಲಿ ಜೆಎಸ್‌ಎಸ್ ಸಂಸ್ಥೆ ಶೈಕ್ಷಣಿಕ, ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದೆ. ಅದೇ ರೀತಿ ಸಂಗೀತ ಕ್ಷೇತ್ರದಲ್ಲೂ ಈ ಹಿಂದೆ 26 ಸಂಗೀತ ಸಮ್ಮೇಳನವನ್ನು ಯಶಸ್ವಿಯಾಗಿ ನಿರ್ವಹಿಸಿದ ಕೀರ್ತಿ ಸಂಸ್ಥೆಗೆ ಸಲ್ಲುತ್ತದೆ. ಇದರ ರೂವಾರಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಎಂಬುದು ನಮ್ಮೆಲ್ಲರಿಗೂ ತಿಳಿದ ವಿಷಯ. ಈ ಬಾರಿಯ ಸಂಗೀತ ಸಮ್ಮೇಳನದ ಅಧ್ಯಕ್ಷನನ್ನಾಗಿ ನನ್ನನ್ನು ಆಯ್ಕೆ ಮಾಡಿರುವುದು ನನಗೆ ಅತೀ ಸಂತೋಷವಾಗಿದೆ ಎಂದರು.

ಇತ್ತೀಚೆಗೆ ಸಾಂಸ್ಕೃತಿಕ ಸಭೆಗಳ ಕಾರ್ಯಕ್ರಮಗಳಲ್ಲಿ ಕಿರಿಯರ ಹಾಜರಿ (ಕೇಳ್ಮೆ–K) ಕಡಿಮೆ ಆಗುತ್ತಿರುವುದು ಬೇಸರದ ಸಂಗತಿ. ಆದರೆ, ಕಿರಿಯರೇ ಈ ವೇದಿಕೆಯಲ್ಲಿ ಪ್ರದರ್ಶನ ನೀಡುತ್ತಿರುವ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿರುವುದು ಸಂತೋಷ ಸಂಗತಿ. ಈ ದಿಸೆಯಲ್ಲಿ ಹೇಳುವುದಾದರೆ ಕಿರಿಯರು ಆಸ್ವಾದಿಸುವುದನ್ನು ಮೊದಲ ಹೆಜ್ಜೆಯಾಗಿ ಸ್ವೀಕರಿಸಬೇಕು ಎಂದು ನುಡಿದರು.

ಕಿರಿಯರಿಗೆ ತಾಳ್ಮೆ (ತಾಳ್ಮೆ–T) ಕೂಡ ಕಡಿಮೆ. ದೃಶ್ಯ ಮಾಧ್ಯಮಗಳಿಂದ ಆಕರ್ಷಿತರಾಗಿ ಕಲಾ ಕ್ಷೇತ್ರದಲ್ಲಿ ಏಕಾಏಕಿ ಪ್ರಸಿದ್ಧಿಗೆ ಬರುವ ಹಂಬಲ. ಇದು ಅಸಾಧ್ಯ ಸಂಗತಿ. ಮೊದಲು ಸರಿಯಾದ ಗುರುಗಳಿಂದ ಶ್ರದ್ಧಾ, ಭಕ್ತಿಯಿಂದ ಸಂಗೀತದ ವಿವಿಧ ಆಯಾಮಗಳಲ್ಲಿ ಕಲಿತು ಸಾಧಕರಾಗಬೇಕೇ ಹೊರತು, ಅನ್ಯ ಪ್ರಯತ್ನಗಳಿಂದ ಮುಖ್ಯವಾಹಿನಿಗೆ ಬರಲು ಸಾಧ್ಯವಿಲ್ಲ. ಹಾಗಾಗಿ ತಾಳ್ಮೆಯಿಂದ ಕಲಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಕಿರಿಯ ಮಿತ್ರರು ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಾಣ್ಮೆ(J)ಯಿಂದ ಪಡೆದ ಕಲಾಜ್ಞಾನವನ್ನು (ಕೇಳ್ಮೆ–ತಾಳ್ಮೆ) ಕಿರಿಯರು ಅಹಂಕಾರ ಬಿಟ್ಟು ಆರಾಧನೆ ಮಾಡುವ ಮಾರ್ಗ ಅತ್ಯುತ್ತಮ. ಕಲೆಯಲ್ಲಿ ತೊಡಗಿಸಿಕೊಳ್ಳುವ ಕಿರಿಯರು ಕೇಳ್ಮೆ–ತಾಳ್ಮೆ–ಜಾಣ್ಮೆ (K T J) ಸೂತ್ರವನ್ನು ತಮ್ಮ ಕಲಿಕಾ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಈ ಕ್ಷೇತ್ರದಲ್ಲಿ ಎತ್ತರದ ಸ್ಥಾನಕ್ಕೆ ಬೆಳೆಯಲು ಸಾಧ್ಯ ಎಂದರು.

ಸಂಗೀತ ಕ್ಷೇತ್ರ ಬರೀ ಕೇಳುವುದಕ್ಕೆ ಮಾತ್ರ ಸಿಮೀತವಲ್ಲ. ಸಂಗೀತದಿಂದ ಸಮಾಜದ ಆರೋಗ್ಯ, ಬದುಕಿನಲ್ಲಿ ನೆಮ್ಮದಿ ಪಡೆಯಲು ಸಾಧ್ಯವಿದೆ. ವಿವಿಧ ಸ್ತರಗಳಲ್ಲಿ ವಚನಕಾರರು, ದಾಸರೇಣ್ಯರು, ಸಂತಶ್ರೇಷ್ಠರು ಸೇರಿದಂತೆ ಅನೇಕರು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಸಮಾಜದ ಪರಿವರ್ತನೆಗೆ ಪ್ರಯತ್ನಿಸಿದ್ದಾರೆ. ಅವರ ಕಾಲದಲ್ಲಿ ರಚಿತವಾದ ಕೃತಿಗಳನ್ನು ಒಮ್ಮೆ ಅಧ್ಯಯನ ನಡೆಸಿದರೆ, ಸಂಗೀತ ಕ್ಷೇತ್ರ ಎಷ್ಟು ವಿಸ್ತಾರವಾದುದು ಎಂಬುದು ಎಲ್ಲರಿಗೂ ತಿಳಿಯುತ್ತದೆ ಎಂದು ಹೇಳಿದರು.

ಕಲೆ ಮತ್ತು ಸಂಸ್ಕೃತಿ ನಿಂತ ನೀರಲ್ಲ ಒಂದು ದೇಶದ ನಾಗರಿಕತೆಯನ್ನು ಅಳೆಯುವ ಸಾಧನ, ಮಾಪನ. ಹಾಗಾಗಿ ಸಾಧಕರ ಜ್ಞಾನವನ್ನು ದಾಖಲೆ ರೂಪದಲ್ಲಿ ಸಂರಕ್ಷಣೆ ಮಾಡಿ, ಮುಂದಿನ ಪೀಳಿಗೆಗೆ ವರ್ಗಾಯಿಸುವುದು ಈ ಕಾಲಘಟ್ಟದವರ ಜವಾಬ್ದಾರಿಯಾಗಿದೆ. ಭಾರತೀಯ ಸಂಸ್ಕೃತಿ, ಪರಂಪರೆ ಜಗತ್ತಿನ ಅನೇಕ ದೇಶಗಳು ಒಪ್ಪಿಕೊಂಡಿರುವುದು ಸಂತೋಷದ ಸಂಗತಿ ಎಂದರು.



27ನೇ ಸಂಗೀತ ಸಮ್ಮೇಳನದಲ್ಲಿ ವಿದ್ವಾನ್ ಮೈಸೂರು ವಿ.ಚಂದನ್ ಕುಮಾರ್ ಕೊಳಲು ನುಡಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಸಮ್ಮೇಳನಾಧ್ಯಕ್ಷ ವಿದ್ವಾನ್.ವಿ.ನಂಜುಂಡಸ್ವಾಮಿ ಅವರನ್ನು ವಿವಿಧ ಕಲಾತಂಡದೊಂದಿಗೆ ವೇದಿಕೆ ಕರೆತರಲಾಯಿತು. ವೇದಿಕೆಯಲ್ಲಿ ಹಿರಿಯ ಕಲಾವಿದ ಪ್ರೊ.ರಾ.ವಿಶ್ವೇಶ್ವರನ್, ಖ್ಯಾತ ಸರ್ಜನ್ ಡಾ.ಸಿ.ಜಿ.ನರಸಿಂಹನ್, ಸಂಗೀತಾ ವಿದ್ಯಾನಿಧಿ ಮೈಸೂರು ಎಂ. ನಾಗರಾಜ್ ಸೇರಿದಂತೆ ಇತರರಿದ್ದರು. ಕಾರ್ಯಕ್ರಮದ ನಂತರ ಸಂಗೀತ ಕಾರ್ಯಕ್ರಮ ಜರುಗಿತು. ಮೈಸೂರು ವಿ.ಚಂದನ್ ಕುಮಾರ್ (ಕೊಳಲು), ಮೈಸೂರು ಎಂ. ಸುಮಂತ್ (ವೈಲಿನ್), ಕೆ.ಯ.ಜಯಚಂದ್ರರಾವ್ (ಮೃದಂಗ), ತುಮಕೂರು ಬಿ.ಶಶಿಶಂಕರ್ (ಘಟಂ) ನುಡಿಸಿದರು.

ನಾನು ಸದಾ ಮೆರಿಟ್ ಸ್ಟೂಡೆಂಟ್

ಮೈಸೂರು: ನಾನು ಮೆರಿಟ್ ಸ್ಟೂಡೆಂಟ್, ಮೆರಿಟ್ ಮೂಲಕ ಸೀಟ್ ಪಡೆಯಲು ಬಯಸುತ್ತೇನೆಯೇ ಹೊರತು, ಪೇಮೆಂಟ್ ಮೂಲಕ ಅಲ್ಲ. ಹಾಗಾಗಿ ರಾಜಕಾರಣದಲ್ಲಿ ಮಂತ್ರಿಯಾಗದಿದ್ದರೂ ಸಮಾಜದಲ್ಲಿ ಸೇವೆ ಮಾಡಬಹುದು ಎಂಬ ಮಾರ್ಗ ನನಗೆ ತಿಳಿದಿದೆ ಎಂದು ಎಸ್.ಎ.ರಾಮದಾಸ್ ಅಭಿಪ್ರಾಯಪಟ್ಟರು.


ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದ್ದ ಸಭಿಕರೊಬ್ಬರು, ನೀವು ಮಂತ್ರಿಯಾಗಬೇಕಿತ್ತು ಎಂಬ ಆಶಯ ವ್ಯಕ್ತಪಡಿಸಿದರು. ಅವರ ಅಭಿಮಾನಕ್ಕೆ ನಾನು ಚಿರಋಣಿ. ನಾನು ಯಾವತ್ತು ಮಂತ್ರಿಯಾಗಿ ಕೆಲಸ ಮಾಡಬೇಕೆಂಬ ಹಂಬಲ ಹೊಂದಿಲ್ಲ. ಬದಲಾಗಿ, ನಿಮ್ಮೊಳಗೊಬ್ಬನಾಗಿ ಸಮಾಜ ಸೇವೆ ಮಾಡಲು ಬಯಸುತ್ತೇನೆ. ಇಂದು ನಾನು ನೆಮ್ಮದಿಯಾಗಿ ನನ್ನ ಇತಿಮಿತಿ ಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರು.

'ಮಡಿಲು' ಯೋಜನೆ ಮೂಲಕ ಅನೇಕ ಬಡವರಿಗೆ ಸೀಮಂತ ಕಾರ್ಯಕ್ರಮ ಹಮ್ಮಿಕೊಂಡು ಇಲ್ಲಿಯವರೆಗೆ ಏಳು ಸಾವಿರಕ್ಕೂ ಅಧಿಕ ಮಂದಿ ಈ ಕಾರ್ಯಕ್ರಮದ ಫಲಾನುಭವಿಗಳಾಗಿದ್ದಾರೆ. ಇದರಲ್ಲಿ ಎಲ್ಲಾ ವರ್ಗದವರಿದ್ದಾರೆ. ಹಾಗಾಗಿ ಕಲಾವಿದರು, ಆರೋಗ್ಯ ಕ್ಷೇತ್ರದಲ್ಲಿ ಸಂಗೀತ ಚಿಕಿತ್ಸೆ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಮನವಿ ಮಾಡಿದರು.

ನನ್ನಮ್ಮ ಬದುಕಿದ್ದಾಗ ನನಗೊಂದು ಕಿವಿ ಮಾತು ಹೇಳಿದ್ದರು. ರಾಜಕಾರಣದಲ್ಲಿ ಪದವಿಗಾಗಿ ಅನ್ಯ ಮಾರ್ಗ ಬೇಡ. ತಾನಾಗಿ ಅಧಿಕಾರ ಒಲಿದು ಬಂದರೆ ಸ್ವೀಕರಿಸು ಇಲ್ಲವಾದರೆ, ನಿನ್ನ ಇತಿಮಿತಿಯಲ್ಲಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವುದು ಸೂಕ್ತ ಎಂದಿದ್ದರು. ಅದನ್ನು ಇಂದಿಗೂ ಚಾಚು ತಪ್ಪದೇ ಪಾಲಿಸುತ್ತಿದ್ದೇನೆ. ಬಹುತೇಕ ಕಲಾವಿದರು ಭಾಗವಹಿಸಿದ್ದೀರಿ, ಸಂಗೀತ ಕ್ಷೇತ್ರದಲ್ಲಿ ಬೇಸಿಕ್ ಸೈನ್ಸ್ ಅನ್ನು ಅಪ್ಲೈಡ್ ಸೈನ್ಸ್ ಆಗಿ ಪರಿವರ್ತಿಸಬೇಕು. ಇದಕ್ಕೆ ತಗಲುವ 25 ಲಕ್ಷ ರೂ.ಗಳ ಪ್ರಾರಂಭಿಕ ಪ್ರೋತ್ಸಾಹ ಅನುದಾನವನ್ನು ಕೊಡಲು ಸಿದ್ಧನಿದ್ದೇನೆ ಎಂದರು.

ವರಕೋಡು ಬಳಿ ಚಿರತೆ ಪ್ರತ್ಯಕ್ಷ

ಮೈಸೂರು, ಡಿ.2(ಎಸ್‌ಪಿಎನ್)– ಮೈಸೂರು ತಾಲೂಕು ವರಕೋಡು ಗ್ರಾಮದ ಮುರಾರ್ಜಿ ವಸತಿ ಶಾಲೆ ಹಿಂಭಾಗದ ಚಟ್ಟಹಳ್ಳಿ ಕಾಲುವೆ ರಸ್ತೆಯಲ್ಲಿ ಮಂಗಳವಾರ ಬೆಳಂಬೆಳಗ್ಗೆ ಚಿರತೆ ಪ್ರತ್ಯಕ್ಷವಾಗಿದ್ದು, ತಾಲೂಕಿನ ಜನತೆ ಬೆಚ್ಚಿಬಿದ್ದಿದ್ದಾರೆ.



ಕಾಂಗ್ರೆಸ್ ಮುಖಂಡ, ವರುಣಾ ಗ್ರಾಮದ ನಿವಾಸಿ ವರುಣಾ ಮಹೇಶ್, ಮಂಗಳವಾರ ವರಕೋಡು ಬಳಿಯಿರುವ ತಮ್ಮ ಜಮೀನಿಗೆ ಬೆಳಂಬೆಳಗ್ಗೆ ಕಾರಿನಲ್ಲಿ ಹೋಗುವಾಗ ಚಟ್ಟಹಳ್ಳಿ ಕಾಲುವೆಯ ಬಳಿ ಚಿರತೆ ಸಾವಧಾನವಾಗಿ ನಡೆದುಕೊಂಡು ಹೋಗುತ್ತಿದ್ದ ದೃಶ್ಯವನ್ನು ಕಂಡಿದ್ದಾರೆ. ನನ್ನ ಕಾರಿನಲ್ಲಿ ನಾನು ಸೇರಿದಂತೆ ನಾಲ್ಕು ಮಂದಿ ಇದ್ದೆವು. ನಾವು ಹೋಗುತ್ತಿದ್ದ ಮಾರ್ಗದಲ್ಲಿ ಬಾರೀ ಗಾತ್ರದ ಚಿರತೆಯನ್ನು ಕಂಡು ಭಯವಾಯಿತು. ಆದರೂ ಧೈರ್ಯ ಮಾಡಿ ಕಾರಿನಲ್ಲಿ ಕುಳಿತೇ ಚಿರತೆಯನ್ನು ಹಿಂಬಾಲಿಸಿ ತಮ್ಮ ಮೊಬೈಲ್‌ನಲ್ಲಿ ಅದನ್ನು ಸೆರೆಹಿಡಿದೆವು ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಂತೆಯೇ ಗುರುವಾರ ಬೆಳಗ್ಗೆ ವರುಣಾ ಗ್ರಾಮದ ನಿವಾಸಿ ಸಂತೋಷ ಎಂಬುವವರಿಗೆ ಅದೇ ಸ್ಥಳದಲ್ಲಿ ಮರಿ ಚಿರತೆ ಕಾಣಿಸಿಕೊಂಡಿದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಚಿರತೆ ಕಾಣಿಸಿಕೊಳ್ಳುವ ಬಗ್ಗೆ ವರುಣಾ ಹೋಬಳಿಯ ಜನರು ಮಾತನಾಡಿಕೊಳ್ಳುತ್ತಿದ್ದರು. ಇದೀಗ ಸ್ವತಃ ನನಗೆ ಚಿರತೆ ಕಾಣಿಸಿಕೊಂಡಿದ್ದು, ಅರಣ್ಯಾಧಿಕಾರಿಗಳು ಈ ಪ್ರದೇಶದಲ್ಲಿರುವ ಚಿರತೆಗಳನ್ನು ಹಿಡಿಯಲು ಬೋನ್ ಇಡುವಂತೆ ಒತ್ತಾಯಿಸಿದರು. ವರಕೋಡು ಸಮೀಪ 140 ಎಕರೆ ಸಾಮಾಜಿಕ ಅರಣ್ಯ ಪ್ರದೇಶವಿದೆ. ಈ ಅರಣ್ಯದಲ್ಲಿ ಜಿಂಕೆ, ನಾಯಿಗಳಿದ್ದು, ಆಹಾರ ಹುಡುಕಿಕೊಂಡು ಬಂದು ಚಿರತೆಗಳು ಈ ಪ್ರದೇಶದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿವೆ ಎಂದು ಹೇಳಿದರು.

ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಮಿತಿ ನಿರ್ವಹಣೆಯ ಲಲಿತಾ ಪ್ರೌಢಶಾಲೆಯಲ್ಲಿ ವಿಜ್ಞಾನ ದಿನಾಚರಣೆ

ವಿದ್ಯಾರ್ಥಿಗಳಿಂದ ರೂಪಿಸಲ್ಪಟ್ಟ ಮಾದರಿಗಳು ವಿಸ್ಮಯಕಾರಿ

ಮೈಸೂರು, ಡಿ.2(ಎಸ್‌ಬಿಡಿ)– ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಮಿತಿ ನಿರ್ವಹಿಸುತ್ತಿರುವ ಮೈಸೂರಿನ ಲಲಿತ ಪ್ರೌಢಶಾಲೆಯಲ್ಲಿ ಇಂದು ವಿಜ್ಞಾನ ದಿನ ಆಚರಿಸಲಾಯಿತು.

ನೈರುತ್ಯ ರೈಲ್ವೆ ಮೈಸೂರು ವಿಭಾಗೀಯ ವ್ಯವಸ್ಥಾಪಕ ರಾಹುಲ್ ಅಗರ್ವಾಲ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಿರಂತರ ಅಧ್ಯಯನದ ಮೂಲಕ ಅಪಾರ ಜ್ಞಾನ ಸಂಪಾದಿಸಿರುವ ಭಾರತದ ಯುವ ವಿಜ್ಞಾನಿಗಳು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳು ವಿಜ್ಞಾನದ ಬಗ್ಗೆ ಹೆಚ್ಚೆಚ್ಚು ಅಧ್ಯಯನ ನಡೆಸಬೇಕು. ಹೊಸ ಅನ್ವೇಷಣೆಯ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಮಿತಿ ಮೈಸೂರು ವಿಭಾಗದ ಅಧ್ಯಕ್ಷೆ ಶ್ರೀಮತಿ ಪೂಜಾ ಅಗರ್ವಾಲ್ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಯಲ್ಲಿ ಶಿಕ್ಷಕರ ಮಾರ್ಗದರ್ಶನ ಬಹುಮುಖ್ಯವಾಗಿರುತ್ತದೆ. ತರಗತಿಯಲ್ಲಿ ಪಠ್ಯದ ಜೊತೆಗೆ ಅತ್ಯಾಧುನಿಕ ತಂತ್ರಜ್ಞಾನದ ಆವಿಷ್ಕಾರ ಹಾಗೂ ಅದರ ಉಪಯೋಗದ ಬಗ್ಗೆಯೂ ಅರಿವು ಮೂಡಿಸ ಬೇಕು. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಮೂಢನಂಬಿಕೆಗಳನ್ನು ಗಮನಿಸಿದರೆ ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯೋನ್ಮುಖರಾಗ ಬೇಕೆಂದು ಸಲಹೆ ನೀಡಿದರು.



ಕಾರ್ಯಕ್ರಮದಲ್ಲಿ ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕರಾದ ವಿನಾಯಕ್ ಆರ್.ನಾಯಕ್, ಶ್ರೀಮತಿ ವಿಜಯ, ಶಾಲೆ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಮತ್ತು ನೈರುತ್ಯ ರೈಲ್ವೆ ವಿಭಾಗದ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ವಿಜ್ಞಾನ ಮಾದರಿ ಪ್ರದರ್ಶನ: ನರ್ಸರಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿ ಗಳು ವಿಜ್ಞಾನಕ್ಕೆ ಸಂಬಂಧಿತ 60ಕ್ಕೂ ಹೆಚ್ಚು ಮಾದರಿಗಳನ್ನು ತಯಾರಿಸಿ ತಂದು ಪ್ರದರ್ಶನಕ್ಕಿಟ್ಟಿದ್ದರು. ನೀರು ಹಾಗೂ ಪರಿಸರ ಸಂರಕ್ಷಣೆ, ಪರಿಸರ ನಾಶದಿಂದಾಗುವ ದುಷ್ಪರಿಣಾಮ, ಜಾಗತಿಕ ತಾಪಮಾನ, ಮಾರಕ ಪ್ಲಾಸ್ಟಿಕ್ ನಿಷೇಧ, ಹೀಗೆ ಹತ್ತಾರು ಮಹತ್ವದ ವಿಷಯಗಳ ಬಗ್ಗೆ ಬೆಳಕು ಚೆಲ್ಲುವ ಮಾದರಿಗಳನ್ನು ವೀಕ್ಷಿಸಿದ ಗಣ್ಯರು, ಮಕ್ಕಳಲ್ಲಿರುವ ವಿಜ್ಞಾನದ ಮೇಲಿನ ಆಸಕ್ತಿ ಹಾಗೂ ನೈಪುಣ್ಯತೆಯನ್ನು ಶ್ಲಾಘಿಸಿದರು.

ಬೈಕ್ ಹಿಂದಿಕ್ಕಿದ ದಲಿತ ಯುವಕನ ಮೇಲೆ ಹಲ್ಲೆಗೆ ಖಂಡನೆ

ಮೈಸೂರು, ಡಿ.2– ಬೈಕ್ ಹಿಂದಿಕ್ಕಿದ ಎಂಬ ಕ್ಷುಲ್ಲಕ ಕಾರಣಕ್ಕೆ ಕೋಲಾರದಲ್ಲಿ ದಲಿತ ಯುವಕ ಉದಯ್ ಕಿರಣ್‌ನನ್ನು ಮರಕ್ಕೆ ಕಟ್ಟಿ ಥಳಿಸಿ ಅವಮಾನಿಸುವ ಮೂಲಕ ಆತನ ಆತ್ಮಹತ್ಯೆಗೆ ಕಾರಣರಾಗಿದ್ದನ್ನು ಕ್ಷಮಿಸಲಾಗದು ಎಂದು ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ ಹೇಳಿದ್ದಾರೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಜಾತಿ ಎಂಬ ವಿಷಕಾರಿ ಪದ್ಧತಿ ಇನ್ನೂ ಗಟ್ಟಿಯಾಗುತ್ತಿರುವುದು ದುರಂತ. ರಾಜಕೀಯ ಉದ್ದೇಶಗಳಿಗಾಗಿ ಜಾತಿ ವ್ಯವಸ್ಥೆಯನ್ನು ಪೋಷಿಸಿಕೊಂಡು ಬರುತ್ತಿರುವುದೇ ಇದಕ್ಕೆ ಕಾರಣ. ಬಿಜೆಪಿ ಅಧಿಕಾರಾವಧಿಯಲ್ಲಿ ಮನುವಾದ ಮತ್ತು ಜಾತಿ ಕ್ರೌರ್ಯ ಇನ್ನಷ್ಟು ಹೆಚ್ಚಾಗುತ್ತಿದೆ. ಸರ್ಕಾರ ಕೋಲಾರದ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಮಾಡಬೇಕು ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಡಿ.2– ತಾಲೂಕಿನ ಕೋಲಕಾರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ತಗ್ಗಹಳ್ಳಿ, ಕೋಲಕಾರನದೊಡ್ಡಿ, ಹೆಮ್ಮಿಗೆ, ಸೂನಗಹಳ್ಳಿ, ಪುರ, ಲೋಕಸರ, ಹಲುವಾಡಿ, ಕಮ್ಮನಾಯಕನಹಳ್ಳಿ, ಟಿ.ಮಲ್ಲಿಗೆರೆ, ಕಬ್ಬನಹಳ್ಳಿ, ತಿಮ್ಮನಹೊಸೂರು, ಬಿ.ಹೊಸೂರು, ಗೋಪನಹಳ್ಳಿ, ಯಡಗನಹಳ್ಳಿ, ಮಾದರಹಳ್ಳಿ ಸುತ್ತಮುತ್ತಲ ಗ್ರಾಮಗಳಲ್ಲಿ ಡಿ.3ರಂದು ಬೆಳಗ್ಗೆ 9 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಭೂ ಗ್ರಹದ ಮೇಲೆ ಸುಸ್ಥಿರತೆ ನಿರ್ಮಾಣ

ಅರಮನೆ ನಗರಿಯಲ್ಲಿ ಅಂತರರಾಷ್ಟ್ರೀಯ ಕಾರ್ಯಕ್ರಮ

'ಅನ್ ಲೀಷ್-22'ಕ್ಕೆ ಇಂದು ಚಾಲನೆ



ಮೈಸೂರು: ವಿಶ್ವಸಂಸ್ಥೆಯ ಸುಸ್ಥಿರ ಬೆಳವಣಿಗೆ ಗುರಿಗಳನ್ನು ಕಾರ್ಯರೂಪಕ್ಕೆ ತರಲು ಉದ್ದೇಶ ಹೊಂದಿದ ಅಂತರರಾಷ್ಟ್ರೀಯ ಕಾರ್ಯಕ್ರಮ 'ಅನ್ ಲೀಷ್– 22'ಕ್ಕೆ ಸಾಕ್ಷಿಯಾಗಲು ಅರಮನೆ ನಗರಿ ಸಜ್ಜಾಗಿದೆ.

ಒಂದು ವಾರ ಕಾಲ ಇಲ್ಲಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ನಡೆಯಲಿರುವ ಈ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಶನಿವಾರ (ಡಿ.3) ಮಧ್ಯಾಹ್ನ ನೆರವೇರಲಿದ್ದು, ಗ್ರೀನ್ ಲ್ಯಾಂಡ್ ಪ್ರಧಾನಿ ಮ್ಯೂಟೆ ಬೌರುಪ್ ಎಜೆಡೆ ಅವರು ಉದ್ಘಾಟನಾ ಕಾರ್ಯಕ್ರಮವದಲ್ಲಿ ವಿಡಿಯೋ ಸಂದೇಶ ನೀಡಲಿದ್ದಾರೆ.

ಐಟಿ/ಬಿಟಿ ಸಚಿವ ಡಾ.ಸಿ.ಎನ್‌ಅಶ್ವತ್ಥನಾರಾಯಣ ಅವರು ಸ್ವಾಗತ ಭಾಷಣ ಮಾಡಲಿದ್ದಾರೆ. ಪ್ರಪಂಚದ 101 ರಾಷ್ಟ್ರಗಳ 993 ಪ್ರತಿಭಾವಂತ ತಂತ್ರಜ್ಞರು, ಇದರಲ್ಲಿ ಭಾಗವಹಿಸುತ್ತಿದ್ದಾರೆ. ಈ ಪೈಕಿ, 515 ಜನ ವಿದೇಶಗಳಿಗೆ ಸೇರಿದವರಾಗಿದ್ದರೆ, 478 ಜನ ಭಾರತೀಯರು. ಇವರಲ್ಲಿ ಸ್ಟಾರ್ಟಪ್ ಸಿಟಿ ಬೆಂಗಳೂರಿನ 90 ಮಂದಿ ಹಾಗೂ ಬೆಂಗಳೂರಿಗೆ ಹೊರತಾದ ಭಾಗದ 19 ಮಂದಿ ಇದ್ದಾರೆ.

ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯ, ಗುಣಮಟ್ಟದ ಶಿಕ್ಷಣ, ಶುದ್ಧನೀರು ಹಾಗೂ ನೈರ್ಮಲ್ಯ, ಸುಲಭ ದರದ ಸ್ವಚ್ಛ ಇಂಧನ, ಹವಾಮಾನ ವೈಪರೀತ್ಯ ಇವು ಕಾರ್ಯಕ್ರಮದ ಮುಖ್ಯ ವಿಷಯಗಳಾಗಿರುತ್ತವೆ. ಪಾಲ್ಗೊಳ್ಳುವ ಅಭ್ಯರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳನ್ನಾಗಿ ಮಾಡಿ ಸುಸ್ಥಿರ ಬೆಳವಣಿಗೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಅವರ ಮುಂದಿಟ್ಟು ಸಮರ್ಥ ಪರಿಹಾರಗಳನ್ನು ಕಂಡುಹಿಡಿಯುವ ಸವಾಲನ್ನು ಒಡ್ಡಲಾಗುತ್ತದೆ. ಅಭ್ಯರ್ಥಿಗಳು ವಾರದ ಕೊನೆಯ ವೇಳೆಗೆ ಪರಿಹಾರದ ಕಾರ್ಯ ಮಾದರಿಗಳನ್ನು ಸಿದ್ಧಪಡಿಸಿ ಪ್ರದರ್ಶಿಸಬೇಕಾಗುತ್ತದೆ. ಅನ್ ಲೀಷ್ ಅಧ್ಯಕ್ಷ ಪ್ರೊಫೆಸರ್ ಫ್ಲೆಮಿಂಗ್, ಇನ್ಫೋಸಿಸ್ ಕಾರ್ಯನಿರ್ವಾಹಕ ಉಪಾಧ್ಯಕ್ಷ ಸುಮಿತ್ ವೀರಮಣಿ, ಐಟಿ/ ಬಿಟಿ ಇಲಾಖೆ ಎಸಿಎಸ್ ರಮಣ ರೆಡ್ಡಿ, ಅಟಲ್ ಇನ್ನೋವೇಶನ್ ಅಭಿಯಾನದ ನಿರ್ದೇಶಕ ಡಾ.ಚಿಂತನ್ ವೈಷ್ಣವ್, ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣರಾಜ ಚಾಮರಾಜ ಒಡೆಯರ್ ಇನ್ನಿತರರು ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಸೇವಾ ನ್ಯೂನ್ಯತೆಗಾಗಿ ಎಸ್‌ಬಿಐನ 2 ಶಾಖೆಗಳಿಗೆ 2.05 ಲಕ್ಷ ದಂಡ

ಮೈಸೂರು, ಡಿ.2–ಸೇವಾ ನ್ಯೂನತೆ ಎಸಗಿದ ಕಾರಣಕ್ಕಾಗಿ ಮೈಸೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಎರಡು ಶಾಖೆಗಳಿಗೆ 2.05 ಲಕ್ಷ ರೂ. ದಂಡ ವಿಧಿಸಿ ಮೈಸೂರು ಜಿಲ್ಲಾ ಗ್ರಾಹಕರ ವೇದಿಕೆ ಆದೇಶ ಹೊರಡಿಸಿದೆ.

ಮೈಸೂರು ಜಿಲ್ಲಾ ಗ್ರಾಹಕರ ವೇದಿಕೆ ಆದೇಶ

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಎಸ್‌ಬಿಐ ಮಾರ್ಕೆಟ್ ಬ್ರಾಂಚ್ ಮತ್ತು ಅಶೋಕ ರಸ್ತೆಯಲ್ಲಿರುವ ಎಸ್‌ಬಿಐ ಶಾಖೆ ದಂಡ ಪಾವತಿಸಬೇಕಾಗಿದೆ.

ವಿವರ: ಮೈಸೂರಿನ ವಿಶ್ವೇಶ್ವರನಗರ 2ನೇ ಹಂತದ ನಿವಾಸಿ ಮಾಜಿ ಸೈನಿಕ ಕೃಷ್ಣೋಜಿರಾವ್ ಅವರು, ಮನೆ ಖರೀದಿ ಹಾಗೂ ನವೀಕರಣಕ್ಕಾಗಿ 2003 ಹಾಗೂ 2013ರಲ್ಲಿ ಕ್ರಮವಾಗಿ 3.55 ಲಕ್ಷ ಹಾಗೂ 6.40 ಲಕ್ಷ ರೂ.ಗಳನ್ನು ಈ ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದರು. ಈ ವೇಳೆ ಅವರು ತಮ್ಮ ಮನೆಯ ಹಕ್ಕುಪತ್ರ, ಕ್ರಯಪತ್ರ ಸೇರಿದಂತೆ ಎಲ್ಲಾ ದಾಖಲೆಗಳನ್ನು ಭದ್ರತೆಗಾಗಿ ಬ್ಯಾಂಕ್‌ಗೆ ನೀಡಿದ್ದರು. 2021ರ ಜುಲೈ 31ರಂದು ಅವರು ಸೇನೆಯಿಂದ ನಿವೃತ್ತಿಯಾದ ನಂತರ ಬಂದ ಮೊತ್ತದಲ್ಲಿ 2021ರ ಆಗಸ್ಟ್ 10ರಂದು ಎರಡೂ ಬ್ಯಾಂಕ್‌ಗಳ ಸಾಲವನ್ನು ಸಂಪೂರ್ಣವಾಗಿ ಚುಕ್ತಾ ಮಾಡಿದ್ದರು. ಈ ಸಂಬಂಧ ಅವರಿಗೆ ಎಸ್‌ಬಿಐ ಸಾಲ ತೀರುವಳಿ ಪತ್ರವನ್ನೂ ನೀಡಿತ್ತು.

ನಂತರ ತಾವು ಬ್ಯಾಂಕ್‌ಗೆ ಭದ್ರತೆಗಾಗಿ ಸಲ್ಲಿಸಿದ್ದ ದಾಖಲೆಗಳನ್ನು ಹಿಂತಿರುಗಿಸುವಂತೆ 2021ರ ಅಕ್ಟೋಬರ್ 26ರಂದು ಕೃಷ್ಣೋಜಿರಾವ್ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ ನೆಪಗಳನ್ನು ಹೇಳುತ್ತಾ, ಅವರಿಗೆ ದಾಖಲೆಗಳನ್ನೇ ನೀಡದೇ ಬ್ಯಾಂಕ್ ಅಲೆದಾಡಿಸುತ್ತಿತ್ತು. ಹೀಗಾಗಿ ಅವರು ತಮ್ಮ ದಾಖಲೆಗಳನ್ನು ಹಿಂತಿರುಗಿಸಲು ನಿರ್ದೇಶನ ನೀಡುವಂತೆಯೂ, ತಮಗೆ ಉಂಟಾದ ಮಾನಸಿಕ ಹಿಂಸೆ ಹಾಗೂ ಬ್ಯಾಂಕ್‌ನ ಸೇವಾ ನ್ಯೂನತೆಗಾಗಿ 16 ಲಕ್ಷ ರೂ. ಪರಿಹಾರ ನೀಡುವಂತೆ ಬ್ಯಾಂಕ್‌ಗೆ ಆದೇಶಿಸಬೇಕೆಂದು ಮೈಸೂರು ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ಪ್ರಕರಣ ದಾಖಲಿಸಿದ್ದರು.

ವಿಚಾರಣೆ ನಡೆಸಿದ ವೇದಿಕೆಯು ಸಾಲ ಪಡೆಯುವಾಗ ಕೃಷ್ಣೋಜಿರಾವ್ ಬ್ಯಾಂಕ್‌ಗೆ ನೀಡಿದ ದಾಖಲೆಗಳನ್ನು ಎರಡು ತಿಂಗಳ ಒಳಗಾಗಿ ಅವರಿಗೆ ಹಿಂತಿರುಗಿಸುವಂತೆಯೂ, ಸೇವಾ ನ್ಯೂನ್ಯತೆ ಎಸಗಿದ ತಪ್ಪಿಗಾಗಿ 2 ಲಕ್ಷ ರೂ. ಪರಿಹಾರವನ್ನು ವಾರ್ಷಿಕ ಶೇ.6ರ ಬಡ್ಡಿಯೊಂದಿಗೆ ಪಾವತಿಸಬೇಕು ಹಾಗೂ ಪ್ರಕರಣದ ಖರ್ಚಿನ ಬಾಬ್ತು 5000 ರೂ.ಗಳನ್ನು ನೀಡಬೇಕು ಎಂದು ಅದೇಶಿಸಿದೆ. ಇದಕ್ಕೆ ತಪ್ಪಿದಲ್ಲಿ 2.5 ಲಕ್ಷ ರೂ.ಗಳಿಗೆ ವಾರ್ಷಿಕ ಶೇ.10ರಷ್ಟು ಬಡ್ಡಿ ಕೊಡಬೇಕಾಗುತ್ತದೆ ಎಂದು ಬ್ಯಾಂಕ್‌ಗಳಿಗೆ ಗ್ರಾಹಕರ ವೇದಿಕೆ ಎಚ್ಚರಿಕೆ ನೀಡಿದೆ. ಕೃಷ್ಣೋಜಿರಾವ್ ಪರವಾಗಿ ವಕೀಲರಾದ ಪ್ರತಾಪ ರುದ್ರಮೂರ್ತಿ ಮತ್ತು ಸುಂದರದಾಸ್ ಡಿ. ವಕಾಲತ್ತು ವಹಿಸಿದ್ದರು.

ನಕಲಿ ದಾಖಲೆ ಸೃಷ್ಟಿಸಿ ಮೃತ ಮಹಿಳೆಯ ಆಸ್ತಿ ವರ್ಗಾವಣೆ

ಬ್ಯಾಂಕ್‌ನಲ್ಲಿ ಅದರ ಮೇಲೆ ಸಾಲ ಪಡೆದು, ಮರು ಪಾವತಿಸದೇ ಇದ್ದಾಗ ಹರಾಜು ಪ್ರಸ್ತಾಪವಾದಾಗಲೇ ಪ್ರಕರಣ ಬಯಲು

ಮೈಸೂರು, ಡಿ.2– ಮೃತ ಮಹಿಳೆಯೊಬ್ಬರ ಆಸ್ತಿಯನ್ನು ನಕಲಿ ದಾಖಲೆಗಳ ಮೂಲಕ ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡ ದುಷ್ಕರ್ಮಿಗಳು ಸದರಿ ಆಸ್ತಿ ಮೇಲೆ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದು, ಸಾಲ ಮರುಪಾವತಿಯಾಗದ ಕಾರಣ ಆಸ್ತಿಯನ್ನು ಹರಾಜು ಹಾಕಲು ಬ್ಯಾಂಕ್ ಮುಂದಾದಾಗಲೇ ವಾರಸುದಾರರಿಗೆ ಈ ವಿಷಯ ಗೊತ್ತಾಗಿದೆ.

ವಿವರ: ಎನ್.ಟಿ.ಸುಶೀಲ ಎಂಬುವರು ಮೈಸೂರಿನ ಚಾಮರಾಜ ಮೊಹಲ್ಲಾ ಕೆ.ಆರ್.ವನಂ ಸಿ.ಹೆಚ್. ಸಂಖ್ಯೆ 58, ಮನೆ ಸಂಖ್ಯೆ 1500/3 ಅನ್ನು 1961ರಲ್ಲಿ ಖರೀದಿಸಿದ್ದರು. ಅವರಿಗೆ ಮಕ್ಕಳಿಲ್ಲದ ಕಾರಣ ತಂಗಿಯ ಮಗ ಪಾರ್ಥಸಾರಥಿ ಅವರನ್ನು ಸಾಕಿಕೊಂಡಿದ್ದರು. 2014ರ ಮೇ 10ರಂದು ಸುಶೀಲ ಮೃತಪಟ್ಟಿದ್ದು, 2022ರ ಜ.2ರಂದು ಅನಾರೋಗ್ಯದಿಂದ ಪಾರ್ಥಸಾರಥಿಯವರೂ ಮೃತಪಟ್ಟಿದ್ದಾರೆ.

ಈ ಮಧ್ಯೆ 2018ರಲ್ಲಿ ಮೈಸೂರಿನ ಬೆಮೆಲ್ ಲೇಔಟ್ ನಿವಾಸಿ ಹರಿಪ್ರಸಾದ್(40) ಎಂಬುವರು ಎನ್.ಟಿ.ಸುಶೀಲ ಹೆಸರಿನಲ್ಲಿ 80 ವರ್ಷದ ವೃದ್ಧೆಯೊಬ್ಬರನ್ನು ಕರೆದೊಯ್ದು ನಕಲಿ ದಾಖಲೆಗಳನ್ನು ಸೃಷ್ಟಿಸಿ ತಮ್ಮ ಹೆಸರಿಗೆ ಆಸ್ತಿಯನ್ನು ನೋಂದಣಿ ಮಾಡಿಕೊಂಡಿದ್ದಾರೆ. ನಂತರ ಹರಿಪ್ರಸಾದ್ ಮತ್ತು ಪ್ರತಿಭಾ ಎಂಬುವರು ಜಂಟಿಯಾಗಿ ಸದರಿ ಆಸ್ತಿ ಮೇಲೆ ಕೆನರಾ ಬ್ಯಾಂಕ್ ನಜರ್‌ಬಾದ್ ಶಾಖೆಯಲ್ಲಿ ಸಾಲವನ್ನೂ ಪಡೆದಿದ್ದಾರೆ.

ಸಾಲ ಮರುಪಾವತಿ ಮಾಡದ ಕಾರಣ ಬ್ಯಾಂಕ್‌ನವರು ಆಸ್ತಿ ಹರಾಜು ಮಾಡಲು ನೋಟಿಸ್ ಹೊರಡಿಸಿದಾಗಲೇ ಈ ವಿಚಾರ ತಮ್ಮ ಗಮನಕ್ಕೆ ಬಂದಿದೆ ಎಂದು ದಿವಂಗತ ಪಾರ್ಥಸಾರಥಿ ಅವರ ಪತ್ನಿ ಅನುರಾಧ(52) ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಅಶೋಕಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ ದೇವಸ್ಥಾನದ ವಾರ್ಷಿಕೋತ್ಸವ

ಮೈಸೂರು,ಡಿ.2–ಮೈಸೂರಿನ ಹಳೇಬಂಡಿಕೇರಿಯಲ್ಲಿರುವ ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ ದೇವಸ್ಥಾನದ 11ನೇ ವರ್ಷದ ಪುನರ್ ಪ್ರತಿಷ್ಠಾಪನಾ ಮಹೋತ್ಸವವನ್ನು ಡಿ.3 ಮತ್ತು 4ರಂದು ಏರ್ಪಡಿಸಲಾಗಿದೆ. ಡಿ.3ರಂದು ಬೆಳಗ್ಗೆ 9.30ಕ್ಕೆ ಅನುಜ್ಞೆ, ಗಣಪತಿ ಪೂಜೆಯೊಂದಿಗೆ ಶ್ರೀ ಚಂಡಿಕಾ ಪಾರಾಯಣ ಮತ್ತು ಮಹಾಮಂಗಳಾರತಿ ನಡೆಯಲಿದ್ದು, ಡಿ.4ರಂದು ಬೆಳಗ್ಗೆ 8.30ಕ್ಕೆ ಕಲಾ ಹೋಮ, ಶ್ರೀ ಗಣಪತಿ, ಸುಬ್ರಹ್ಮಣ್ಯಸಹಿತ ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ ಸಹಿತ ಚಂಡಿಕಾ ಹೋಮವನ್ನು ಏರ್ಪಡಿಸಲಾಗಿದೆ. ನಂತರ ಮಹಾಮಂಗಳಾರತಿಯೊಂದಿಗೆ ತೀರ್ಥ–ಪ್ರಸಾದ ವಿನಿಯೋಗ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಅಭಿವೃದ್ಧಿ ಸಮಿತಿ ತಿಳಿಸಿದೆ.



ಮೈಸೂರಿನ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ 67ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಏರ್ಪಡಿಸಿದ್ದ ಕನ್ನಡ ಕಂಪು ಸ್ಪರ್ಧಾ ಸರಣಿಯಲ್ಲಿ ಜನಪದ ನೃತ್ಯ ವಿಭಾಗದಲ್ಲಿ ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಬಾಲಕಿಯರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ದ್ವಿತೀಯ ಬಹುಮಾನ ಗಳಿಸಿದ್ದಾರೆ. ಪ್ರಿನ್ಸಿಪಾಲ್ ನಂಯನಕುಮಾರಿ, ಸಾಂಸ್ಕೃತಿಕ ಸಮಿತಿ ಸಮನ್ವಯಕಾರರಾದ ಜಯಲಕ್ಷ್ಮಿ ಅವರೊಂದಿಗೆ ಬಹುಮಾನಿತ ವಿದ್ಯಾರ್ಥಿಗಳನ್ನು ಕಾಣಬಹುದು.

ಇಂಡಸ್ಟ್ರಿ ರೆಡಿನೆಸ್ ಟೆಸ್ಟ್‌ನಲ್ಲಿ 200 ಅಭ್ಯರ್ಥಿಗಳು ಹಾಜರಿ




ಮೈಸೂರು,ಡಿ.2–ಬೆಂಗಳೂರಿನ ಪ್ರೋ ಎಡ್ಜ್ ಎಜುಟೆಕ್ ಲಿಮಿಟೆಡ್ ಸಹಯೋಗದೊಂದಿಗೆ ಕಾಲೇಜಿನ ವೃತ್ತಿ ಮಾರ್ಗದರ್ಶನ ಘಟಕದ ವತಿಯಿಂದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ "ಇಂಡಸ್ಟ್ರಿ ರೆಡಿನೆಸ್ ಟೆಸ್ಟ್" ವಿಷಯ ಕುರಿತು ಕಿರುಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರೊ ಎಡ್ಜ್ ಎಜುಟೆಕ್ ಮಾನವ ಸಂಪನ್ಮೂಲ ಅಧಿಕಾರಿ ವೆಂಕಟಕೃಷ್ಣ, ರವಿಚಂದ್ರ, ಮಾರ್ಕೆಟಿಂಗ್ ಮುಖ್ಯಸ್ಥ ರವಿಚಂದ್ರ ಮಾರ್ಗದರ್ಶನದಲ್ಲಿ ಸೂಕ್ತ ಪ್ರತಿಭೆಗಳನ್ನು ಗುರುತಿಸುವ ಕಾರ್ಯಕ್ರಮದಲ್ಲಿ ಸುಮಾರು 200 ವಿದ್ಯಾರ್ಥಿಗಳು ಫೈನಾನ್ಶಿಯಲ್ ಅಕೌಂಟಿಂಗ್, ಟ್ಯಾಕ್ಸೇಷನ್, ರೀಟೈಲ್ ಬ್ಯಾಂಕಿಂಗ್, ಕ್ಯಾಪಿಟಲ್ ಮಾರ್ಕೆಟಿಂಗ್, ಜೊತೆಗೆ ಜನರಲ್ ಆಪ್ಟಿಟ್ಯೂಡ್ ಮತ್ತು ಪ್ರೊಫೈಲಿಂಗ್ ವಿಷಯ ಸಂಬಂಧ ಪರೀಕ್ಷೆ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಎಸ್.ಮರೀಗೌಡ, ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ಕುರಿತು ಸಂಕ್ಷಿಪ್ತವಾಗಿ ತಿಳಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಅಧ್ಯಾಪಕ ಮತ್ತು ಅಧ್ಯಾಪಕೇತರರು ಭಾಗವಹಿಸಿದ್ದರು. ಡಾ.ಪಿ.ಕೆ.ಗೋವರ್ಧನ್ ಸ್ವಾಗತಿಸಿ, ನಿರೂಪಿಸಿದ ಕಾರ್ಯಕ್ರಮವನ್ನು ಪ್ರೊ.ಎಂ.ಹರ್ಷಿತ ವಂದಿಸಿದರು.

ಗುಲ್ಬರ್ಗಾ ಕೇಂದ್ರೀಯ ವಿವಿ ಪ್ರಾಧ್ಯಾಪಕರ ನೇಮಕಾತಿ ತಡೆಗೆ ಬಿಎಸ್‌ಪಿ ಆಗ್ರಹ



ಮೈಸೂರು,ಡಿ.2(ಪಿಎಂ)–ಗುಲ್ಬರ್ಗಾ (ಕಲಬುರ್ಗಿ) ಕೇಂದ್ರೀಯ ವಿಶ್ವವಿದ್ಯಾನಿಲಯವು ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳ ನೇಮಕಾತಿಗೆ ಮುಂದಾಗಿದ್ದು, ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಹೆಚ್ಚಳದ ಹಿನ್ನೆಲೆಯಲ್ಲಿ ನೂತನ ರೋಸ್ಟರ್ ಜಾರಿಗೊಳ್ಳುವವರೆಗೆ ಸದರಿ ನೇಮಕಾತಿ ತಡೆಹಿಡಿಯಬೇಕು ಎಂದು ಬಿಎಸ್‌ಪಿ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ ಒತ್ತಾಯಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಕರ್ನಾಟಕದಲ್ಲಿ ನ್ಯಾ.ನಾಗಮೋಹನದಾಸ್ ವರದಿ ಅನ್ವಯ ರಾಜ್ಯ ಸರ್ಕಾರ ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿದೆ. ಈಗ ಸದರಿ ವಿಶ್ವವಿದ್ಯಾನಿಲಯ ಈ ಹೆಚ್ಚಳಗೊಂಡ ಮೀಸಲಾತಿ ಪರಿಗಣನೆಗೆ ತೆಗೆದುಕೊಳ್ಳದೇ ನೇಮಕಾತಿ ಪ್ರಕ್ರಿಯೆ ನಡೆಸಿದರೆ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಕ್ಕೆ ಅನ್ಯಾಯವಾಗಲಿದೆ ಎಂದರು.

ಎಸ್‌ಸಿ, ಎಸ್‌ಟಿ ಹೊಸ ರೋಸ್ಟರ್ ನಿಯಮ ಜಾರಿ ಬಳಿಕ ನೇಮಕಾತಿ ಪ್ರಕ್ರಿಯೆ ನಡೆಸಬೇಕು. ರಾಜ್ಯಪಾಲರು ಮಧ್ಯ ಪ್ರವೇಶಿಸಿ ಈ ನೇಮಕಾತಿ ಪ್ರಕ್ರಿಯೆ ತಡೆಹಿಡಿಯಬೇಕು. ಒಂದು ವೇಳೆ ನೇಮಕಾತಿ ಮುಂದುವರೆಸಿದರೆ ತೀವ್ರ ಹೋರಾಟ ನಡೆಸಲು ಸಮುದಾಯದ ಹಲವು ಸ್ವಾಮೀಜಿಗಳ ನೇತೃತ್ವದಲ್ಲಿ ತೀರ್ಮಾನ ಕೈಗೊಳ್ಳಲಾಗಿದ್ದು, ಇದನ್ನು ಬಿಎಸ್‌ಪಿ ಸಂಪೂರ್ಣ ಬೆಂಬಲಿಸಿ ಹೋರಾಟದಲ್ಲಿ ಭಾಗವಹಿಸಲಿದೆ ಎಂದರು.

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮಾಧ್ಯಮ ಪ್ರತಿಕ್ರಿಯೆ ನೀಡುವ ವೇಳೆ 'ಇಬ್ರಾಹಿಂ ಏಕೆ ಸಿಎಂ ಆಗಬಾರದು, ಅವರೇನು ಅಸ್ಪೃಶ್ಯರಲ್ಲ' ಎಂದು ಹೇಳಿಕೆ ನೀಡಿದ್ದಾರೆ. ಅವರು ಅಸ್ಪೃಶ್ಯತೆ ನೋವುಂಡ ಸಮುದಾಯದವರನ್ನು ಪ್ರಮುಖ ಸ್ಥಾನಗಳಿಂದ ದೂರ ಇಟ್ಟಿರುವುದನ್ನು ಇದು ಸೂಚಿಸುತ್ತದೆ. ಇದೇ ರೀತಿ ಬಿಜೆಪಿ, ಕಾಂಗ್ರೆಸ್ ಪಕ್ಷಗಳೂ ಮನುವಾದಿಗಳೇ ಆಗಿವೆ. ಜೆಡಿಎಸ್ ಪಕ್ಷದಲ್ಲಿನ ದಲಿತ ಮುಖಂಡರೂ ಯಾರೂ ಈ ಹೇಳಿಕೆ ಖಂಡಿಸದೇ ಇರುವುದು ಬೇಸರದ ಸಂಗತಿ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮುಖಂಡರಾದ ಶಿವಮಹದೇವ, ಶ್ರೀಕಂಠ, ರೋಷನ್, ಶಂಕರ್, ಬಿ.ಪಿ.ಪುಟ್ಟಸ್ವಾಮಿ ಗೋಷ್ಠಿಯಲ್ಲಿದ್ದರು.

ಜೆಡಿಎಸ್‌ಗೆ ನೇಮಕ



ಮೈಸೂರು,ಡಿ.2–ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ) ಅಲ್ಪಸಂಖ್ಯಾತರ ವಿಭಾಗಕ್ಕೆ ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಇಲಿಯಾಸ್ ಬೇಗ್ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದೇವಸ್ಥಾನದ ಚಿನ್ನಾಭರಣ ಕಳವು

ಬನ್ನೂರು, ಡಿ.2–ದೇವಸ್ಥಾನದ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ತಿ.ನರಸೀಪುರ ತಾಲೂಕು ಎಲೆಗೌಡನಹುಂಡಿ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಗೋಡನಹಳ್ಳಿ ಮಾರಮ್ಮನ ದೇವಸ್ಥಾನದ ಬೀಗವನ್ನು ನ.30ರಂದು ರಾತ್ರಿ ಮುರಿದು ಒಳ ನುಗ್ಗಿದ ಖದೀಮರು ದೇವರ ಮೂರ್ತಿಗೆ ಹಾಕಿದ್ದ 35 ಗ್ರಾಂ ತೂಕದ ಚಿನ್ನದ ಕಾಸಿನ ಸರ, 9 ಚಿನ್ನದ ತಾಳಿಗಳು, 250 ಗ್ರಾಂ ತೂಕದ ಬೆಳ್ಳಿ ಮುಖವಾಡ ಹಾಗೂ 20 ತಾಮ್ರದ ಬಿಂದಿಗೆಗಳನ್ನು ಕಳವು ಮಾಡಿದ್ದಾರೆ. ಡಿ.1ರಂದು ಬೆಳಗ್ಗೆ ಪೂಜೆ ಮಾಡಲು ಅರ್ಚಕ ಮಂಜು ಅವರು ದೇವಸ್ಥಾನಕ್ಕೆ ಆಗಮಿಸಿದಾಗ ಈ ಕಳವು ಪ್ರಕರಣ ಗೊತ್ತಾಗಿದೆ. ಈ ಸಂಬಂಧ ಬನ್ನೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಾಂಗಲ್ಯ ಸರ ಕಳವು

ಮೈಸೂರು, ಡಿ.2– ಪತಿಯೊಂದಿಗೆ ತೆರಳುತ್ತಿದ್ದ ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಪಡುವಾರಹಳ್ಳಿ 1ನೇ ಮುಖ್ಯ ರಸ್ತೆಯ ಆಟೋ ಸ್ಟ್ಯಾಂಡ್ ಬಳಿ ನಡೆದಿದೆ.

ವಿನಾಯಕನಗರ 4ನೇ ಮುಖ್ಯ ರಸ್ತೆಯ ನಿವಾಸಿ ಪ್ರೇಮಾ(53) ಸರ ಕಳೆದುಕೊಂಡವರಾಗಿದ್ದು, ನ.30ರಂದು ಸಂಜೆ ಲೀಲಾ ಚೆನ್ನಯ್ಯ ಕಲ್ಯಾಣ ಮಂಟಪಕ್ಕೆ ಮದುವೆ ಕಾರ್ಯಕ್ರಮಕ್ಕೆ ಪತಿ ಸಿಂಗಾಚಾರ್ ಜೊತೆ ಹೋಗಿದ್ದ ಪ್ರೇಮಾ ಅವರು, ಅಂದು ರಾತ್ರಿ 10.45ರ ಸುಮಾರಿನಲ್ಲಿ ಪಡುವಾರಹಳ್ಳಿ 1ನೇ ಮುಖ್ಯ ರಸ್ತೆಯ ಆಟೋ ಸ್ಟ್ಯಾಂಡ್ ಬಳಿ ಪತಿ ಹಾಗೂ ಸಂಬಂಧಿ ಜೊತೆ ಮನೆಗೆ ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಅವರ ಕತ್ತಿನಲ್ಲಿ ಇದ್ದ 12.5 ಗ್ರಾಂ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಬಿಳಿಕೆರೆ, ಡಿ.2–ಹಾಡಹಗಲೇ ಮನೆ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ಹುಣಸೂರು ತಾಲೂಕು ಬೋಳನಹಳ್ಳಿ ಗ್ರಾಮದಿಂದ ವರದಿಯಾಗಿದೆ. ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ತಾಯಮ್ಮ(50) ಎಂಬುವರು ನವೆಂಬರ್ 30ರಂದು ಬೆಳಗ್ಗೆ 8 ಗಂಟೆಗೆ ಮನೆಗೆ ಬೀಗ ಹಾಕಿ ಕೊಂಡು ಹೋಗಿದ್ದು, ಸಂಜೆ 6 ಗಂಟೆಗೆ ಹಿಂತಿರುಗಿದಾಗ ಖದೀಮರು ಬೀಗ ಮುರಿದು 16 ಗ್ರಾಂ ತೂಕದ ಚಿನ್ನಾಭರಣ, 30 ಸಾವಿರ ರೂ. ನಗದು ಹಾಗೂ ಮೊಬೈಲ್ ಕಳವು ಮಾಡಿರುವುದು ಗೊತ್ತಾ ಗಿದೆ. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಹಾಯಧನ ಸೌಲಭ್ಯ ನೀಡಲು ಅರ್ಜಿ ಆಹ್ವಾನ

ಮೈಸೂರು,ಡಿ.2–ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ 2022–23ನೇ ಸಾಲಿನಲ್ಲಿ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ ಮತ್ತು ನಗರ ಪ್ರದೇಶಗಳಲ್ಲಿ ಬ್ಯಾಂಕ್‌ಗಳ ಮುಖಾಂತರ ಸಾಲ ಪಡೆದು ಸಣ್ಣ ಕೈಗಾರಿಕೆ ಉತ್ಪಾದನಾ ಸೇವಾ ಉದ್ದಿಮೆಯನ್ನು ಸ್ಥಾಪಿಸುವ ಫಲಾನುಭವಿಗಳಿಗೆ ಶೇ.25ರಿಂದ 35ರಷ್ಟು ಸಹಾಯಧನ ಸೌಲಭ್ಯ ಪಡೆಯಲು online www. pmegp e protal ಅಥವಾ www.kvic.org.in ಮೂಲಕ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಗಳು, ಖಾದಿ ಮತ್ತು ಗ್ರಾಮದ್ಯೋಗ ಮಂಡಳಿ, ಜಿಲ್ಲಾ ಕಚೇರಿ, ಚಾಮರಾಜ ತಾಂತ್ರಿಕ ಸಂಸ್ಥೆ ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು ಕಚೇರಿ ದೂ. ಸಂಖ್ಯೆ: 0821–2566428 ಅನ್ನು ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.12.2022 ಶನಿವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022 ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಶುಕ್ಲ ಪಕ್ಷ, ತಿಥಿ: ದಶಮೀ, ನಕ್ಷತ್ರ : ಉಭಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಪ್ರಜ್ಞಾ ಕುಟೀರ ಆಯುರ್ವೇದ ಕೇಂದ್ರ, ಅಭಿಜ್ಞಾ ಇಂಟರ್‌ನ್ಯಾಷನಲ್ ಅಕಾಡೆಮಿ ಆಫ್ ಆಯುರ್ವೇದ–ಯೋಗ:** ಉಚಿತ ಆಯುರ್ವೇದ ವೈದ್ಯಕೀಯ ತಪಾಸಣೆ, ಮೂಳೆ ಸಾಂದ್ರತೆ ಶಿಬಿರ, ಉದ್ಘಾಟನೆ: ಬೋಗಾದಿ ಪಟ್ಟಣ ಪಂಚಾಯಿತಿಯ ಶ್ಯಾಮಸುಂದರ್, ಸ್ಥಳ: ಪ್ರಜ್ಞಾ ಕುಟೀರ ಆಯುರ್ವೇದ ಕೇಂದ್ರ, ಬೆಳಗ್ಗೆ 9ರಿಂದ.

■ **ಅರಸು ಯುವಜನ ವೇದಿಕೆ:** ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಮೈಸೂರು ವಿವಿ ಪೆವಿಲಿಯನ್ ಮೈದಾನ, ಬೆಳಗ್ಗೆ 8ರಿಂದ.

■ **ಮಹಾಜನ ಪಬ್ಲಿಕ್ ಸ್ಕೂಲ್:** 16ನೇ ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಎಲ್.ನಾಗೇಂದ್ರ, ಅಧ್ಯಕ್ಷತೆ: ಮಹಾಜನ ಎಜುಕೇಷನ್ ಸೊಸೈಟಿ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಸ್ಥಳ: ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ, ಮೈಸೂರು ಉಪ ವಲಯ:** ಗೀತಾ ಜಯಂತಿ ಪ್ರಯುಕ್ತ ವಿಶೇಷ ಕಾರ್ಯಕ್ರಮ, ಇಂದಿನ ಸಮಾಜಕ್ಕೆ ಭಗವದ್ಗೀತೆಯ ಪ್ರಸ್ತುತತೆ, ಸಾನ್ನಿಧ್ಯ: ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ, ಆಶೀರ್ವಚನ: ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಸ್ವಾಮಿ ಮಹಿಪಾಲಾನಂದಜಿ, ಉಪನ್ಯಾಸ–ಡಾ.ಕೆ.ಅನಂತರಾಮು ಅವರಿಂದ, ಸ್ಥಳ: ಜ್ಞಾನಪ್ರಕಾಶ ಭವನ, ಯಾದವಗಿರಿ, ಸಂಜೆ 6.30ಕ್ಕೆ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್:** ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸಂಸ್ಮರಣ 27ನೇ ಸಂಗೀತ ಸಮ್ಮೇಳನ, ಬೆಳಗ್ಗೆ 10ರಿಂದ ಸಂಗೀತಾಂಜಲಿ ನಾದ ಲಯ ಲಹರಿ, ನಿರ್ದೇಶನ: ವಿದ್ವಾನ್ ತುಮಕೂರು ಬಿ.ರವಿಶಂಕರ್, ವಿದ್ವತ್ ಗೋಷ್ಠಿ 'ಹೊಯ್ಸಳ ಶಿಲ್ಪದಲ್ಲಿ ಸಂಗೀತ ವಾದ್ಯಗಳು' ಕುರಿತು ಡಾ.ರಮಾ ವಿ.ಬೆಣ್ಣೂರ್, ಮಹಿಳಾ ಹರಿದಾಸರು–ಒಂದು ಅಧ್ಯಯನ ಪ್ರಾತ್ಯಕ್ಷಿಕೆ ಕುರಿತು ಡಾ.ಸುಕನ್ಯಾ ಪ್ರಭಾಕರ್, 'ಲಯ ವಿನ್ಯಾಸದಲ್ಲಿ ಗಣಿತ ವೈವಿಧ್ಯ–ಪ್ರಾತ್ಯಕ್ಷಿಕೆ ವಿದ್ವಾನ್ ಎಸ್.ಸುದರ್ಶನ್ ಅವರಿಂದ, ಸಂಜೆ 5.30ಕ್ಕೆ ಕೇಶವ್ ಮೋಹನ್ ಕುಮಾರ್ ಅವರಿಂದ ವಯೋಲಿನ್, ವಿಕ್ರಂ ಭಾರದ್ವಾಜ್–ಮೃದಂಗ, ಸಂಜೆ 6.30ರಿಂದ ಮಲ್ಲಾಡಿ ಸಹೋದರರಿಂದ ದ್ವಂದ್ವ ಗಾಯನ, ಅದಿತಿ ಕೃಷ್ಣಪ್ರಕಾಶ್–ವಯೋಲಿನ್, ತುಮಕೂರು ಬಿ.ರವಿಶಂಕರ್ –ಮೃದಂಗ, ರಘುನಂದನ ರಾವ್–ಘಟ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ವ್ಯವಸ್ಥಾಪಕರು :** ನಾಟಕ ಮತ್ತು ಸಂಗೀತ ನಿರ್ದೇಶಕರಾದ ಹೆಚ್.ಪಿ. ನಾಗೇಂದ್ರ ಪ್ರಸಾದ್ ಅವರಿಗೆ ಬಂಗಾರದ ಕಡಗ ಸಮರ್ಪಣಾ ಪ್ರಯುಕ್ತ ಗುಬ್ಬಿ ಕಂಪನಿಯ ಆಧಾರಿತ ಸಂಗೀತ ಪ್ರಧಾನವಾದ ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕ ಪ್ರದರ್ಶನ, ಉದ್ಘಾಟನೆ : ಶಾಸಕ ಸಿ.ಎಸ್. ಪುಟ್ಟರಾಜು, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಲಯನ್ ಕೆ. ದೇವೇಗೌಡ, ಡಾ. ಎಚ್.ಆರ್. ತಿಮ್ಮೇಗೌಡ, ಕಾಂಗ್ರೆಸ್ ಮುಖಂಡ ಹರೀಶ್‌ಗೌಡ, ಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಸ್ಥಳ: ಕಲಾಮಂದಿರ, ಹುಣಸೂರು ರಸ್ತೆ, ಬೆಳಗ್ಗೆ 11ಕ್ಕೆ

■ **ಅಧಿವಕ್ತಾ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ, ಮೈಸೂರು ಜಿಲ್ಲಾ ಘಟಕ, ಜೆಎಸ್‌ಎಸ್ ಕಾನೂನು ಕಾಲೇಜು :** ಸಂವಿಧಾನ ದಿನಾಚರಣೆ, ಉದ್ಘಾಟನೆ : ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್, ಅಧ್ಯಕ್ಷತೆ : ಅಧಿವಕ್ತಾ ಪರಿಷತ್ ಅಧ್ಯಕ್ಷೆ ಶ್ರೀಮತಿ ವಿ. ಶಾರದಾ, ಉಪಸ್ಥಿತರು : ಜೆಎಸ್‌ಎಸ್ ಕಾನೂನು ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಕೆ.ಎಸ್. ಸುರೇಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ಕಾಲೇಜು ಪ್ರಾಂಶುಪಾಲ ಡಾ. ಎಸ್. ನಟರಾಜು, ಹೆಚ್ಚುವರಿ ಸರ್ಕಾರಿ ವಕೀಲ ಶೌರಿ ಹೆಚ್.ಆರ್. ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಮಧ್ಯಾಹ್ನ 12ಕ್ಕೆ.

■ **ಜೈ ಮಾರುತಿ ಗ್ರೂಪ್ಸ್, ಮೇಟಗಳ್ಳಿ :** 15ನೇ ವರ್ಷದ ಹನುಮ ಜಯಂತ್ಯೋತ್ಸವ ಸಮಾರಂಭ, ಸಂಜೆ 4ಕ್ಕೆ ಯೋಧರಿಗೆ ಸನ್ಮಾನ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ, ಸಂಜೆ 4.30ಕ್ಕೆ ವೈದ್ಯಕೀಯ ವಿಭಾಗದ ಸಿಬ್ಬಂದಿ, ಪೌರಕಾರ್ಮಿಕರು, ಆಶಾ ಕಾರ್ಯಕರ್ತರು ಮತ್ತು ಮಾಧ್ಯಮ ಮಿತ್ರರಿಗೆ ಸನ್ಮಾನ, ಸಂಜೆ 5ಕ್ಕೆ ಬಾಲಾಶ್ರಮ, ವೃದ್ಧಾಶ್ರಮ ಹಾಗೂ ನೊಂದವರಿಗೆ ಸಹಾಯಧನ ವಿತರಣೆ, ಸಂಜೆ 5.30ಕ್ಕೆ ದೇಹದಾನ ಪತ್ರ ವಿತರಣೆ, ಸಂಜೆ 6ಕ್ಕೆ ಮನರಂಜನಾ ಕಾರ್ಯಕ್ರಮ, ಸ್ಥಳ: ಮೇಟಗಳ್ಳಿ ಸರ್ಕಾರಿ ಶಾಲೆ ಹತ್ತಿರ, ಮೇಟಗಳ್ಳಿ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ರಘೋತ್ತಮಚಾರ್ ನಾಗಸಂಪಿಗೆ ಬಾಗಲಕೋಟೆ ಅವರಿಂದ ಭಗವದ್ಗೀತೆಯ 2ನೇ ಅಧ್ಯಾಯದ ಪ್ರವಚನ, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಸಂಜೆ 5 ಗಂಟೆಗೆ.

■ **ಶ್ರೀ ಉತ್ತರಾಧಿ ಮಠ :** ಪಂಡಿತ್ ಶ್ರೀ ರಘೋತ್ತಮಾಚಾರ್ಯ ನಾಗಸಂಪಿಗೆ ಬಾಗಲಕೋಟೆ ಅವರಿಂದ ಶ್ರೀ ಭಗವದ್ಗೀತಾ ಅಭಿಮಾನ, 2ನೇ ತಿಂಗಳ ಪ್ರವಚನ, ಸ್ಥಳ: ಶ್ರೀ ಉತ್ತರಾಧಿ ಮಠ, ಸಂಜೆ 6.30 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಶ್ರೀ ಗೀತಾಪ್ರಚಾರಿಣಿ ಸಭಾ ಟ್ರಸ್ಟ್ :** ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7ಕ್ಕೆ ಗೀತಾ ಜಯಂತಿ ಧ್ವಜಾರೋಹಣ, ಬೆಳಗ್ಗೆ 8ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30 ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಶ್ರೀ ವಿದ್ಯಾ ವಿಷ್ಣುಸಭಾ ಟ್ರಸ್ಟ್ ಅವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಡಾ. ಬಿ.ನಾ. ವಿಜಯೀಂದ್ರಾಚಾರ್ಯ ಅವರಿಂದ ಶ್ರೀಮತ್ ಭಾಗವತ ಸಪ್ತಾಹ ಪ್ರವಚನ, ಸ್ಥಳ: ಶ್ರೀ ಗೀತಾಪ್ರಚಾರಿಣಿ ಸಭಾ ಟ್ರಸ್ಟ್, ಶ್ರೀ ಗೀತಾ ಮಂದಿರದ ರಸ್ತೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ನಮ್ಮನ್ನು ನಾವು ಅರ್ಥ ಮಾಡಿಕೊಳ್ಳುವುದು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಸಕ್ಷಮ:** ಐಕ್ಯತಾ ನಡಿಗೆ ಮತ್ತು ತ್ರೈವಾರ್ಷಿಕ ಜಿಲ್ಲಾ ಸಮಾವೇಶ, ಬೆಳಗ್ಗೆ 9ಕ್ಕೆ ಐಕ್ಯತಾ ನಡಿಗೆ, ಚಾಲನೆ: ಉಪಪೊಲೀಸ್ ಆಯುಕ್ತ ಪ್ರದೀಪ್‌ಗುಂಟಿ, ಉಪಸ್ಥಿತರು: ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಬೆಳಗ್ಗೆ 10ಕ್ಕೆ ಉದ್ಘಾಟನಾ ಸಮಾರಂಭ, ಉಪಸ್ಥಿತರು ಶಾಸಕ ಎಲ್.ನಾಗೇಂದ್ರ, ಅಧ್ಯಕ್ಷತೆ: ಆದಿತ್ಯ ಆಸ್ಪತ್ರೆಯ ಡಾ.ಚಂದ್ರಶೇಖರ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ.

■ **ಶ್ರೀ ಸದ್ಗುರು ಸೇವಾ ಮಂಡಲ:** 52ನೇ ವರ್ಷದ ಶ್ರೀ ದತ್ತಾತ್ರೇಯ ಜಯಂತಿ ಸಪ್ತಾಹದ ಪ್ರಯುಕ್ತ ಧಾರ್ಮಿಕ ಕಾರ್ಯಕ್ರಮಗಳು, ಬೆಳಗ್ಗೆ 7ಕ್ಕೆ ಶ್ರೀಯವರಿಗೆ ರುದ್ರಾಭಿಷೇಕ, ಸರ್ವಾಲಂಕಾರ ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಶ್ರೀ ಗುರುಚರಿತ್ರೆ ಉಪನ್ಯಾಸ, ದತ್ತ ಭಜನೆ ಮತ್ತು ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಸದ್ಗುರು ಸೇವಾ ಮಂಡಲ, ಅರಮನೆ ಕಚೇರಿ ವೃತ್ತ.

■ **ಇಸ್ರೇ, ಮೈಸೂರು ಚಾಪ್ಟರ್ :** ಬೆಳಗ್ಗೆ 9.30ಕ್ಕೆ ಊರ್ಜವರಣ್ ಸಮ್ಮೇಳನ, ಮುಖ್ಯ ಅತಿಥಿಗಳು : ಕೈಗಾರಿಕೋದ್ಯಮಿ ಜಿ.ಕೆ.ಬಾಲಕೃಷ್ಣನ್, ಗೌರವ ಅತಿಥಿಗಳು : ಎನ್. ರಂಗರಾವ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ವಿಷ್ಣುರಂಗ, ಇಸ್ರೇ ಚಾಪ್ಟರ್ ಅಧ್ಯಕ್ಷ ಅನಿಲ್ ಕುಮಾರ್ ನಾಡಿಗೇರ್, ಮುಖ್ಯ ಭಾಷಣಕಾರರು: ಡಿ.ಎಸ್. ರಾಮಕೃಷ್ಣರಾವ್, ವಿವಿಸಿಇ ಪ್ರಿನ್ಸಿಪಾಲ್ ಡಾ.ಬಿ ಸದಾಶಿವೇಗೌಡ, ಧರ್ಮೇಂದ್ರ, ಓ. ಸತ್ಯೇಂದ್ರ ದೇವರಕೊಂಡೆ, ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಉಪಸ್ಥಿತರು: ಎನ್‌ಐಇ ಪ್ರಿನ್ಸಿಪಾಲ್ ಡಾ.ರೋಹಿಣಿ ನಾಗಪದ್ಮ, ಎಂಐಟಿ ಪ್ರಿನ್ಸಿಪಾಲ್ ಡಾ.ಬಿ.ಜಿ.ನರೇಶ್‌ಕುಮಾರ್, ವಿವಿಸಿಇ ಪ್ರಾಧ್ಯಾಪಕ ಡಾ.ಜಿ.ವಿ.ನವೀನ್ ಪ್ರಕಾಶ್, ಸ್ಥಳ: ಹೋಟೆಲ್ ಲೀ ರುಚಿ, ಹುಣಸೂರು ರಸ್ತೆ.

■ **ಮಹಾರತ್ನ ಟ್ರಸ್ಟ್ ಹಾಗೂ ವಿದ್ವಾನ್ ಸುರೇಶ್ ಅಭಿಮಾನಿ ಗೆಳೆಯರ ಬಳಗ :** ವಿದ್ವಾನ್ ಸುರೇಶ್ ಅವರ ಕಾವ್ಯಸಿರಿ ಕವನ ಸಂಕಲನ ಲೋಕಾರ್ಪಣೆ ಕಾರ್ಯಕ್ರಮ ಹಾಗೂ ಅಭಿನಂದನಾ ಸಮಾರಂಭ, ಪುಸ್ತಕ ಲೋಕಾರ್ಪಣೆ : ಆರಾಧ್ಯ ಮಹಾಸಭಾದ ಅಧ್ಯಕ್ಷ ಪಿ.ನಾಗಭೂಷಣ ಆರಾಧ್ಯ, ಉಪಸ್ಥಿತರು : ಜ್ಞಾನಧ್ವನಿ ಸಮುದಾಯ ಬಾನುಲಿ ಕೇಂದ್ರದ ಕಾರ್ಯಕ್ರಮ ನಿರ್ವಾಹಕ ಡಾ.ಪಾಂಡುರಂಗ ವಿಠಲ, ವಿದ್ವಾನ್ ಸುರೇಶ್, ಶ್ರೀಮತಿ ಸೀತಾ ಸುರೇಶ್, ಅಧ್ಯಕ್ಷತೆ : ಅನಿಕೇತನ ಟ್ರಸ್ಟ್‌ನ ಅಧ್ಯಕ್ಷ ಕೆ.ವಿ.ಮಲ್ಲೇಶ್, ಖ್ಯಾತ ಜಾನಪದ ಗಾಯಕರಾದ ಮಹಾಲಿಂಗು ಮತ್ತು ತಂಡದವರಿಂದ ಗೀತಗಾಯನ ಕಾರ್ಯಕ್ರಮ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3ಕ್ಕೆ.

■ **ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರ :** ಜನಪ್ರಿಯ ಹಾಸ್ಯ ಕಲಾವಿದೆ ಸುಧಾ ಬರಗೂರು ತಂಡದವರಿಂದ ಹಾಸ್ಯ ಸಂಜೆ, ಸ್ಥಳ: ಪಿ. ಕಾಳಿಂಗರಾವ್ ಗಾನಮಂಟಪ, ಸಂಜೆ 6ಕ್ಕೆ.

■ **ಸುಯೋಗ್ ಆಸ್ಪತ್ರೆ :** ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10ರಿಂದ.

■ **ರಂಗಾಯಣ, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು:** ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಚಿತ್ರಕಲಾ ಶಿಬಿರ, ಉದ್ಘಾಟನೆ : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮುಖ್ಯ ಅತಿಥಿಗಳು: ಹಿರಿಯ ಶಿಲ್ಪಿ ಎಲ್.ಶಿವಲಿಂಗಪ್ಪ, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಡೀನ್ ಎ. ದೇವರಾಜು, ಅಧ್ಯಕ್ಷತೆ: ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಸ್ಥಳ: ಬಿ.ವಿ.ಕಾರಂತ ರಂಗ ಚಾವಡಿ, ಬೆಳಗ್ಗೆ 10.30ಕ್ಕೆ.

■ **ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು:** ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ರಾಜಶೇಖರ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಶ್ರೀ ಸಾಹುಕಾರ್ ಚೆನ್ನಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಉನ್ನತ ಶಿಕ್ಷಣದಲ್ಲಿ ಸುಶಾಸನ : ಪರಿಕಲ್ಪನೆ ಮತ್ತು ಅನುಷ್ಠಾನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಸುಶಾಸನ ಕುರಿತು ವಿಷಯ ಮಂಡನೆ : ಚಾಣಕ್ಯ ವಿವಿ ಕುಲಪತಿ ಪ್ರೊ. ಯಶವಂತ ಡೋಂಗ್ರೆ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್. ಹೆಗ್ಡೆ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ. ಹೆಚ್. ರಾಜಶೇಖರ್, ಸ್ಥಳ: ಕ್ರಾಫರ್ಡ್ ಭವನ, ಮೈಸೂರು ವಿವಿ, ಬೆಳಗ್ಗೆ 10.30ಕ್ಕೆ.

■ **ಭಾರತೀಯ ವಾಕ್ ಮತ್ತು ಶ್ರವಣ ಸಂಘ, ಮೈಸೂರು ಚಾಪ್ಟರ್, ಆಯಿಷ್, ಜೆಎಸ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ :** ಅಂತಾರಾಷ್ಟ್ರೀಯ ವಿಕಲಚೇತನ ದಿನದ ಅಂಗವಾಗಿ ಸಂವಹನ ಅಸ್ವಸ್ಥತೆಗಳು ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ವಾಕಥಾನ್, ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7.15ಕ್ಕೆ.

■ **ಇಂಡಿಯನ್ ಬ್ಯಾಂಕ್:** ಇಂಡಿಯನ್ ಬ್ಯಾಂಕ್‌ನ ವಲಯ ಕಚೇರಿ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಮುಖ್ಯ ಅತಿಥಿಗಳು : ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾನಂದೀಶ್, ಸ್ಥಳ: ಶಾಲಿವಾಹನ ರಸ್ತೆ, ನಜರ್‌ಬಾದ್, ಬೆಳಗ್ಗೆ 10ಕ್ಕೆ.

■ **ರಂಗಾಯಣ :** ವಾರಾಂತ್ಯ ರಂಗ ಪ್ರದರ್ಶನದ ಅಂಗವಾಗಿ ರಂಗಾಯಣದ ರೆಪರ್ಟರಿ ಕಲಾವಿರಿಂದ ಟಿಪ್ಪು ನಿಜ ಕನಸುಗಳು ನಾಟಕ ಪ್ರದರ್ಶನ, ನಿರ್ದೇಶನ : ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ರಂಗಾಯಣದ ಭೂಮಿಗೀತ, ಸಂಜೆ 6ಕ್ಕೆ.

■ **ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್, ಮೈಸೂರು ವಲಯ :** ಕರ್ನಾಟಕ ಮತ್ತು ಜಮ್ಮು ಕಾಶ್ಮೀರ ನಡುವಿನ ಬಿಸಿಸಿಐ–19 ಕೂಚ್ ಬೇಹರ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಎಸ್‌ಡಿಎನ್‌ಆರ್‌ಡಬ್ಲ್ಯು ಮೈದಾನ, ಮಾನಸಗಂಗೋತ್ರಿ, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.35 ಋಷಿ ಮನೀಷಿಗಳು, ಲೇಖನ ದಾ.ಶ್ರೀರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್‌ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ, 3.30 ಮಕ್ಕಳ ಮಂಟಪ, 4.00 ನಾಟಕ "ಮುಂಜಾವಿನ ಮುಸುಕಿನಲಿ" ಕೆ.ಸದಾಶಿವರಾಯ ಅವರ ಸಣ್ಣ ಕಥೆಯನ್ನಾಧರಿಸಿದ ಬಾನುಲಿ ನಾಟಕವನ್ನು ರಚಿಸಿದವರು ಕೆ.ಎಸ್.ಶರತ್, ನಿರ್ಮಾಣ– ವಿ.ಮಾ.ಜಗದೀಶ್, 4.30 ನೆನಪಿನಂಗಳ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ–ಎಸ್.ಸುಬ್ರಹ್ಮಣ್ಯ, 9.15 ಭಾಷೆಗೆ ಶಾಸ್ತ್ರದ ಬೆಂಬಲ–ಡಾ. ಕೆಂಪೇಗೌಡ ಅವರೊಂದಿಗೆ ಸಂದರ್ಶನ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ದೇಬ ಪ್ರೀತಂ ರಾಯ್–ಸಿತಾರ್, ಸುಬಿರ್ –ತಬಲಾ, 10.30 ಸವಿನೆನಪು

2018ರ ಪ್ರಾಕೃತಿಕ ವಿಕೋಪದಲ್ಲಿ ಸಂತ್ರಸ್ಥರಾದ

75 ಕುಟುಂಬಗಳಿಗೆ ಮನೆಗಳ ಹಸ್ತಾಂತರ

ಮನೆಗಳನ್ನು ಪರಬಾರೆ ಮಾಡಿದರೆ ನಿರ್ದಾಕ್ಷಿಣ್ಯ ಕ್ರಮ: ಶಾಸಕ ಅಪ್ಪಚ್ಚು ರಂಜನ್ ಎಚ್ಚರಿಕೆ





ಮಡಿಕೇರಿ, ಡಿ.2– ಪ್ರಾಕೃತಿಕ ವಿಕೋಪದಲ್ಲಿ ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾದವರಿಗೆ ಸರ್ಕಾರ ನೀಡುವ ಮನೆಗಳನ್ನು ಪಡೆದುಕೊಂಡು ಬೇರೆಯವರಿಗೆ ಪರಬಾರೆ ಮಾಡಿದರೆ ಮುಲಾಜಿಲ್ಲದೇ ನಿರ್ದಾಕ್ಷಿಣ್ಯ ಕ್ರಮ ಜರುಗಿಸುವುದಾಗಿ ಶಾಸಕ ಅಪ್ಪಚ್ಚು ರಂಜನ್ ಎಚ್ಚರಿಕೆ ನೀಡಿದ್ದಾರೆ. ಕೊಡಗಿನಲ್ಲಿ 2018ರಲ್ಲಿ ಘಟಿಸಿದ ಪ್ರಾಕೃತಿಕ ವಿಕೋಪದಲ್ಲಿ ಸಂತ್ರಸ್ಥರಾದ 75 ಕುಟುಂಬಗಳಿಗೆ ಕೆ.ನಿಡುಗಣೆ ಗ್ರಾಮದ ಆರ್.ಟಿ.ಓ ಕಚೇರಿ ಸಮೀಪ ನಿರ್ಮಿಸಲಾದ ಮನೆಗಳನ್ನು ಶುಕ್ರವಾರ ಹಸ್ತಾಂತರಿಸಿ ಅವರು ಮಾತನಾಡಿದರು.

2018ರಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪದಲ್ಲಿ ಹಲವು ಮಂದಿ ಮನೆ, ಆಸ್ತಿ ಸಹಿತ ಜೀವಗಳನ್ನು ಕಳೆದು ಕೊಂಡಿದ್ದರು. ಆ ಸಂದರ್ಭ ಅಧಿಕಾರ ದಲ್ಲಿದ್ದ ಮುಖ್ಯಮಂತ್ರಿ ಹೆಚ್.ಡಿ. ಕುಮಾರ ಸ್ವಾಮಿ ಅವರೊಂದಿಗೆ ನಿರಂತರ ಮಾತು ಕತೆ ನಡೆಸಿ 2 ಬೆಡ್ ರೂಂಗಳ ಮನೆಗಳನ್ನು ನಿರ್ಮಿಸುವಂತೆ ಒತ್ತಡ ಹೇರಲಾಗಿತ್ತು. ಅದರಂತೆ ಕೆ.ನಿಡುಗಣೆ ಗ್ರಾಮದಲ್ಲಿ ಪ್ರತಿ ಮನೆಯನ್ನೂ 9.85 ಲಕ್ಷ ರೂ. ವೆಚ್ಚದಲ್ಲಿ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ನಿರ್ಮಿಸಲಾಗಿದೆ. ಸೈಟ್, ಕುಡಿಯುವ ನೀರು, ಕಾಂಕ್ರೀಟ್ ರಸ್ತೆ, ಬೀದಿ ದೀಪ, ಒಳಚರಂಡಿ ವ್ಯವಸ್ಥೆ ಇದೆಲ್ಲವನ್ನು ಸೇರಿ ಸಿದರೆ ಈ ಮನೆಗಳ ಒಟ್ಟು ವೆಚ್ಚ 15 ಲಕ್ಷ ರೂ.ಗಳಾಗುತ್ತದೆ ಎಂದು ಹೇಳಿದರು.

ನಿರ್ದಾಕ್ಷಿಣ್ಯ ಕ್ರಮ: ಸರಕಾರ ಪ್ರಾಕೃತಿಕ ವಿಕೋಪ ಸಂತ್ರಸ್ಥರಿಗೆ ನೀಡಿರುವ ಮನೆಗಳನ್ನು ನಿರ್ಮಿಸಿರುವ ಸ್ಥಳ ಈ ಹಿಂದೆ ಮಿನಿ ಹೆಲಿಪ್ಯಾಡ್ ಮಾಡಲು ಮೀಸಲಿಡಲಾಗಿತ್ತು. ಹೀಗಾಗಿ ಈ ಪ್ರದೇಶಕ್ಕೆ ಭಾರೀ ಬೇಡಿಕೆಯೂ ಇದೆ. ಆದ್ದರಿಂದ ಫಲಾನುಭವಿಗಳು ಯಾವುದೇ ಕಾರಣಕ್ಕೂ ಸರಕಾರ ನೀಡುವ ಮನೆಗಳನ್ನು ಬೇರೆಯವರಿಗೆ ಪರಬಾರೆ ಮಾಡಬಾರದು. ಕೆಲವು ಕಡೆಗಳಲ್ಲಿ ಈ ಕುರಿತು ದೂರುಗಳು ಕೇಳಿ ಬಂದಿವೆ. ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿಗಳು ಅನಿರೀಕ್ಷಿತ ರೀತಿಯಲ್ಲಿ ಪರಿಶೀಲನೆ ನಡೆಸಿದ ಸಂದರ್ಭ ಮನೆಗಳಲ್ಲಿ ವಾಸ ಮಾಡದೇ ಖಾಲಿ ಬಿಟ್ಟಿರುವುದು, ಬೇರೆಯವರಿಗೆ ಲೀಸ್‌ಗೆ ನೀಡಿರುವುದು, ಪರಭಾರೆ ಮಾಡಿರುವುದು ಪತ್ತೆಯಾದಲ್ಲಿ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುತ್ತದೆ. ಆ ವೇಳೆ ಯಾರೂ ಕೂಡ ತಮ್ಮ ಬಳಿ ಬಂದು ಶಿಫಾರಸು ಮಾಡಬೇಡಿ, ಯಾರೇ ತಪ್ಪೆಸಗಿ ದರೂ ಕ್ಷಮಿಸುವುದಿಲ್ಲ ಎಂದು ಶಾಸಕ ಅಪ್ಪಚ್ಚು ರಂಜನ್ ಖಡಕ್ ಆಗಿ ಎಚ್ಚರಿಸಿದರು.

ಮನೆಗಳ ಹಂಚಿಕೆ ಬಾಕಿ: ಮಾದಾಪುರದ ಜಂಬೂರಲ್ಲಿ ಈಗಾಗಲೇ 390 ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಅಲ್ಲಿ 250 ಮನೆಗಳ ನಿರ್ಮಾಣ ಕಾರ್ಯ ನಡೆಸಲಾಗುತ್ತಿದೆ. ಅದರಂತೆ ಗಾಳಿಬೀಡುವಿನಲ್ಲಿ 160 ಮನೆಗಳ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಕಾಮಗಾರಿಗೆ ವೇಗ ನೀಡಲಾಗಿದ್ದು, ಸದ್ಯದಲ್ಲಿಯೇ ಈ ಮನೆಗಳನ್ನು ಕೂಡ ಅರ್ಹ ಸಂತ್ರಸ್ಥರಿಗೆ ವಿತರಿಸಲಾಗುತ್ತದೆ ಎಂದು ಹೇಳಿದರು. ಕೆ.ನಿಡುಗಣೆ ಗ್ರಾಮದಲ್ಲಿ ಒಟ್ಟು 76 ಮನೆಗಳನ್ನು ನಿರ್ಮಾಣ ಮಾಡಿದ್ದು ಈ ಪೈಕಿ ಒಂದು ಮನೆಯನ್ನು ಅಂಗನವಾಡಿ ಕೇಂದ್ರ ಮಾಡಲಾಗುತ್ತದೆ ಎಂದು ರಂಜನ್ ಹೇಳಿದರು.

ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, 2018ರ ಪ್ರಾಕೃತಿಕ ವಿಕೋಪದ ಭಯ ಮತ್ತು ಆತಂಕ ಇಂದಿಗೂ ಮರೆಯಾಗಿಲ್ಲ. ಅಂದು ಗ್ರಾಮಕ್ಕೆ ಗ್ರಾಮವೇ ಸ್ಥಳಾಂತರವಾಗಿತ್ತು. ಹಲವು ಮಂದಿ ಪ್ರಾಣ ಕಳೆದುಕೊಂಡಿದ್ದು, ಅದನ್ನು ಮರೆಯಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಸಂತ್ರಸ್ಥರಾದ ಕುಟುಂಬಗಳಿಗೆ ಸರಕಾರ ಅತ್ಯುತ್ತಮ ರೀತಿಯ ಮನೆಗಳನ್ನು ಕಟ್ಟಿಕೊಡುವ ಮೂಲಕ ದಿಟ್ಟ ಹೆಜ್ಜೆ ಇಟ್ಟಿದೆ. ಇಂತಹ ಮನೆಗಳನ್ನು ಕರ್ನಾಟಕದಲ್ಲಿ ಮೊದಲ ಬಾರಿಗೆ ಕೊಡಗಿನಲ್ಲಿ ಮಾತ್ರವೇ ನಿರ್ಮಿಸಲಾಗಿದೆ ಎಂದು ನಾಪಂಡ ರವಿ ಕಾಳಪ್ಪ ಹೇಳಿದರು. ಮನೆಗಳ ಸುತ್ತಲ ಪ್ರದೇಶದಲ್ಲಿ ಹೂವು, ಹಣ್ಣಿನ ಗಿಡಗಳನ್ನು ಬೆಳೆಸುವ ಮೂಲಕ ಪರಿಸರ ಕಾಪಾಡಲು ಕೂಡ ಎಲ್ಲರೂ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಮಾತನಾಡಿ, ಪ್ರಾಕೃತಿಕ ವಿಕೋಪದಲ್ಲಿ ಸಂತ್ರಸ್ಥರಾದವರ ಸಂಕಷ್ಟಗಳ ಬಗ್ಗೆ ಅರಿವಿದೆ. ಮೂಲ ಸ್ಥಾನವನ್ನು ಬಿಟ್ಟು ಇತರ ಕಡೆಗಳಲ್ಲಿ ನೆಲೆ ಕಾಣುವುದು ಸುಲಭದ ಮಾತಲ್ಲ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು. ರಾಜೀವ್ ಗಾಂಧಿ ವಸತಿ ನಿಗಮ ಈ ಬಡಾವಣೆಯ ಎಲ್ಲಾ ಮನೆಗಳನ್ನು 1 ವರ್ಷದ ವರೆಗೆ ಮೇಲ್ವಿಚಾರಣೆ ನಡೆಸಲಿದೆ. ಆ ಬಳಿಕ ಸ್ಥಳೀಯ ಪಂಚಾಯಿತಿಗೆ ಹಸ್ತಾಂತರ ಮಾಡಲಾಗುತ್ತದೆ. ಬಳಿಕ ಪಂಚಾಯಿತಿ ಮತ್ತು ಸಂತ್ರಸ್ಥ ಮನೆಗಳ ಸದಸ್ಯರನ್ನು ಒಳಗೊಂಡ ಒಂದು ಸಮಿತಿ ರಚಿಸಿ ಅಭಿವೃದ್ಧಿ ಮತ್ತು ಆರ್ಥಿಕತೆ ಉತ್ತೇಜನಕ್ಕೆ ಪೂರಕವಾದ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಕೆ.ನಿಡುಗಣೆ ಗ್ರಾಪಂ ಅಧ್ಯಕ್ಷ ಡೀನ್ ಬೋಪಣ್ಣ ಮಾತನಾಡಿ, ಯಾವುದೇ ಕಾರಣಕ್ಕೂ ಈ ಮನೆಗಳನ್ನು ಮಾರಬೇಡಿ ಎಂದು ಸಲಹೆ ನೀಡಿದರು. ಈ ಪ್ರದೇಶದ ಅಭಿವೃದ್ಧಿಗೆ ಪಂಚಾಯಿತಿ ವತಿಯಿಂದ ಎಲ್ಲಾ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ, ರಾಜೀವ್ ಗಾಂಧಿ ವಸತಿ ನಿಗಮದ ಯೋಜನಾ ನಿರ್ದೇಶಕ ಶ್ರೀನಿವಾಸ್, ಕೆ.ನಿಡುಗಣೆ ಗ್ರಾ.ಪಂ ಉಪಾಧ್ಯಕ್ಷೆ ರೀಟಾ ಮುತ್ತಣ್ಣ ಉಪಸ್ಥಿತರಿದ್ದರು.

ಆಕಸ್ಮಿಕ ಬೆಂಕಿ: ಮನೆ ಭಸ್ಮ

ಮಡಿಕೇರಿ, ಡಿ.2– ಆಕಸ್ಮಿಕ ಅಗ್ನಿ ಅನಾಹುತದಿಂದ ಮನೆಯೊಂದು ಸಂಪೂರ್ಣವಾಗಿ ಸುಟ್ಟು ಹೋಗಿರುವ ಘಟನೆ ಕೊಡ್ಲಿಪೇಟೆ ಸಮೀಪದ ಬ್ಯಾಡಗೊಟ್ಟ ಗ್ರಾಮದಲ್ಲಿ ನಡೆದಿದೆ.

ಇಲ್ಲಿನ ನಿವಾಸಿ ಅಬ್ದುಲ್ ರೌಫ್ ಅವರ ಮನೆಯಲ್ಲಿ ಸಂಜೆ ಸುಮಾರು 6 ಗಂಟೆ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಮನೆಯ ಮೇಲ್ಛಾವಣಿ ಹೊತ್ತಿ ಉರಿಯುತ್ತಿದ್ದನ್ನು ಕಂಡ ಅಕ್ಕಪಕ್ಕದ ಮನೆಯವರು ಹಾಗೂ ಎಸ್‌ಕೆಎಸ್ ಎಸ್‌ಎಫ್ ಸದಸ್ಯರು ಆಗಮಿಸಿ ಬೆಂಕಿಯನ್ನು ನಂದಿಸಲು ಯತ್ನಿಸಿದರು. ನಂತರ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ ಬೆಂಕಿ ವ್ಯಾಪಿಸುವುದನ್ನು ನಿಯಂತ್ರಿಸಿದರು. ಆದರೆ ಅಷ್ಟೊತ್ತಿಗಾಗಲೇ ಮನೆಯಲ್ಲಿದ್ದ ಅಮೂಲ್ಯ ವಸ್ತುಗಳು, ಪೀಠೋಪಕರಣಗಳು, ದಾಖಲೆಗಳು ಸುಟ್ಟು ಕರಕಲಾಗಿತ್ತು.

ಅವಘಡ ಸಂಭವಿಸಿದಾಗ ಅಬ್ದುಲ್ ರೌಫ್ ಹಾಗೂ ಅವರ ತಾಯಿ ಆಸಿಯಮ್ಮ ಮನೆಯಲ್ಲಿರಲಿಲ್ಲ. ಸ್ಥಳಕ್ಕೆ ಶನಿವಾರಸಂತೆ ವೃತ್ತ ನಿರೀಕ್ಷಕ ಪರಶಿವಮೂರ್ತಿ, ಕಂದಾಯ ನಿರೀಕ್ಷಕ ಮನುಕುಮಾರ್, ಸ್ಥಳೀಯ ಚೆಸ್ಕಾಂ ಉಪ ವಲಯದ ಅಧಿಕಾರಿ ಹಿರೇಮಠ್ ಭೇಟಿ ನೀಡಿ ಪರಿಶೀಲಿಸಿದರು.

ಘಟನೆಯಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದ್ದು, ಸೂಕ್ತ ಪರಿಹಾರ ದೊರಕಿಸಿಕೊಡಬೇಕೆಂದು ಅಬ್ದುಲ್ ರೌಫ್ ಮನವಿ ಮಾಡಿದ್ದಾರೆ.

ಮಡಿಕೇರಿಯಲ್ಲಿ ಅಂಗನವಾಡಿ ನೌಕರರ ಪ್ರತಿಭಟನೆ

ಕಾರ್ಯಕರ್ತೆಯರನ್ನು ಶಿಕ್ಷಕಿಯರನ್ನಾಗಿ ಪರಿಗಣಿಸಲು ಆಗ್ರಹ



ಮಡಿಕೇರಿ, ಡಿ.2– ಅಂಗನವಾಡಿ ಕಾರ್ಯಕರ್ತೆಯರನ್ನು ಶಿಕ್ಷಕಿಯರನ್ನಾಗಿ ಪರಿಗಣಿಸುವಂತೆ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಹಾಗೂ ಸಿಐಟಿಯುನ ಕೊಡಗು ಜಿಲ್ಲಾ ಸಮಿತಿ ವತಿಯಿಂದ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದ ಸಿಐಟಿಯು ಪ್ರಮುಖರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಘೋಷಣೆಗಳನ್ನು ಕೂಗಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ಮಾತನಾಡಿ, ಅಂಗನವಾಡಿ ನೌಕರರು ಗ್ರಾಚ್ಯುಟಿ ಪಡೆಯಲು ಅರ್ಹರು ಎಂದು ನ್ಯಾಯಾಲಯ ಐತಿಹಾಸಿಕ ತೀರ್ಪು ನೀಡಿದೆ. ಇದರ ಪ್ರಕಾರ ರಾಜ್ಯದಾದ್ಯಂತ ಸಾವಿರಾರು ನಿವೃತ್ತಿ ನೌಕರರು ಸಿಡಿಪಿಓ, ಡಿ.ಡಿ, ನಿರ್ದೇಶಕರು ಮತ್ತು ಪ್ರಧಾನ ಕಾರ್ಯದರ್ಶಿಗಳಿಗೆ ಅರ್ಜಿಯನ್ನು ಸ್ವತಃ ಹಾಗೂ ಅಂಚೆ ಮುಖಾಂತರ ಸಲ್ಲಿಸಿದ್ದಾರೆ. ಆದರೆ ಕೆಲವೆಡೆ ಸಿಡಿಪಿಓ, ಡಿ.ಡಿ, ನಿರ್ದೇಶಕರು ಮತ್ತು ಪ್ರಧಾನ ಕಾರ್ಯದರ್ಶಿಗಳು ಅರ್ಜಿಗಳನ್ನು ತೆಗೆದುಕೊಳ್ಳಲು ನಿರಾಕರಿಸಿದ್ದಾರೆ. ಅಲ್ಲದೆ ಹಲವಾರು ನೌಕರರಿಗೆ ನೇಮಕಾತಿ ಮತ್ತು ನಿವೃತ್ತಿಯ ಆದೇಶವನ್ನು ನೀಡಿಲ್ಲ ಎಂದು ಆರೋಪಿಸಿದರು. ಬಳಿಕ ಪ್ರತಿಭಟನೆಯ ಮನವಿ ಪತ್ರವನ್ನು ಜಿಲ್ಲಾಡಳಿತದ ಮೂಲಕ ಸರಕಾರಕ್ಕೆ ಸಲ್ಲಿಸಲಾಯಿತು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಸಾಬು, ಪ್ರಮುಖರಾದ ಭಾಗೀರತಿ, ಅಂಗನವಾಡಿ ನೌಕರರ ಸಂಘದ ಸೋಮವಾರಪೇಟೆ ತಾಲೂಕು ಅಧ್ಯಕ್ಷೆ ಎಸ್.ಎಸ್.ಸಾವಿತ್ರಿ, ಕಾರ್ಯದರ್ಶಿ ವನಜಾಕ್ಷಿ ಖಜಾಂಚಿ ಜಮುನಾ, ವಿರಾಜಪೇಟೆ ತಾಲೂಕು ಅಧ್ಯಕ್ಷೆ ವಿ.ಎಸ್.ಸುಮಿತ್ರ, ಕಾರ್ಯದರ್ಶಿ ಬಿ.ಸಿ.ನಳಿನಾಕ್ಷಿ, ಖಜಾಂಚಿ ರಾಜೇಶ್ವರಿ, ಪ್ರಮುಖರಾದ ಶೀಲಾ ಸೇರಿದಂತೆ ಕಾರ್ಯಕರ್ತೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಗಿರಿಜನ ಉತ್ಸವ

ಮಡಿಕೇರಿ ನ.2– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಮಗ್ರ ಗಿರಿಜನ ಯೋಜನಾ ಇಲಾಖೆ, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಕಾರದಲ್ಲಿ ಪರಿಶಿಷ್ಟ ಪಂಗಡ ಉಪ ಯೋಜನೆಯಡಿ 'ಗಿರಿಜನ ಉತ್ಸವ'ವು ಡಿ.3 ರಂದು ಬೆಳಗ್ಗೆ 10 ಗಂಟೆಗೆ ವಿರಾಜಪೇಟೆ ತಾಲೂಕು ಬಾಳುಗೋಡು ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಸಿ.ನಾಗೇಶ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚುರಂಜನ್, ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್. ಭೋಜೇಗೌಡ, ಆಯನೂರು ಮಂಜುನಾಥ್, ಕರ್ನಾಟಕ ಜೀವ ವೈವಿದ್ಯ ಮಂಡಳಿ ಅಧ್ಯಕ್ಷರಾದ ನಾಪಂಡ ಎಂ.ರವಿಕಾಳಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

ಖಾಸಗಿ ಬಸ್ಸಿನಲ್ಲಿ ದುಬಾರಿ ದರ ವಸೂಲಿ: ಗ್ರಾಮಸ್ಥರ ದೂರು

ನಾಪೋಕ್ಲು, ಡಿ.2– ಖಾಸಗಿ ಬಸ್ಸಿನಲ್ಲಿ ದುಬಾರಿ ದರ ವಸೂಲು ಮಾಡುತ್ತಿರುವ ಬಗ್ಗೆ ಸಮೀಪದ ಕಕ್ಕಬ್ಬೆ ಗ್ರಾಮಸ್ಥರು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ. ಕಕ್ಕಬೆಯಿಂದ ಬೆಂಗಳೂರಿಗೆ ತೆರಳುತ್ತಿರುವ ಖಾಸಗಿ ಬಸ್ಸಿನಲ್ಲಿ ಬೆಂಗಳೂರು–ಕಕ್ಕಬೆಗೆ 650 ದರ ನಿಗದಿಯಾಗಿತ್ತು. ಇದೀಗ ಆ ದರವನ್ನು 900 ರೂಗಳಿಗೆ ಏರಿಸಿದ್ದಾರೆ. ಕೆಲವೊಂದು ಸಂದರ್ಭದಲ್ಲಿ 1300 ರೂಪಾಯಿ ವಸೂಲಿ ಮಾಡುತ್ತಿದ್ದಾರೆ. ವಿಪರೀತ ದರ ಏರಿಕೆಯಿಂದ ಜನಸಾಮಾನ್ಯರು ಸಮಸ್ಯೆ ಅನುಭವಿಸುವಂತಾಗಿದೆ ಎಂದು ಅವರು ದೂರಿದ್ದಾರೆ.

ಗ್ರಾಮದ ಹಲವರ ಮಕ್ಕಳು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ದುಬಾರಿ ದರ ತೆತ್ತು ಬೆಂಗಳೂರಿಗೆ ಪ್ರಯಾಣಿಸುವಂತಾಗಿದೆ. ಇದೊಂದು ರೀತಿ ಹಗಲು ದರೋಡೆ ಎಂದು ಆರೋಪಿಸಿರುವ ಅವರು ಖಾಸಗಿ ಬಸ್ಸು ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ವಿರಾಜಪೇಟೆ ತಾಲೂಕು ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭ



ವಿರಾಜಪೇಟೆ, ಡಿ.3– ವಿರಾಜಪೇಟೆ ತಾಲೂಕಿನ ಅನೇಕ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಪ್ರಾರಂಭಗೊಂಡಿದೆ. ಮಳೆ ಕಾರಣ ಈ ವರ್ಷ ತಡವಾಗಿ ಕಾಮಗಾರಿ ಆರಂಭಗೊಂಡಿದ್ದು, ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುವುದು ಎಂದು ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದರು.

ವಿರಾಜಪೇಟೆ ತಾಲೂಕಿನ ಹೆಗ್ಗಳ ನಿರ್ಮಲಗಿರಿ ಚರ್ಚ್ ರಸ್ತೆಗೆ 5 ಲಕ್ಷ ರೂ. ಅನುದಾನದಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಹೆಗ್ಗಳ–ಬೂದಿಮಾಳ ಮುಖ್ಯ ರಸ್ತೆಗೆ 11 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಕಾಂಕ್ರೀಟ್ ರಸ್ತೆ ಉದ್ಘಾಟಿಸಿದ ಬಳಿಕ ಮಾತನಾಡಿ ಸರಕಾರದ ಅನುದಾನ ಸರಿಯಾದ ರೀತಿಯಲ್ಲಿ ಬಳಕೆಯಾಗಬೇಕು. ಕಾಮಗಾರಿ ನಡೆಯುವ ಸಂದರ್ಭ ಕಳಪೆಯಾಗದಂತೆ ಸ್ಥಳೀಯ ಗ್ರಾಮಸ್ಥರು ಎಚ್ಚರ ವಹಿಸಬೇಕು ಎಂದರು.

ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ ಈಗಾಗಲೇ ಗ್ರಾಮೀಣ ಭಾಗದ ಅನೇಕ ರಸ್ತೆಗಳ ಕಾಮಗಾರಿ ಮುಗಿದಿದೆ. ಇನ್ನು ಉಳಿದಿರುವ ಮುಖ್ಯರಸ್ತೆ ಹಾಗೂ ಎಲ್ಲಾ ರಸ್ತೆಗಳನ್ನು ಕೆಲವೆ ದಿನಗಳಲ್ಲಿ ಅಭಿವೃದ್ಧಿಗೊಳಿಸುವುದಾಗಿ ತಿಳಿಸಿದರು.

ಜಿಪಂ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ, ಶಕ್ತಿ ಕೇಂದ್ರದ ಪ್ರವೀಣ್, ಬೇಟೋಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಯಶೋದ, ಸದಸ್ಯರಾದ ಬೋಪಣ್ಣ, ಲಕ್ಷ್ಮಿ, ಹೆಗ್ಗಳ ಚರ್ಚ್ ಧರ್ಮ ಗುರು ಜೋಸೆಫ್, ಅಂತೋಣಿ, ಗುತ್ತಿಗೆದಾರರಾದ ಸಿ.ಪ್ರವೀಣ್ ಮತ್ತು ಎ.ಹರೀಶ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಬ್ರಾಹ್ಮಣರ ಮೀಸಲಾತಿಯಿಂದ ಹಿಂದುಳಿದ ವರ್ಗಗಳಿಗೆ ಅನ್ಯಾಯ

ಮುತ್ತಿಗೆ ಗ್ರಾಮದಲ್ಲಿ ಕನಕ ಜಯಂತೋತ್ಸವದಲ್ಲಿ ಶಾಸಕ ಯತೀಂದ್ರ ಬೇಸರ



ಚಾಮರಾಜನಗರ, ಡಿ.2– ಯಾವುದೇ ಹೋರಾಟ ಮಾಡದೇ ಇರುವ ಬ್ರಾಹ್ಮಣರಿಗೆ ಕೇಂದ್ರ ಸರ್ಕಾರ ಶೇ.10ರಷ್ಟು ಮೀಸಲಾತಿಯನ್ನು ನೀಡುವ ಮೂಲಕ ಅತ್ಯಂತ ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡಿದ್ದು, ಅತ್ಯಂತ ಹೆಚ್ಚಿನ ನಷ್ಟವಾಗಿರುವುದು ಕುರುಬ ಸಮುದಾಯಕ್ಕೆ ಎಂದು ವರುಣಾ ಕ್ಷೇತ್ರದ ಶಾಸಕ ಯತೀಂದ್ರ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಮುತ್ತಿಗೆ ಗ್ರಾಮದಲ್ಲಿ ಕನಕ ಯುವಕರ ಸೇನೆ ವತಿಯಿಂದ ನಡೆದ ಭಕ್ತ ಕನಕದಾಸರ 535ನೇ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದುಳಿದ ವರ್ಗಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗದವರು ಶತಮಾನಗಳಿಂದ ಶೋಷಣೆಗೊಳಗಾದ ಸಮಾಜಗಳಿಗೆ ಮೀಸಲಾತಿ ನೀಡಲು ಪ್ರಯತ್ನ ಪಟ್ಟಾಗೆಲ್ಲ ವಿರೋಧ ವ್ಯಕ್ತಪಡಿಸಿದವರು ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಇವರು ಸನಾತನ ಧರ್ಮವನ್ನು ಪ್ರತಿಪಾದಿಸುವ ಮೂಲಕ ಅಂಬೇಡ್ಕರ್ ಅವರ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದ್ದಾರೆ ಎಂದರು. ಯಾವುದೇ ಹೋರಾಟ ಮಾಡದ ಬ್ರಾಹ್ಮಣರಿಗೆ ಶೇ.10 ಮೀಸಲಾತಿ ನೀಡಲಾಗಿದೆ. ಆದರೆ, ಸತತ ಹೋರಾಟ ಮಾಡುತ್ತಿರುವ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಲ್ಲಿ ತಾರತಮ್ಯ ಮಾಡುತ್ತಿವೆ. ಶೇ.4 ರಷ್ಟು ಮೀಸಲಾತಿಯನ್ನು ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಕುರುಬ ಸಮಾಜಕ್ಕೆ ನೀಡಲಾಗಿದೆ. ದೇಶದಲ್ಲಿ ಶೇ. 3 ರಷ್ಟು ಜನಸಂಖ್ಯೆ ಹೊಂದಿರುವ ಬ್ರಾಹ್ಮಣರಿಗೆ ಶೇ. 10 ರಷ್ಟು ಮೀಸಲಾತಿಯನ್ನು ಯಾವ ಮಾನದಂಡದಲ್ಲಿ ನೀಡಲಾಯಿತು. ಅದನ್ನು ಪ್ರಶ್ನೆ ಮಾಡಿದರೆ, ಬಿಜೆಪಿ ಹಾಗೂ ಹಿಂದುತ್ವವಾದಿಗಳಲ್ಲಿ ಉತ್ತರವಿಲ್ಲ. ನ್ಯಾಯಾಲಯವು ಸಹ ಈ ಮೀಸಲಾತಿಯನ್ನು ಎತ್ತಿ ಹಿಡಿದಿದೆ ಎಂದರು.

ಕೆಆರ್. ನಗರದ ಕಾಗಿನೆಲೆ ಶಾಖಾ ಮಠದ ಕಿರಿಯ ಶ್ರೀಗಳಾದ ಅರುಣ ಸಿದ್ದೇಶ್ವರ ಸ್ವಾಮಿ ಸಾನ್ನಿಧ್ಯ ವಹಿಸಿ ಮಾತನಾಡಿ, ಮುತ್ತಿಗೆ ಗ್ರಾಮ ಮುತ್ತಿನಂಥ ಗ್ರಾಮವಾಗಿದ್ದು, ಕನಕದಾಸರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಎಲ್ಲಾ ವರ್ಗದವರ ಜೊತೆಗೆ ಅನ್ಯೋನ್ಯತೆಯಿಂದ ಬಾಳುತ್ತಿದ್ದಾರೆ. ಗ್ರಾಮದಲ್ಲಿರುವ ಎಲ್ಲರೂ ಸಹ ವೈಯಕ್ತಿಕ ಭಿನ್ನಾಪ್ರಾಯವನ್ನು ಬಿಟ್ಟು ಗ್ರಾಮದ ಅಭಿವೃದ್ಧಿಯತ್ತ ಗಮನ ಕೊಡಿ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ, ಸಮಾಜದ ಮುಖ್ಯವಾಹಿನಿ ಬರಬೇಕು ಎಂದರು.

ಬಿಎಸ್ಪಿ ಮುಖಂಡ ಅರಕಲವಾಡಿ ನಾಗೇಂದ್ರ ಮುಖ್ಯ ಭಾಷಣ ಮಾಡಿ, ಸಿದ್ದರಾಮಯ್ಯ ಅವರ ಕೊಡುಗೆಯನ್ನು ಕೊಂಡಾಡಿ ಓಬಿಸಿ ಮತ್ತು ಎಸ್ಸಿ, ಎಸ್ಟಿ ಸಮುದಾಯಗಳು ಒಂದಾದರೆ ಮಾತ್ರ ಸವಲತ್ತು ಪಡೆದುಕೊಳ್ಳಲು ಸಾಧ್ಯ. ಅಂಬೇಡ್ಕರ್ ಅವರ ಸಂವಿಧಾನದ ಆಶಯವನ್ನು ಈಡೇರಿಸಲು ಸಾಧ್ಯವಿದೆ ಎಂದರು.

ವೇದಿಕೆಯಲ್ಲಿ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ಸಮಾಜದ ಬಂಧುಗಳನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ತಾಲೂಕು ಕುರುಬ ಸಂಘದ ಅಧ್ಯಕ್ಷ ಸಿ.ಎನ್. ಬಾಲರಾಜು, ಉಪಾಧ್ಯಕ್ಷ ಉಮೇಶ್, ಗೌರವಾಧ್ಯಕ್ಷ ಸೋಮಣ್ಣೇಗೌಡ, ಪ್ರದೇಶದ ಕುರುಬರ ಸಂಘ ಅಧ್ಯಕ್ಷ ಸುಬ್ರಮಣ್ಯ, ಮುಖಂಡರಾದ ವಕೀಲೆ ಜೆ. ನಾಗಶ್ರೀಪ್ರತಾಪ್, ಎಚ್.ಎಂ. ಗಣೇಶ ಪ್ರಸಾದ್, ಕುರುಬರ ಸಂಘದ ನಿರ್ದೇಶಕ ಜೆ. ಗೋಪಿ, ಎಪಿಎಂಸಿ ನಿರ್ದೇಶಕ ಎಂ.ಬಿ. ಗುರುಸ್ವಾಮಿ, ಜಿಲ್ಲಾ ಕಸಾಪ ಉಪಾಧ್ಯಕ್ಷ ಮಾದಾಪುರ ರವಿಕುಮಾರ್, ಹೆಗ್ಗೋಠಾರ ಗ್ರಾಪಂ ಅಧ್ಯಕ್ಷೆ ದೀಪ ಸಂತೋಷ, ಸದಸ್ಯರಾದ ಡಿ. ಮಂಜು, ಅಂಬಿಕಾ ವಿಲ್ಸನ್, ಪಿಡಿಓ ಮಾದಪ್ಪ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಂಜೇಗೌಡ, ಉಪಾಧ್ಯಕ್ಷ ಬಸಪ್ಪನಪಾಳ್ಯ ನಟರಾಜು, ಮಾಜಿ ಅಧ್ಯಕ್ಷ ಜನ್ನೂರು ಮಹದೇವ್, ಮಾಜಿ ಅಧ್ಯಕ್ಷ ಬಸಪ್ಪನಪಾಳ್ಯ ರಾಜಶೇಖರ್, ಕನಕ ನೌಕರರ ಸಂಘದ ಅಧ್ಯಕ್ಷ ನಿಂಗೇಗೌಡ, ಮುತ್ತಿಗೆ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಕಮಿಟಿಯ ಬಸವರಾಜು, ಜವರೇಗೌಡ, ಶಿವಲಿಂಗೇಗೌಡ, ಬೆಳ್ಳೇಗೌಡ, ನಾಗೇಶ್, ಮುತ್ತಿಗೆ ಮೂರ್ತಿ, ಮುತ್ತಿಗೆ ದೊರೆ, ಕರಿನಂನಪುರ ಸ್ವಾಮಿ, ಹಳೇಪುರ ಬಸವಣ್ಣ, ಶಿಕ್ಷಕ ಬಸವರಾಜು ಇತರರು ಹಾಜರಿದ್ದರು.

ವಿಕಲಚೇತನರು, ಹಿರಿಯ ನಾಗರಿಕರಿಗೆ ಸಾಧನ ಸಲಕರಣಾ ವಿತರಣೆ

ನೀಲನಕ್ಷೆ ತಯಾರಿಸಲು ಸಂಸದ ಶ್ರೀನಿವಾಸಪ್ರಸಾದ್ ಸೂಚನೆ



ಚಾಮರಾಜನಗರ, ಡಿ.2– ವಿಕಲಚೇತನರಿಗೆ ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಜುಲೈನಲ್ಲಿ ನಡೆದ ತಪಾಸಣಾ ಶಿಬಿರಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಉಚಿತವಾಗಿ ಅಗತ್ಯವಿರುವ ಸಾಧನ, ಸಲಕರಣೆಗಳನ್ನು ವಿತರಿಸುವ ಸಲುವಾಗಿ ಕಾರ್ಯಕ್ರಮ ಆಯೋಜನೆಗೆ ನೀಲನಕ್ಷೆ ತಯಾರಿಸುವಂತೆ ಲೋಕಸಭಾ ಸದಸ್ಯರಾದ ವಿ. ಶ್ರೀನಿವಾಸಪ್ರಸಾದ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲೆಯಲ್ಲಿ ವಿಕಲಚೇತನರಿಗೆ ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಅಗತ್ಯವಿರುವ ಸಾಧನ, ಸಲಕರಣೆಗಳನ್ನು ವಿತರಿಸುವ ಸಂಬಂಧ ಅಧಿಕಾರಿಗಳೊಂದಿಗೆ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಕಲಚೇತನರಿಗೆ ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಅಗತ್ಯವಿರುವ ಸಾಧನ, ಸಲಕರಣೆ ವಿತರಿಸುವುದು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ, ಮಾನವೀಯ ಹಾಗೂ ಮೌಲ್ಯಯುತ ಕಾರ್ಯಕ್ರಮವಾಗಿದೆ. 36 ಬಗೆಯ ಆಧುನಿಕ ಸಾಧನ, ಸಲಕರಣೆಗಳನ್ನು ಕಾರ್ಯಕ್ರಮದಲ್ಲಿ ವಿತರಿಸಲಾಗುತ್ತಿದೆ. ಕರ್ನಾಟಕ ರಾಜ್ಯದ ಪೈಕಿ ಚಾಮರಾಜನಗರ ಲೋಕಸಭಾ ಕ್ಷೇತ್ರ ಆಯ್ಕೆಯಾಗಿರುವ ಏಕೈಕ ಕ್ಷೇತ್ರವಾಗಿದೆ. ಜಿಲ್ಲಾಮಟ್ಟದಲ್ಲಿ ಕಾರ್ಯಕ್ರಮವನ್ನು ಡಿಸೆಂಬರ್ 21ರಿಂದ 26ರೊಳಗೆ ಹಮ್ಮಿಕೊಳ್ಳಲು ದಿನಾಂಕ ನಿಗದಿ ಮಾಡಿಕೊಳ್ಳುವಂತೆ ತಿಳಿಸಿದರು.

ಕಾರ್ಯಕ್ರಮದ ಮೊದಲ ಭಾಗವಾಗಿ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ ವಿಕಲಚೇತನರ ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರ ಮಾಹಿತಿ ಸಂಗ್ರಹಿಸುವ ಕಾರ್ಯ ನಡೆದಿತ್ತು. ಜುಲೈ 19ರಂದು ಹನೂರು. 20ರಂದು ಕೊಳ್ಳೇಗಾಲ, 21ರಂದು ಗುಂಡ್ಲುಪೇಟೆ ಹಾಗೂ 22ರಂದು ಚಾಮರಾಜನಗರದಲ್ಲಿ ನಡೆದ ತಪಾಸಣಾ ಶಿಬಿರಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಸಾಧನ, ಸಲಕರಣೆ ವಿತರಿಸುವ ಕಾರ್ಯಕ್ರಮವನ್ನು ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಅಚ್ಚುಕಟ್ಟಾಗಿ ಆಯೋಜಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಇದೇ ವೇಳೆ ಮಾತನಾಡಿದ ಶಾಸಕ ಆರ್. ನರೇಂದ್ರ ಅವರು ವಿಕಲಚೇತನರಿಗೆ ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಅಗತ್ಯವಿರುವ ಸಾಧನ, ಸಲಕರಣೆಗಳನ್ನು ವಿತರಿಸಲು ಜಿಲ್ಲೆಗೆ ಬರುವ 10 ಟ್ರಕ್ ಲೋಡ್ ಸಾಧನ, ಸಲಕರಣೆಗಳನ್ನು ಕ್ರಮಬದ್ಧವಾಗಿ ದಾಸ್ತಾನು ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಮಾತನಾಡಿ ಜಿಲ್ಲೆಯಲ್ಲಿ ವಿಕಲಚೇತನರು, ಹಿರಿಯ ನಾಗರಿಕರಿಗೆ ಅಗತ್ಯವಿರುವ ಸಾಧನ, ಸಲಕರಣೆಗಳನ್ನು ವಿತರಿಸುವ ಸಂಬಂಧ ಮುಂದಿನ ವಾರದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಸಭೆನಡೆಸಿ ಜವಾಬ್ದಾರಿಗಳನ್ನು ವಹಿಸಲು ಕ್ರಮ ವಹಿಸಲಾಗುವುದು ಎಂದರು.

ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ನಿಜಗುಣರಾಜು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಗೀತಾಲಕ್ಷ್ಮಿ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ದೀಪಾ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಸುಧಾ, ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಎಂಇಎಸ್ ನಿಷೇಧಕ್ಕೆ ಆಗ್ರಹಿಸಿ ಮನವಿ ಸಲ್ಲಿಕೆ

ಗುಂಡ್ಲುಪೇಟೆ, ಡಿ.2– ರಾಜ್ಯ ರಸ್ತೆ ಸಾರಿಗೆ ಬಸ್‌ಗಳ ಮೇಲೆ ಕಲ್ಲು ತೂರಾಟ ಹಾಗೂ ಮಸಿ ಬಳಿದಿರುವ ಎಂಇಎಸ್ ಅನ್ನು ನಿಷೇಧಿಸುವಂತೆ ಒತ್ತಾಯಿಸಿ ಇಲ್ಲಿನ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕದ ಪದಾಧಿಕಾರಿಗಳು ತಹಶೀಲ್ದಾರ್ ಸಿ.ಜಿ.ರವಿಶಂಕರ್ ಅವರಿಗೆ ಮನವಿ ಸಲ್ಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧ್ಯಕ್ಷ ಆರ್.ಮೋಹನ್ ಎಂಇಎಸ್ ಪದೇ ಪದೇ ನಮ್ಮ ಮೇಲೆ ಪುಂಡಾಟಿಕೆ ನಡೆಸುತ್ತಿದೆ. ನಮ್ಮ ಸಾರಿಗೆ ಸಂಸ್ಥೆಯ ಬಸ್ಸುಗಳಿಗೆ ಮಸಿ ಬಳಿದು, ಗಾಜು ಹೊಡೆದು ಕ್ರೌರ್ಯ ಮೆರೆಯುತ್ತಿದೆ. ಇಂತಹ ಸಂಘಟನೆಯನ್ನು ನಿಷೇಧಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಮನವಿ ಮಾಡಿದ್ದೇವೆ ಎಂದರು.

ಸಿಸಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಚಾಮರಾಜನಗರ, ಡಿ.2– ತಾಲೂಕಿನ ಯಡಪುರ–ಉತ್ತವಳ್ಳಿ ಗ್ರಾಮದಲ್ಲಿ ಕಾಂಕ್ರಿಟ್ ರಸ್ತೆ, ಚರಂಡಿ ನಿರ್ಮಾಣ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿ, ಮಲೆನಾಡು ಪ್ರದೇಶ ಅಭಿವೃದ್ಧಿ ಅನುದಾನ ಯೋಜನೆಯಡಿಯಲ್ಲಿ ಯಡಪುರ ಗ್ರಾಮದಲ್ಲಿ ಸಿಸಿ ರಸ್ತೆ ಚರಂಡಿ ನಿರ್ಮಾಣ ಅಭಿವೃದ್ಧಿ ಕಾಮಗಾರಿಗೆ 20 ಲಕ್ಷ ರೂ. ಉತ್ತವಳ್ಳಿ ಗ್ರಾಮಕ್ಕೆ 14 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ತಮ್ಮ ಕೇತ್ರ ವ್ಯಾಪ್ತಿಯಲ್ಲಿ ಜನತೆಯ ಆಶಯಕ್ಕೆ ಬದ್ದರಾಗಿ ಗ್ರಾಮಗಳಲ್ಲಿ ರಸ್ತೆ ಚರಂಡಿ, ಸಮುದಾಯ ಭವನ ಆಶ್ರಯ ಮನೆ ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಸರಕಾರ ಮಂಜೂರು ಮಾಡುವ ಅನುದಾನ ಹಾಗೂ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಕಾಮಗಾರಿ ನಿರ್ವಹಣೆ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು ಎಂದರು.

ಕನಿಷ್ಟ ವೇತನ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಆರ್,ಉಮೇಶ್ ಗ್ರಾ,ಪಂ ಅಧ್ಯಕ್ಷೆ ಎಂ.ಸಿ.ಮಹದೇವಮ್ಮ ಗ್ರಾ,ಪಂ ಸದಸ್ಯರಾದ ಶಿವಕುಮಾರ್ ಮಹದೇವ ಸ್ವಾಮಿ ಎನ್,ಮಹೇಶ್ ಪ್ರಮೋದ್ ಅಜಯ್ ಶಕುಂತಲಾ ಪ್ರಭುಸ್ವಾಮಿ. ರಾಜು ಕಾಂತರಾಜು ಗುರುಸ್ವಾಮಿ ಕೆಆರ್.ಐ.ಡಿ.ಎಲ್ ಇಂಜಿನಿಯರ್ ಮಧುಸೂದನ್ ಸೇರಿದಂತೆ ಗ್ರಾಮಸ್ಥರು ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಡಿ.2– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಡಿ.3ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಚಂದಕವಾಡಿ, ಹಿರಿಕೆರೆ, ಕಾಳಿಂಕಾಂಬ ಕಾಲೋನಿ, ರೇಚಂಬಳ್ಳಿ, ಮಲ್ಲೇದೇವನಹಳ್ಳಿ, ನವೋದಯ, ಹೊಂಡರಬಾಳು, ಜ್ಯೋತಿಗೌಡನಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ಸ್ಕೂಟರ್ ಸವಾರ ಸಾವು

ಚಾಮರಾಜನಗರ, ಡಿ.2– ಕೆಎಸ್‌ಆರ್‌ಟಿಸಿ ಬಸ್ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಸ್ಥಳದಲ್ಲಿಯೇ



ಮೃತಪಟ್ಟಿರುವ ಘಟನೆ ತಾಲೂಕಿನ ಕಾಗಲವಾಡಿ ಕೂಡ್ಲೂರು ಗ್ರಾಮದ ನಡುವಿನ ಹಂದ್ರಹಳ್ಳಿ ಕ್ರಾಸ್‌ನಲ್ಲಿ ಶುಕ್ರವಾರ ಮಧ್ಯಾಹ್ನ ಸಂಭವಿಸಿದೆ.

ಕೆ.ಆರ್.ನಗರದ ಕೆಎಸ್ ಆರ್‌ಟಿಸಿ ನೌಕರ ಸಂತೋಷ್ (38) ಮೃತಪಟ್ಟವರು. ಸಂತೋಷ ಅವರು ಕಾಗಲವಾಡಿ ಗ್ರಾಮದ ಸಂಬಂಧಿಕರ ಮನೆಗೆ ಆಗಮಿಸಿದ್ದರು. ಇಂದು ಅವರು ಸ್ವಗ್ರಾಮಕ್ಕೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ಕಾಗಲವಾಡಿಯಿಂದ ಕೂಡ್ಲೂರು ಗ್ರಾಮದ ನಡುವಿನ ಹಂದ್ರಹಳ್ಳಿ ಕ್ರಾಸ್‌ನಲ್ಲಿ ಎದುರುನಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಾಗ ಈ ದುರಂತ ಸಂಭವಿಸಿದೆ. ರಾಮಸಮುದ್ರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆನಂದ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ರಾಮಸಮುದ್ರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಂಡೀಪುರದ 4 ಸಾಕಾನೆಗಳು ಮಧ್ಯಪ್ರದೇಶಕ್ಕೆ ಹಸ್ತಾಂತರ



ಗುಂಡ್ಲುಪೇಟೆ, ಡಿ.2– ಅರಣ್ಯ ಇಲಾಖೆಯ ಆದೇಶದ ಮೇರೆಗೆ ಬಂಡೀಪುರದ ನಾಲ್ಕು ಸಾಕಾನೆಗಳನ್ನು ಹೊರ ರಾಜ್ಯಕ್ಕೆ ಹಸ್ತಾಂತರಿಸಲಾಯಿತು.

ರಾಜ್ಯ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರ ಆದೇಶದ ಮೇರೆಗೆ ಬಂಡೀಪುರದ ರಾಂಪುರ ಸಾಕಾನೆ ಶಿಬಿರದಲ್ಲಿದ್ದ ನಾಲ್ಕು ಸಾಕಾನೆಗಳನ್ನು ಮಧ್ಯಪ್ರದೇಶಕ್ಕೆ ಕಳುಹಿಸಲಾಯಿತು.

ಮಧ್ಯಪ್ರದೇಶದ ಅರಣ್ಯ ಇಲಾಖೆಯ ಕೋರಿಕೆ ಮೇರೆಗೆ ಬಂಡೀಪುರ ಸಮೀಪದ ರಾಂಪುರ ಸಾಕಾನೆ ಶಿಬಿರದ ಗಣೇಶ, ಕೃಷ್ಣ, ಗಜ, ಮಹರ್ಷಿ ಮತ್ತು ಪೂಜಾ ಎಂಬ ಐದು ಆನೆಗಳನ್ನು ಹಸ್ತಾಂತರಿಸುವಂತೆ ಆದೇಶಿಸಿತ್ತು. ಆದರೆ ಗಣೇಶ ಎಂಬ ಆನೆ ಕಳೆದ ಎರಡು ತಿಂಗಳ ಹಿಂದೆ ಅನಾರೋಗ್ಯದಿಂದ ಸಾವಿಗೀಡಾಗಿದ್ದರಿಂದ ಇನ್ನುಳಿದ ನಾಲ್ಕು ಆನೆಗಳನ್ನು ವೈದ್ಯಕೀಯ ತಪಾಸಣೆಗೊಳಪಡಿಸಿ ಭೂಪಾಲ್‌ನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಶೀಷ್ ಅವರಿಗೆ ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಡಾ.ರಮೇಶ್‌ಕುಮಾರ್, ಎಸಿಎಫ್ ನವೀನ್ ಹಾಗೂ ವಿವಿಧ ವಲಯಗಳ ಅರಣ್ಯಾಧಿಕಾರಿಗಳು ಇದ್ದರು.

ಮೂರನೇ ಪುಟದಿಂದ

ದರ ಇಳಿಕೆ ನಿರ್ಧಾರ

ಎಲ್‌ಟಿ 2(ಎ2) ಗ್ರಾಹಕರಿಗೆ ಈಗ ಪ್ರತಿ ಯುನಿಟ್‌ಗೆ ವಿಧಿಸುತ್ತಿದ್ದ 4.15 ರೂ ಹಾಗೂ 4.05 ರೂ. ಶುಲ್ಕವನ್ನು 3.6 ರೂ.ಗೆ ಇಳಿಸಲು ಚಿಂತಿಸಲಾಗಿದೆ. 50ರಿಂದ 200 ಯುನಿಟ್‌ವರೆಗಿನ ಬಳಕೆಗೆ ಈ ವರೆಗೆ ವಿಧಿಸುತ್ತಿದ್ದ 2 ಸ್ಲ್ಯಾಬ್‌ಗಳನ್ನು ಒಂದಕ್ಕೆ ಇಳಿಸಲು ನಿರ್ಧರಿಸಲಾಗಿದ್ದು, 5.4 ರೂ. ಪ್ರತಿ ಯುನಿಟ್ ಸರಾಸರಿ ಬಳಕೆದಾರರ ಶುಲ್ಕ ವಿಧಿಸುವ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ. ಇದರಿಂದ ಪ್ರತಿ ಯುನಿಟ್‌ಗೆ ಸರಾಸರಿ 2 ರೂ.ವರೆಗೂ ಇಳಿಕೆ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಲಾಗುತ್ತಿದೆ. 200 ಯುನಿಟ್ ಹಾಗೂ ನಂತರದ ಬಳಕೆದಾರರಿಗೆ ಈಗಿರುವ 8.20 ಹಾಗೂ 7.70 ರೂ.ದರವನ್ನು ಏಕೀಕೃತಗೊಳಿಸಿ 7 ರೂ.ಗೆ ಇಳಿಸಲಾಗುತ್ತದೆ ಎಂದು ತಿಳಿದುಬಂದಿದೆ. ಇದರ ಜತೆಗೆ ಎಚ್‌ಟಿ ಗ್ರಾಹಕರಿಗೆ ಸಮಯಾಧಾರಿತ ಶುಲ್ಕ ವ್ಯವಸ್ಥೆ ಜಾರಿಗೆ ತರಲು ಚಿಂತನೆ ನಡೆಸಲಾಗುತ್ತಿದೆ. ದಿನದಲ್ಲಿ 11 ಗಂಟೆ ವಿದ್ಯುತ್ ಬಳಕೆದಾರರ ಶುಲ್ಕದಲ್ಲಿ ಕಡಿತ ಮಾಡಿ ಹೆಚ್ಚಿನ ರಿಯಾಯಿತಿ ಕಲ್ಪಿಸುವ ಬಗ್ಗೆ ಪ್ರಸ್ತಾಪಿಸಲು ನಿರ್ಧರಿಸಲಾಗಿದೆ. ಪ್ರತಿ ಯುನಿಟ್‌ಗೆ ಈ ಮೊದಲು ವಿಧಿಸುತ್ತಿದ್ದ 6.60 ರೂ. ಬಳಕೆದಾರರ ಶುಲ್ಕ ಹೊಸ ಪ್ರಸ್ತಾಪದಿಂದ ಇಳಿಕೆಯಾಗುವ ಸಾಧ್ಯತೆ ಹೆಚ್ಚಿದ್ದು 75 ಪೈಸೆವರೆಗೆ ರಿಯಾಯಿತಿ ಸಿಗಬಹುದು ಎನ್ನಲಾಗಿದೆ.

ಇ-ಬಸ್ ಸೇವೆ

ನಿಲ್ದಾಣದಲ್ಲಿ ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸುವ ಕಾಮಗಾರಿ ಕೈಗೆತ್ತಿಕೊಂಡಿದೆ. ಹೈದರಾಬಾದ್ ಮೂಲದ ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್ ಸಂಸ್ಥೆಯು ಪ್ರೋಟೋ ಟೈಪ್ ಮಾದರಿಯ ಇ-ಬಸ್‌ಗಳನ್ನು ಡಿಸೆಂಬರ್ 15ರೊಳಗೆ ಪೂರೈಸುವ ಸಾಧ್ಯತೆಯಿದ್ದು, ಡಿ.18ರಂದು ಮೈಸೂರು-ಬೆಂಗಳೂರು ನಡುವೆ ಪ್ರಾಯೋಗಿಕವಾಗಿ ಇ-ಬಸ್ ಸಂಚಾರ ಆರಂಭವಾಗಲಿದೆ ಎಂದು ತಿಳಿದು ಬಂದಿದೆ. 2023ರ ಫೆಬ್ರವರಿ ಅಂತ್ಯದೊಳಗೆ 25 ಇ-ಬಸ್‌ಗಳನ್ನು ಖರೀದಿಸಲಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಬೆಂಗಳೂರಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ಬೆಂಗಳೂರಿನಿಂದ ಮೈಸೂರು, ಮಡಿಕೇರಿ, ಚಿಕ್ಕಮಗಳೂರು, ಮಂಗಳೂರು, ಉಡುಪಿ, ಶಿವಮೊಗ್ಗ, ಹಾಸನ, ಚಿತ್ರದುರ್ಗ, ತುಮಕೂರು, ಧಾರವಾಡ, ಗುಲ್ಬರ್ಗ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಗೆ ಇ-ಬಸ್‌ಗಳ ಸಂಚಾರಕ್ಕೆ ಚಿಂತನೆ ನಡೆಸಿದ್ದು, ಅದಕ್ಕಾಗಿ ಸದರಿ ಜಿಲ್ಲಾ ಕೇಂದ್ರಗಳ ಎಲ್ಲಾ ಬಸ್ ನಿಲ್ದಾಣಗಳಲ್ಲೂ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವಂತೆ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಕರಿಗೆ ಸೂಚನೆ ನೀಡಿದೆ.

ಇ-ಬಸ್ ಸೇವೆಗೆ ಬೆಂಗಳೂರು-ಮೈಸೂರು ನಡುವಿನ ಮಾರ್ಗಕ್ಕೆ ಹೆಚ್ಚು ಬೇಡಿಕೆ ಇದೆ ಎಂಬುದನ್ನು ಸಮೀಕ್ಷೆಯಿಂದ ಅರಿತಿರುವ ಸಾರಿಗೆ ಸಂಸ್ಥೆಯು, ಈ ಮಾರ್ಗಕ್ಕೆ ಹೆಚ್ಚು ಬಸ್‌ಗಳನ್ನು ಒದಗಿಸಲು ಆಸಕ್ತಿ ತೋರಿದೆ. 10 ಪಥದ ರಸ್ತೆ ನಿರ್ಮಾಣವಾಗುತ್ತಿರುವುದರಿಂದ ಯಾವುದೇ ಅಡೆ-ತಡೆ ಇಲ್ಲದೇ ಸರಾಗವಾಗಿ ಸಾಗಬಹುದು ಎಂಬುದನ್ನು ಅರಿತ ಸಂಸ್ಥೆಯು, ಈ ಎರಡೂ ನಗರಗಳ ನಡುವೆ ಇ-ಬಸ್ ಸೇವೆ ಒದಗಿಸಲು ಸರ್ವ ರೀತಿಯಲ್ಲಿ ತಯಾರಿ ನಡೆಸುತ್ತಿದೆ. ಮೈಸೂರು-ಬೆಂಗಳೂರು ನಡುವೆ ಎಲೆಕ್ಟ್ರಿಕ್ ಬಸ್‌ಗಳನ್ನು ಓಡಿಸುವ ಬಗ್ಗೆ ಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಚರ್ಚೆ ನಡೆಯುತ್ತಿದೆ. ಆದರೆ ಇನ್ನೂ ಇ-ಬಸ್‌ಗಳು ಬಂದಿಲ್ಲ. ಆದರೂ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಮೈಸೂರಿನ ಸಬರ್ಬನ್ ಬಸ್‌ಸ್ಟ್ಯಾಂಡ್‌ನಲ್ಲಿ ಚಾರ್ಜಿಂಗ್ ಸ್ಟೇಷನ್ ನಿರ್ಮಿಸುತ್ತಿದ್ದೇವೆ. ಅಧಿಕೃತ ಆದೇಶ ಬಂದ ನಂತರ ಇ-ಬಸ್‌ಗಳನ್ನು ಆಪರೇಟ್ ಮಾಡುತ್ತೇವೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ಸಾರಿಗೆ ನಿಯಂತ್ರಣಾಧಿಕಾರಿ ಅಶೋಕ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಬಹುರೂಪಿ ರಾಷ್ಟ್ರೀಯ ರಂಗೋತ್ಸವ

7 ರಾಜ್ಯಗಳ 7 ವಿವಿಧ ಭಾಷೆಗಳ ನಾಟಕಗಳು, ಕರ್ನಾಟಕದ 12 ಕನ್ನಡ ನಾಟಕಗಳು, 1 ತುಳು ನಾಟಕ ಸೇರಿದಂತೆ ಒಟ್ಟು 20 ನಾಟಕಗಳು ಪ್ರದರ್ಶನಗೊಳ್ಳಲಿವೆ. ಇದರೊಂದಿಗೆ ಜಾನಪದ ಕಲಾ ಪ್ರದರ್ಶನ, ರಾಷ್ಟ್ರೀಯ ಚಲನಚಿತ್ರೋತ್ಸವ, ರಾಷ್ಟ್ರೀಯ ವಿಚಾರ ಸಂಕಿರಣ, ಪುಸ್ತಕ ಪ್ರದರ್ಶನ, ಕರಕುಶಲ ಪ್ರದರ್ಶನ, ದೇಸಿ ಆಹಾರ ಮೇಳ, ಪ್ರಾತ್ಯಕ್ಷಿಕೆಗಳು, ಚಿತ್ರಕಲಾ ಶಿಬಿರ ಸೇರಿದಂತೆ ಹಲವಾರು ಕಾರ್ಯಕ್ರಮ ಒಳಗೊಂಡಿದೆ ಎಂದರು.

ಡಿ.3ರಂದು ಚಿತ್ರಕಲಾ ಶಿಬಿರ ಉದ್ಘಾಟನೆಗೊಳ್ಳಲಿದೆ. ಡಿ.5ರಂದು ಗಾರುಡಿ ಗೊಂಬೆಗಳೊಂದಿಗೆ ಮನೆಮನೆಗೆ ರಂಗಾಯಣ-ಮನೆ ಮನೆಗೆ ಬಹುರೂಪಿ ಪ್ರಚಾರಂದೋಲನ ಉದ್ಘಾಟನೆಗೊಳ್ಳಲಿದೆ. ಡಿ.8ರಂದು ಜಾನಪದ ಉತ್ಸವ ಉದ್ಘಾಟನೆಯಾಗಲಿದೆ. ಡಿ.9ರಂದು ರಾಷ್ಟ್ರೀಯ ಚಲನಚಿತ್ರೋತ್ಸವ ಪುಸ್ತಕ ಮತ್ತು ಕರಕುಶಲ ವಸ್ತು ಪ್ರದರ್ಶನ ಉದ್ಘಾಟನೆ ಆಗಲಿದೆ ಎಂದರು. ಡಿ.10 ರಂದು ಸಂಜೆ ರಾಷ್ಟ್ರೀಯ ರಂಗೋತ್ಸವದ ನಾಟಕಗಳ ಹಬ್ಬದ ಉದ್ಘಾಟನೆ ನೆರವೇರಲಿದೆ. ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ, ರಾಷ್ಟ್ರೀಯ ವಿಚಾರ ಸಂಕೀರ್ಣದ ಸಮಾರೋಪ ಮಾತುಕತೆ ಡಿ.11ರಂದು ನಡೆಯಲಿದೆ ಎಂದರು.

ಡಿ.10ರಂದು ಸಿಎಂ ಉದ್ಘಾಟಿಸುವ ಸಂದರ್ಭದಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ಅಧ್ಯಕ್ಷ ಪರೇಶ್ ರಾವಲ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್‌ಕುಮಾರ್, ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ ಸೇರಿದಂತೆ ಹಲವರು ಮುಖ್ಯ ಅತಿಥಿಯಾಗಿ ಭಾಗವಹಿಸುವರು ಎಂದರು. ಬಹುರೂಪಿ ಜನಪದೋತ್ಸವದಲ್ಲಿ ಕಂಸಾಳೆ, ಯಕ್ಷಗಾನ, ಸಂಪ್ರದಾಯದ ಹಾಡು, ಪೂಜಾ ಕುಣಿತ, ಡೊಳ್ಳು ಕುಣಿತ, ನಾದಸ್ವರ, ಗೊರವರ ನೃತ್ಯ, ನೀಲಗಾರರ ಮೇಳ, ಸೋಮನ ಕುಣಿತ, ಕರಗ ಕೋಲಾಟ, ಕಂಗೀಲು, ಮಂಟೇಸ್ವಾಮಿ ಹಾಡು, ಚಿಟ್ ಮೇಳ, ಜಾನಪದ ಗೀತೆ, ವೀರಗಾಸೆ ಇರಲಿದೆ ಎಂದರು.

ಸಮಾಜಕ್ಕೆ ಕನ್ನಡಿ ಹಿಡಿಯುವ ವಿಷಯ ವಸ್ತು

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಕೇವಲ ನಾಟಕಗಳ ಪ್ರದರ್ಶನ ಅಷ್ಟೇ ಅಲ್ಲ, ಸಮಾಜಕ್ಕೆ ಕನ್ನಡಿ ಹಿಡಿಯುವ ವಸ್ತು ವಿಷಯದ ಆಧಾರದಲ್ಲಿ ನಡೆಯುತ್ತದೆ. ಹಾಗಾಗಿ ಈ ಬಾರಿ ಅತ್ಯಂತ ಗಂಭೀರವಾಗಿ ಚರ್ಚಿಸಿ ಭಾರತೀಯತೆ ವಸ್ತು ವಿಷಯವನ್ನು ಆಯ್ಕೆ ಮಾಡಲಾಗಿದೆ. ಭಾರತವೆಂದರೆ ಅದು ಕೇವಲ ನೆಲವೊಂದೇ ಅಲ್ಲ. ನಾವು ಇದನ್ನು ಮಾತೆ ಎಂದು ಪೂಜಿಸುತ್ತೇವೆ. ಇದು ನಮ್ಮ ವ್ಯಕ್ತಿತ್ವದ ಹೆಗ್ಗುರುತು. ಇಲ್ಲಿರುವ ದೊಡ್ಡ ಜನಸಂಖ್ಯೆಯೇ ನಮ್ಮ ಅತಿ ದೊಡ್ಡ ಸಂಪನ್ಮೂಲ. ಅನೇಕ ಭಾಷೆ, ಧರ್ಮ, ಜಾತಿ ಜನಾಂಗಗಳ ಏಕ ಸಮೂಹವೇ ಭಾರತ. ವಿವಿಧತೆಯಲ್ಲಿ ಏಕತೆಯೆ ನಮ್ಮ ಶಕ್ತಿ. ಜನರಲ್ಲಿ ದೇಶಕ್ಕೆ, ಅಖಂಡತೆಗೆ ನೆರವಾಗುವಂತಹ ಅಂತಹ ಪ್ರೇರಣೆ ಮತ್ತು ಸಮಾಜಕ್ಕೆ ಒಳಿತಾಗಬೇಕೆನ್ನುವ ಆಶಯಗಳು ಪರಂಪರೆಯ ಮೂಲಕವೇ ಸಮಾಜದಲ್ಲಿ ಬೆಳೆದು ಬರಬೇಕು, ಮುಂದುವರಿಯಬೇಕು. ಇಂದಿನ ಯುವ ಪೀಳಿಗೆಗೆ ಮತ್ತೆ ನಮ್ಮ ಇತಿಹಾಸ ನೆನಪಿಸಬೇಕಾಗಿದೆ. ಹಾಗಾಗಿ ಭಾರತೀಯತೆ ವಿಷಯದ ಆಯ್ಕೆ ಸೂಕ್ತ ಎನಿಸಿದೆ ಎಂದು ಹೇಳಿದರು.

ಚಿತ್ರಕಲಾ ಶಿಬಿರ: ಡಿ.3ರಂದು ಉದ್ಘಾಟನೆಗೊಳ್ಳಲಿರುವ ಚಿತ್ರಕಲಾ ಶಿಬಿರದಲ್ಲಿ 20 ಮಂದಿ ಯುವ ಚಿತ್ರ ಕಲಾವಿದರು ಭಾಗವಹಿಸಲಿದ್ದು, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಹಿರಿಯ ಶಿಲ್ಪಿ ಶಿವಲಿಂಗಪ್ಪ, ಕಾವಾ ಡೀನ್ ದೇವರಾಜ್ ಅತಿಥಿಯಾಗಿ ಆಗಮಿಸಲಿದ್ದಾರೆ.

ರಾಷ್ಟ್ರೀಯ ಚಲನಚಿತ್ರೋತ್ಸವ: ಸನಾತನ ಧರ್ಮ ಮತ್ತು ಭಾರತೀಯತೆ ಮತ್ತು ಭವಿಷ್ಯದಲ್ಲಿ ಭಾರತೀಯ ಸಂಸ್ಕೃತಿ ವಿಚಾರಗಳ ಮೇಲೆ ನಡೆಯುವ ರಾಷ್ಟ್ರೀಯ ವಿಚಾರ ಸಂಕೀರ್ಣದಲ್ಲಿ ಪದವಿ ವಿದ್ಯಾರ್ಥಿಗಳಿಗಾಗಿ ವೈವಿಧ್ಯತೆಯಲ್ಲಿ ಭಾರತೀಯತೆ ಎಂಬ ಭಾಷಣ ಏರ್ಪಡಿಸಿದೆ. ಚಿಂತಕಿ ಡಾ.ಎಸ್.ಆರ್.ಲೀಲಾ, ನಾಟಕಕಾರ ಎಸ್‌ಎಂ ಸೇತುರಾಮ್, ವಾಗ್ಮಿ ಡಾ.ಬಿ.ವಿ.ಆರತಿ ಮತ್ತು ರಮಾನಂದ, ಸಾಹಿತಿಗಳಾದ ಬಾಬು ಕೃಷ್ಣಮೂರ್ತಿ, ಸಂಸ್ಕೃತಿ ಪರಂಪರೆ ಚಿಂತಕ ರಾಮಣ್ಣ ಭಾಗವಹಿಸುವರು ಎಂದು ತಿಳಿಸಿದರು. ಇದೇ ವೇಳೆ ಅನಿವಾಸಿ ಭಾರತೀಯರು ಪ್ರಥಮವಾಗಿ ಮೂರು ಟಿಕೆಟ್ ಖರೀದಿಸಿ ಟಿಕೆಟ್ ಮಾರಾಟಕ್ಕೆ ಚಾಲನೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ ಬಹುರೂಪಿ ಸಂಚಾಲಕ ಜಗದೀಶ್ ಉಪಸ್ಥಿತರಿದ್ದರು.


ಬಹುರೂಪಿಯಲ್ಲಿ ಪ್ರದರ್ಶನಗೊಳ್ಳಲಿರುವ ಚಲನಚಿತ್ರಗಳು

ಡಿ.9ರ ಬೆಳಗ್ಗೆ 11 ಗಂಟೆಗೆ ಉದ್ಘಾಟನೆ. ಮಧ್ಯಾಹ್ನ 12ಕ್ಕೆ ಜೈ ಹೊ ಫಿಲಂ ಆನ್ ಎ.ಆರ್. ರೆಹಮಾನ್ (2015), ನಿರ್ದೇಶನ ಉಮೇಶ್ ಅಗರ್ವಾಲ್, ಮಧ್ಯಾಹ್ನ 2ಕ್ಕೆ ಕರ್ಮ (2020) ನಿರ್ದೇಶನ ಟೆಸರಿಂಗ್ ರಯತಾರ್ ಶರ್ಪಾ. ಡಿ.10ರಂದು ಬೆಳಗ್ಗೆ 11ಕ್ಕೆ ಲೀಪಿಂಗ್ ಟೈಗರ್ಸ್ ಅಂಡ್ ನೆಕೆಡ್ ನಾಗಾಸ್, ಇಂಗ್ಲಿಷ್, (2004), ನಿರ್ದೇಶನ-ಜಾನ್ ಪಾಲ್ ಡೇವಿಸ್, ಮಧ್ಯಾಹ್ನ 12ಕ್ಕೆ ಇಂಡೋ-ಪಾಕ್ ಕಾನ್ ಫ್ಲಿಕ್ಟ್-(1973), ನಿರ್ದೇಶನ- ಫಿಲಂ ಡಿವಿಜನ್, ಮುಕ್ತಿ (2017) ಇಂಗ್ಲಿಷ್, ನಿರ್ದೇಶನ-ಮನು ಚೋಬೆ, ಮಧ್ಯಾಹ್ನ 2ಕ್ಕೆ 1971 (2020), ಅಮೃತ್ ಸಾಗರ್. ಡಿ.11ರಂದು ಬೆಳಗ್ಗೆ 11ಕ್ಕೆ ರಾಂಚಿ ಪಖಾರ (2004) ಹಿಂದಿ, ನಿರ್ದೇಶನ-ಆದಿತ್ಯ ರಾನಡೆ, ಮಧ್ಯಾಹ್ನ 12ಕ್ಕೆ ದಿ ಪ್ರೈಸ್ ಆಫ್ ಫ್ರೀ (2017), ಇಂಗ್ಲಿಷ್, ನಿರ್ದೇಶನ-ಡೆರಿಕ್ ದೊನೆನ್, ಮಧ್ಯಾಹ್ನ 2ಕ್ಕೆ ಟೇಕ್ ಆಫ್ (2018), ಮಲ ಯಾಳಂ, ನಿರ್ದೇಶನ-ಮಹೇಶ್ ನಾರಾಯಣನ್. ಡಿ.12ರಂದು ಬೆಳಗ್ಗೆ 11ಕ್ಕೆ ಕಾವಿ (2009), ಹಿಂದಿ, ನಿರ್ದೇಶನ-ಗ್ರೇಗ್ ಹೆಲ್ವೆ, ಮಧ್ಯಾಹ್ನ 12ಕ್ಕೆ ಮಿಟ್ಟಿ ಮಾನಸ್ (1986), ಹಿಂದಿ, ನಿರ್ದೇಶನ-ಮಣಿ ಕೌಲ್, ಮಧ್ಯಾಹ್ನ 2ಕ್ಕೆ ಉಲ್ಗುಲವ್ ಏಕ್ ಕ್ರಾಂತಿ (2004), ಹಿಂದಿ, ನಿರ್ದೇಶಕ-ಅಶೋಕ್ ಶರಣ್. ಡಿ.13ರಂದು ಬೆಳಗ್ಗೆ 11ಕ್ಕೆ ಗೌರ್ ಇನ್ ಮೈ ಗಾರ್ಡನ್ (2014), ಇಂಗ್ಲಿಷ್, ನಿರ್ದೇಶನ-ರೀಟಾ ಬ್ಯಾನರ್ಜಿ, ಝುರಿಯ (2019) ಹಿಂದಿ, ನಿರ್ದೇಶನ-ಬಿಜು ತೊಪ್ಪು, ಮಧ್ಯಾಹ್ನ 12ಕ್ಕೆ ದಿ ಸ್ಟೋರಿ ಆಫ್ ಜಲ್ಲಿ ಕಟ್ಟು (2018), ಇಂಗ್ಲಿಷ್, ನಿರ್ದೇಶನ-ಕರೀಂ ಜಲಾಲ್ ಮತ್ತು ಹರಿ ಶಂಕರ್, ಸೀಡ್ಸ್ ಆಫ್ ಲೈಫ್ (2003), ಇಂಗ್ಲಿಷ್, ನಿರ್ದೇಶನ-ಉಷಾ ಅಲ್ಬುಕರ್ಕಿ, ಮಧ್ಯಾಹ್ನ 2ಕ್ಕೆ ಮೆರಕು ತೊಡಚಿ ಮಲ್ಲೈ (2018), ತಮಿಳು, ನಿರ್ದೇಶನ- ಲೆನಿನ್ ಭಾರತಿ. ಡಿ.14ರಂದು ಬೆಳಗ್ಗೆ 11ಕ್ಕೆ ಫಿಟ್ಲರ್ ಆನ್ ದಿ ತ್ಯಾಚ್ (2003), ಇಂಗ್ಲಿಷ್, ನಿರ್ದೇಶನ-ತ್ರಿಶಾ ದಾಸ್ ಮತ್ತು ಮಧುರ ದಾಸ್, ಮೈಸೂರು ಮಂಜುನಾಥ್ (2017), ಕನ್ನಡ, ನಿರ್ದೇಶನ-ಎಂ.ಎಸ್ .ಪ್ರಕಾಶ್ ಬಾಬು, ಮಧ್ಯಾಹ್ನ 12ಕ್ಕೆ ರಾಷ್ಟ್ರಕವಿ ಕುವೆಂಪು: ಬದುಕು ಬರಹ, ಕನ್ನಡ, ನಿರ್ದೇಶನ-ಉಮಾ ಶಂಕರಸ್ವಾಮಿ, ಉಸ್ತಾದ್ ಬಿಸ್ಮಿಲ್ಲಾ ಖಾನ್, ಹಿಂದಿ, ನಿರ್ದೇಶನ-ಸಬ್ಯಸಾಚಿ ಮುಖರ್ಜಿ, ಮಧ್ಯಾಹ್ನ 2ಕ್ಕೆ ದೋ ಅಂಖೆ ಬಾರ ಹಾತ್ (1957),ಹಿಂದಿ, ನಿರ್ದೇಶನ-ವಿ.ಶಾಂತರಾಮ್.ಡಿ.15ರಂದು ಬೆಳಗ್ಗೆ 11ಕ್ಕೆ ಕೊರಲ್ ವುಮೆನ್, ಇಂಗ್ಲಿಷ್, ನಿರ್ದೇಶನ-ಪ್ರಿಯಾ ತುವೆಸೆಂ, ದಿ ಪಾರ್ಕ್ ಸೇವಿಯರ್ಸ್ (2019), ಇಂಗ್ಲಿಷ್, ನಿರ್ದೇಶನ- ವಿಜಯ್ ಬೇಡಿ ಮತ್ತು ಅಜಯ್ ಬೇಡಿ, ಮಧ್ಯಾಹ್ನ 12ಕ್ಕೆ ಟಿಂಬಕ್ಟು, ಇಂಗ್ಲಿಷ್ ನಿರ್ದೇಶನ-ರಿಂಟು ಥಾಮಸ್-ಸುಶ್ಮಿತ್ ಘೋಷ್, ಸೌಹೃದ (2022), ಮಲಯಾಳಂ, ನಿರ್ದೇಶನ-ಉಮಾ ಸನ್ಯಾಸಿ, ಮಧ್ಯಾಹ್ನ 2ಕ್ಕೆ ಗಂಧದ ಗುಡಿ (1973) ಕನ್ನಡ, ನಿರ್ದೇಶನ- ವಿಜಯ್.

ಮೈಸೂರಿನಲ್ಲಿ 18ನೇ ಜಾಗತಿಕ ಗೀತಾ ಸಮ್ಮೇಳನ

ಉತ್ತಮ ಜೀವನಕ್ಕೆ ಸದಾ ಜ್ಞಾನೇಂದ್ರಿಯಗಳ ಮೇಲೆ ನಿಯಂತ್ರಣವಿರಬೇಕು

ಗಣಪತಿ ಶ್ರೀಗಳ ಕಿವಿಮಾತು



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆದ 18ನೇ ಜಾಗತಿಕ ಗೀತಾ ಸಮ್ಮೇಳನಕ್ಕೆ ಗಣಪತಿ ಸಚ್ಚಿದಾನಂದ ಶ್ರೀಗಳು ಚಾಲನೆ ನೀಡಿದರು. ಚಿತ್ರದಲ್ಲಿ ಸಮ್ಮೇಳನದ ಸಹ ಕಾರ್ಯಾಧ್ಯಕ್ಷ ಡಾ.ಸಿ.ಎನ್.ಗುಪ್ತಾ , ನಿವೃತ್ತ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್, ಬೆಂಗಳೂರಿನ ವಿದ್ವಾನ್ ಡಾ.ಎಸ್.ರಂಗನಾಥ್, ತಿರುಪತಿಯ ಕುಪ್ಪಾ ವಿಶ್ವನಾಥ ಶರ್ಮಾ, ಕೆ.ಜಿ. ರಾಘವನ್ ಉಪಸ್ಥಿತರಿದ್ದರು.

ಮೈಸೂರು, ಡಿ.2 (ಆರ್‌ಕೆಬಿ)- ಉತ್ತಮ ಜೀವನಕ್ಕಾಗಿ ನಮ್ಮ ಅಹಂಕಾರಗಳನ್ನು ದೂರವಿಡಬೇಕು. ಜ್ಞಾನೇಂದ್ರಿಯಗಳ ಮೇಲೆ (ಕಿವಿ, ಕಣ್ಣು, ಮೂಗು, ನಾಲಿಗೆ ಮತ್ತು ಚರ್ಮ) ನಿಯಂತ್ರಣ ಹೊಂದಿರಬೇಕು ಎಂದು ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹೇಳಿದರು.

ನಂಜನಗೂಡು ರಸ್ತೆಯ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪ ಸಭಾಂಗಣದಲ್ಲಿ ಬೆಂಗಳೂರಿನ ಇಂಟರ್‌ನ್ಯಾಷನಲ್ ಗೀತಾ ಫೌಂಡೇಶನ್ ಟ್ರಸ್ಟ್, ಅವಧೂತ ದತ್ತ ಪೀಠದ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ 18ನೇ ಜಾಗತಿಕ ಗೀತಾ ಸಮ್ಮೇಳನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಾನವರು ತಮ್ಮ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು, ಸರ್ವಶಕ್ತ ಭಗವಂತನಿಂದ ಮಾರ್ಗದರ್ಶಿಸಲ್ಪಡುತ್ತಾರೆ ಎಂದು ಹೇಳಿದ ಸಚ್ಚಿದಾನಂದ ಸ್ವಾಮೀಜಿ, ಮಹಾನ್ ಮಹಾಕಾವ್ಯ ಭಗವದ್ಗೀತೆಯಲ್ಲಿನ ಸಂದೇಶಗಳ ಬಗ್ಗೆ ಜನರಿಗೆ ಶಿಕ್ಷಣ ನೀಡುವ ಅಗತ್ಯವನ್ನು ಒತ್ತಿ ಹೇಳಿದರು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸುವ 'ಗೀತೋಪದೇಶ'ದ ಪ್ರಮುಖ ವಿಚಾರಗಳನ್ನು ವಿವರಿಸಿದ ಅವರು, ಮಹಾಕಾವ್ಯವನ್ನು ಓದಿ ಅರ್ಥ ಮಾಡಿಕೊಳ್ಳುವುದು ಸ್ವಲ್ಪ ಕಷ್ಟವಾಗಬಹುದು. ಆದರೆ ಭಗವದ್ಗೀತೆಯ ಪರಿಕಲ್ಪನೆಗಳನ್ನು ಸರಳವಾದ ಭಾಷೆಯಲ್ಲಿ ಜನತೆಗೆ ತಿಳಿಯಪಡಿಸುವ ಉದ್ದೇಶದಿಂದ ಜಾಗತಿಕ ಗೀತಾ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದರು.

ಪ್ರವಚನ ನೀಡಿದ ಪಾವಗಡ ರಾಮಕೃಷ್ಣ ಆಶ್ರಮ ಪೀಠಾಧಿಪತಿ ಶ್ರೀ ಜಪಾನಂದ ಸ್ವಾಮೀಜಿ, ಜನರು ಭಗವದ್ಗೀತೆಯ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ. ಮಹಾಕಾವ್ಯದಲ್ಲಿ ಪ್ರತಿಪಾದಿಸಲಾದ ಆಲೋಚನೆಗಳನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳುವ ಅಗತ್ಯವನ್ನು ತಿಳಿಸಿದರು. ಗೀತಾ ಜಯಂತಿ ಸಂದರ್ಭದಲ್ಲಿ ಅಟ್ಟದ ಮೇಲಿನಿಂದ ಭಗವದ್ಗೀತೆ ಪುಸ್ತಕವನ್ನು ಕೆಳಗಿಳಿಸಿ, ಅಂದು ಅದನ್ನು ಪೂಜಿಸಿ ಮತ್ತೆ ಅಟ್ಟದ ಮೇಲಿಡಲಾಗುತ್ತಿರುವ ಬಗ್ಗೆ ಗಮನ ಸೆಳೆದರು.

ಭಗವದ್ಗೀತೆಯನ್ನು ಎಷ್ಟು ಜನರು ಓದಿದ್ದಾರೆ ಎಂದು ಗುರುಗಳೊಬ್ಬರು ಪ್ರೇಕ್ಷಕರನ್ನು ಪ್ರಶ್ನಿಸಿದ ಉದಾಹರಣೆಯನ್ನು ಉಲ್ಲೇಖಿಸಿದ ಅವರು, ಮಹಾಕಾವ್ಯದ 16, 17 ಮತ್ತು 18 ನೇ ಅಧ್ಯಾಯಗಳನ್ನು ಓದುವ ಬಗ್ಗೆ ಪ್ರಶ್ನಿಸಿದಾಗ ಜನರೆಲ್ಲರೂ ಕೈ ಎತ್ತಿದರೆ, ಗುರುಗಳು ವಾಸ್ತವವನ್ನು ಪರೀಕ್ಷಿಸುವ ಸಲುವಾಗಿ, 19 ನೇ ಅಧ್ಯಾಯವನ್ನು ಯಾರು ಓದಿದ್ದೀರಿ ಎಂದು ಪ್ರೇಕ್ಷಕರನ್ನು ಪ್ರಶ್ನಿಸಿದರಂತೆ. ನೆರೆದಿದ್ದ ಪ್ರೇಕರರು ಆಗಲೂ ತಮ್ಮ ಕೈಗಳನ್ನು ಮೇಲಕ್ಕೆತ್ತಿದರಂತೆ. ಆದರೆ ನಿಜಸ್ಥಿತಿ ಏನೆಂದರೆ ಭಗವದ್ಗೀತೆಯಲ್ಲಿ 19ನೇ ಅಧ್ಯಾಯವೇ ಇಲ್ಲ., ಮಹಾಕಾವ್ಯವನ್ನು ಓದಿದ ಮೇಲೆ ಜನರ ವಾದ ಎಷ್ಟು ಪೊಳ್ಳಾಗಿದೆ ಎಂಬುದನ್ನು ತೋರಿಸುತ್ತದೆ ಎಂದು ಉತ್ತರಿಸಿದಾಗ ಇಡೀ ಸಭಾಂಗಣದಲ್ಲಿ ಪ್ರೇಕ್ಷಕರು ನಗೆಗಡಲಲ್ಲಿ ತೇಲಿದರು.

ಜಗತ್ತು ಅನೇಕ ರಂಗಗಳಲ್ಲಿ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ಮಹಾಕಾವ್ಯವನ್ನು ಅರ್ಥಮಾಡಿಕೊಳ್ಳುವ ಅಗತ್ಯವನ್ನು ಪುನರುಚ್ಚರಿಸಿದ ಜಪಾನಂದ ಸ್ವಾಮೀಜಿ, ಭವಿಷ್ಯದಲ್ಲಿ ಉತ್ತಮ ಮತ್ತು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವ ಪ್ರಯತ್ನವಾಗಿ ವಿದ್ಯಾರ್ಥಿಗಳಿಗೆ ಭಗವದ್ಗೀತೆಯನ್ನು ಕಲಿಸುವ ಪ್ರಯತ್ನವನ್ನು ಶಿಕ್ಷಕರು ಮಾಡಬೇಕು ಎಂದು ಹೇಳಿದರು.

ವಕೀಲ ಕೆ.ಜಿ.ರಾಘವನ್ ಅವರು ಭಗವದ್ಗೀತೆಯ 18ನೇ ಅಧ್ಯಾಯದ ಪ್ರಮುಖ ವಿಚಾರಗಳನ್ನು ಓದಿ ತಿಳಿಸಿದರು. ಇದಕ್ಕೂ ಮುನ್ನ ಸಮ್ಮೇಳನದ ಸಹ ಕಾರ್ಯಾಧ್ಯಕ್ಷ ಡಾ.ಸಿ.ಎನ್.ಗುಪ್ತಾ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಡಾ.ಸಿ.ಎನ್.ಗುಪ್ತಾ ಅವರು ಹಿಂದಿನ ಎಲ್ಲಾ 17 ಜಾಗತಿಕ ಗೀತಾ ಸಮ್ಮೇಳನದ ವಿವರವಾದ ಸ್ಲೈಡ್ ಶೋ ಪ್ರದರ್ಶಿಸಿದರು. ಮುಖ್ಯ ಅತಿಥಿಗಳನ್ನು ಗೌರವಿಸಲಾಯಿತು.

ನಿವೃತ್ತ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್, ಬೆಂಗಳೂರಿನ ವಿದ್ವಾನ್ ಡಾ.ಎಸ್.ರಂಗನಾಥ್, ತಿರುಪತಿಯ ಕುಪ್ಪಾ ವಿಶ್ವನಾಥ ಶರ್ಮಾ, ಕೆ.ಜಿ. ರಾಘವನ್ ಇನ್ನಿತರರು ಉಪಸ್ಥಿತರಿದ್ದರು.

ಗ್ರಾಹಕರಿಗೆ ಪ್ರತಿದಿನವೂ ತಾಜಾ ಅನುಭವ ಒದಗಿಸಲು

ನೆಕ್ಸಸ್ ಮಾಲ್‌ಗಳ ಬ್ರ್ಯಾಂಡ್ ಅಂಬಾಸಡರ್ ಆಗಿ ಬಾಲಿವುಡ್ ನಟ ಅಮಿತಾಬ್ ಬಚ್ಚನ್ ನೇಮಕ

ಮೈಸೂರು, ಡಿ. 2- ಭಾರತದ ಬ್ಲಾಕ್‌ಸ್ಟೋನ್ ರಿಯಲ್ ಎಸ್ಟೇಟ್ ಫಂಡ್ಸ್‌ನ ಮಾಲೀಕತ್ವ ಹಾಗೂ ನಿರ್ವಹಣೆಯ ಭಾರತದ ರಿಟೈಲ್ ಪ್ಲಾಟ್‌ಫಾರಂ ನೆಕ್ಸಸ್ ಮಾಲ್‌ಗಳ ರಾಯಭಾರಿ (Happiness Ambassador) ಯಾಗಿ ಅಮಿತಾಬ್ ಬಚ್ಚನ್ ಅವರನ್ನು ನೇಮಕ ಮಾಡಿರುವುದಾಗಿ ಪ್ರಕಟಿಸಿದೆ.

ಇದು ಒಂದು ವಿನೂತನ ಹಾಗೂ ನೂತನ ರೀತಿಯ ಪಾಲುದಾರಿಕೆ ಹೊಂದಿರುವ ಭಾರತದ ಅತೀ ದೊಡ್ಡ ಬಾಲಿವುಡ್ ಸೂಪರ್‌ಸ್ಟಾರ್ ಅಮಿತಾಬ್ ಬಚ್ಚನ್‌ನೊಂದಿಗೆ ಗ್ರಾಹಕರಿಗೆ ಪ್ರತಿದಿನ 'ಹರ್ ದಿನ್ ಕುಚ್ ನಯಾ' ಅನುಭವ ಕಲ್ಪಿಸುತ್ತದೆ.

ಅಮಿತಾಬ್ ಬಚ್ಚನ್ ಭಾರತದ ಐಕಾನಿಕ್ ಸೆಲೆಬ್ರಿಟಿಗಳಲ್ಲಿ ಒಬ್ಬರಾಗಿದ್ದು, ಸಾರ್ವಕಾಲಿಕವಾಗಿ ಎಲ್ಲಾ ವಯಸ್ಸಿನವರಿಗೆ ನೆಚ್ಚಿನ ನಟರಾಗಿದ್ದಾರೆ. ಅವರ ಪ್ರಶಸ್ತಿ ವಿಜೇತ ನಟನಾ ವೃತ್ತಿ ಮತ್ತು ಚಾರಿಟಬಲ್‌ಗಳ ಪ್ರಯತ್ನಗಳಿಂದ ಮನೆ ಮನೆಯಲ್ಲೂ ಪ್ರಸಿದ್ಧರಾಗಿದ್ದಾರೆ.

ನಮ್ಮ ನೆಕ್ಸಸ್ ಮಾಲ್ ಬಳಗಕ್ಕೆ ಖ್ಯಾತ ಬಾಲಿವುಡ್ ನಟ ಹಾಗೂ ರಾಯಭಾರಿ ಅಮಿತಾಬ್ ಬಚ್ಚನ್ ಅವರನ್ನು ಸ್ವಾಗತಿಸಲು ನಾವು ಸಕಲ ಸವಲತ್ತುಗಳನ್ನು ಹೊಂದಿದ್ದೇವೆ. ಅವರು ವಿವಿಧ ವಯೋಮಾನದ ಗುಂಪುಗಳೊಂದಿಗೆ ಸಂಪರ್ಕಿಸಲು ಗಮನಾರ್ಹ ಸಾಮರ್ಥ್ಯ ಹೊಂದಿದ್ದಾರೆ ಎಂದು ನೆಕ್ಸಸ್ ಮಾಲ್ಸ್‌ನ ಸಿಇಒ ದಿಲೀಪ್ ಸೆಹಗಲ್ ತಿಳಿಸಿದ್ದಾರೆ.

ನೆಕ್ಸಸ್ ಮಾಲ್‌ಗಳ ರಾಯಭಾರಿಯಾಗಿ ನೇಮಕ ಮಾಡಿರುವುದಕ್ಕೆ ಸಂತೋಷವಾಗುತ್ತಿದೆ. ಹೊಸದನ್ನು ತರುವುದು ಮತ್ತು ಅನುಭವದೊಂದಿಗೆ ಪ್ರತಿದಿನ ಗ್ರಾಹಕರು ನೆಕ್ಸಸ್ ಮಾಲ್‌ಗಳ ಭೇಟಿ ನೀಡುವಂತೆ ಪ್ರೇರೇಪಿಸುವಂತೆ ಎಲ್ಲರೂ ಒಟ್ಟಿಗೆ ಸೇರಿ ಪ್ರಯತ್ನಿಸೋಣ ಎಂದು ಅಮಿತಾಬ್ ಬಚ್ಚನ್ ಹೇಳಿದ್ದಾರೆ.


2016 ರಲ್ಲಿ ಪ್ರಾರಂಭವಾದಾಗಿನಿಂದ, ನೆಕ್ಸಸ್ ಮಾಲ್‌ಗಳಿಗೆ ದೇಶದ 13 ನಗರಗಳಲ್ಲಿ 17 ಪ್ರಾಪರ್ಟಿಗಳೊಂದಿಗೆ ಭಾರತದ ಅತೀ ದೊಡ್ಡ ರಿಟೈಲ್ ವೇದಿಕೆ ಹೊಂದಿದೆ. ಜೂನ್‌ನಲ್ಲಿ 2022, ನೆಕ್ಸಸ್ ಮಾಲ್‌ಗಳು ಹೊಸ ಬ್ರ್ಯಾಂಡ್‌ನೊಂದಿಗೆ ಅನಾವರಣಗೊಂಡವು. ಇದು ಉತ್ಸಾಹ, ತಾಜಾತನ, ಜೀವನ, ಮ್ಯಾಜಿಕ್ ಮತ್ತು ಮುಖ್ಯವಾಗಿ ಸಂತೋಷವನ್ನು ತರುತ್ತದೆ ಎಂದರು.

ನೆಕ್ಸಸ್ ಮಾಲ್‌ಗಳು, ದೇಶಾದ್ಯಂತ 13 ನಗರಗಳಲ್ಲಿ 17 ಪ್ರಮುಖ ಮಾಲ್‌ಗಳೊಂದಿಗೆ ಮೈಸೂರು, ಬೆಂಗಳೂರು, ಮಂಗಳೂರು, ಹೈದರಾಬಾದ್, ಮುಂಬೈ, ಪುಣೆ, ಅಮೃತಸರ, ಚಂಡೀಗಢ, ಅಹಮದಾಬಾದ್, ಭುವನೇಶ್ವರ, ಇಂದೋರ್ ಮತ್ತು ಉದಯಪುರ್ ಸೇರಿದಂತೆ ಪ್ರಮುಖ ನಗರಗಳಲ್ಲಿ ಕಾರ್ಯಾಚರಿಸುತ್ತಿವೆ.

ಕ್ರೆಡಿಲ್ ಅಧಿಕಾರಿ ನಿಗೂಢ ಸಾವು ಪ್ರಕರಣ

ಪತ್ನಿ ಆಶಾ ಮಾನಸಿಕ ಸದೃಢರು: ಮಾನಸಿಕ ತಜ್ಞರ ಅಭಿಪ್ರಾಯ

ಮೈಸೂರು, ಡಿ.2(ಆರ್‌ಕೆ)- ನಿಗೂಢವಾಗಿ ಸಾವನ್ನಪ್ಪಿದ ಕ್ರೆಡಿಲ್ ಅಧಿಕಾರಿ ಡಿ.ಕೆ. ದಿನೇಶ್ ಕುಮಾರ್ ಪತ್ನಿ ಆಶಾ ಅವರು ಮಾನಸಿಕವಾಗಿ ಸದೃಢವಾಗಿದ್ದಾರೆ ಎಂದು ಕೆ.ಆರ್. ಆಸ್ಪತ್ರೆ ಮಾನಸಿಕ ತಜ್ಞ ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.



ಪ್ರಕರಣದ ತನಿಖಾಧಿಕಾರಿಯಾದ ಸರಸ್ವತಿಪುರಂ ಠಾಣೆ ಇನ್‌ಸ್ಪೆಕ್ಟರ್ ಸಿ.ಎಂ. ರವೀಂದ್ರ ಅವರ ಕೋರಿಕೆ ಮೇರೆಗೆ ಮೈಸೂರಿನ ಸುಯೋಗ ಆಸ್ಪತ್ರೆಯಲ್ಲಿ ದಾಖಲಾಗಿರುವ ಆಶಾ ಅವರೊಂದಿಗೆ ಇಂದು ಆಪ್ತ ಸಮಾಲೋಚನೆ ನಡೆಸಿದ ವೈದ್ಯರು, ಅವರ ಮಾನಸಿಕ ಆರೋಗ್ಯ ಸ್ಥಿರವಾಗಿದೆ. ಅವರನ್ನು ವಿಚಾರಣೆಗೊಳಪಡಿಸಿ ಪ್ರಕರಣ ಸಂಬಂಧ ಮಾಹಿತಿ ಮತ್ತು ಹೇಳಿಕೆ ಪಡೆಯಬಹುದೆಂದು ಅಭಿಪ್ರಾಯಿಸಿ ವರದಿ ನೀಡಿದ್ದಾರೆ.

ನಿನ್ನೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯರು ಆಶಾ ಪುತ್ರ ಧನುಷ್‌ನನ್ನೂ ಆಪ್ತ ಸಮಾಲೋಚನೆಗೊಳಪಡಿಸಿದ್ದರಾದರೂ ಆ ಪ್ರಕ್ರಿಯೆಯಲ್ಲೂ ಆತ ದಿನೇಶ್ ಕುಮಾರ್ ಅವರ ಸಾವಿನ ಸಂಬಂಧ ಯಾವುದೇ ಪೂರಕ ಮಾಹಿತಿಯನ್ನು ನೀಡಿಲ್ಲದ ಕಾರಣ, ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಗೊಂದಲ ಉಂಟಾಗಿದ್ದು, ಯಾವುದೇ ನಿಲುವಿಗೆ ಬರಲು ಸಾಧ್ಯವಾಗುತ್ತಿಲ್ಲ.

ಮತ್ತೊಂದೆಡೆ ದಿನೇಶ್ ಕುಮಾರ್ ದೇಹದ ಹೊರ ಭಾಗದಲ್ಲಿ ಯಾವುದೇ ಗಾಯದ ಗುರುತಿಲ್ಲ ಎಂದಿರುವ ವೈದ್ಯರು ಮರಣೋತ್ತರ ಪರೀಕ್ಷೆ ವರದಿ ಬರುವವರೆಗೆ ಸಾವಿನ ಕಾರಣ ತಿಳಿಸಲು ಸಾಧ್ಯವಿಲ್ಲ ಎಂದಿದ್ದಾರೆ. ಅದೇ ರೀತಿ ಎಫ್‌ಎಸ್‌ಎಲ್ ವರದಿ ಬರಲು ಇನ್ನೂ ಮೂರಾಲ್ಕು ದಿನಗಳು ಬೇಕು ಎಂದು ಪ್ರಯೋಗಾಲಯದ ತಜ್ಞರು ಹೇಳಿದ್ದಾರೆ.

ಯಾವುದೇ ಸ್ಪಷ್ಟ ಮಾಹಿತಿ ದೊರೆಯದೆ, ದಿನೇಶ್ ಕುಮಾರ್‌ದ್ದು, ಸಹಜ ಸಾವೋ, ಅಸಹಜವೋ. ಆತ್ಮಹತ್ಯೆಯೋ, ಕೊಲೆಯೋ ಅಥವಾ ಹೃದಯಾಘಾತವೋ ಎಂಬುದು ಸ್ಪಷ್ಟವಾಗುತ್ತಿಲ್ಲ. ಪೂರ್ಣ ಪ್ರಮಾಣದಲ್ಲಿ ಎಫ್‌ಎಸ್‌ಎಲ್ ಮತ್ತು ಮರಣೋತ್ತರ ಪರೀಕ್ಷಾ ವರದಿ ಬಂದ ನಂತರ ತನಿಖೆ ನಡೆಸಲಿದ್ದಾರೆ.

ನಾಡಗೀತೆಯ ಅರ್ಥ ಮನದಟ್ಟು ಮಾಡಬೇಕು



ಮೈಸೂರು, ಡಿ.2 (ಎಂಟಿವೈ)- ನಾಡಗೀತೆ ಹಾಡುವುದರೊಂದಿಗೆ ಅದರ ಪ್ರತಿಯೊಂದು ಸಾಲಿನ ಅರ್ಥ ತಿಳಿಸುವ ಅಗತ್ಯವಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ರಮೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ಶುಕ್ರವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಮಾತ್ರ ಬುದ್ಧಿವಂತ ಎಂದು ಬಿಂಬಿಸಿಕೊಳ್ಳಲು ಮುಂದಾಗುತ್ತಿರುವುದನ್ನು ನಾವು ಕಾಣುತ್ತೇವೆ. ಕನ್ನಡದಲ್ಲಿ ಮಾತನಾಡಿದರೆ ಪೆದ್ದ ಎಂದು ಪರಿಗಣಿಸುವವರೂ ನಮ್ಮಲ್ಲಿದ್ದಾರೆ. ಮಾತೃ ಭಾಷೆಗೆ ಎಲ್ಲರೂ ಆದ್ಯ ಸ್ಥಾನ ನೀಡಬೇಕು. ಇನ್ನು, ಎಲ್ಲ ಸಮಾರಂಭಗಳಲ್ಲಿ ನಾಡಗೀತೆ ಹಾಡುತ್ತಾರೆ. ಆದರೆ ಅದರ ಸಾಲಿನ, ಪದಗಳ ಅರ್ಥ ಸಾಕಷ್ಟು ಜನರಿಗೆ ತಿಳಿದಿರುವುದಿಲ್ಲ. ಹೀಗಾಗಿ ಮಕ್ಕಳಿಗೆ ಈ ಕುರಿತು ಜಾಗೃತಿ ಮೂಡಿಸಬೇಕು. ನಾನು ಹೊರ ರಾಜ್ಯದವನಾದರೂ ಕನ್ನಡ ಕಲಿತು ತಮ್ಮ ಕಚೇರಿಯಲ್ಲಿ ಕನ್ನಡದಲ್ಲಿಯೇ ವ್ಯವಹರಿಸುವುದಾಗಿ ತಿಳಿಸಿದರು.

ಹಿರಿಯ ಸಾಹಿತಿ ಪ್ರೊ. ಕಾಳೇಗೌಡ ನಾಗವಾರ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆ ಆರಂಭವಾದ ನಂತರ ಅಕ್ಷರ ಜ್ಞಾನ ಹೆಚ್ಚಾಯಿತು. ಆದರೆ ಕನ್ನಡಿಗರು ಸಾವಿರಾರು ವರ್ಷಗಳ ಹಿಂದೆಯೇ ಜ್ಞಾನಿಗಳಾಗಿದ್ದರು. ಬಸವಣ್ಣ, ಕುವೆಂಪು ಸೇರಿದಂತೆ ಇನ್ನಿತರ ಮಹಾನ್ ನಾಯಕರು ಸುಸಂಸ್ಕೃತ ಜೀವನ ನಡೆಸಿ ನಮಗೆ ಮಾರ್ಗದರ್ಶನ ನೀಡಿದ್ದಾರೆ ಎಂದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶೃಂಗಾರ್, ಸಂಜೀವ್ ಶೆಟ್ಟಿ, ಡಾ.ಹೆಚ್.ಎಂ. ವಿರೂಪಾಕ್ಷ ದಿನೇಶ್, ಶ್ರೀಕಂಠೇಶ್, ಮನೋಹರ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮೈಲ್ಯಾಕ್ ಅಧ್ಯಕ್ಷ ಆರ್. ರಘು ಕೌಟಿಲ್ಯ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಿ. ಪುಟ್ಟಸ್ವಾಮಿ, ಕನ್ನಡ ಚಳುವಳಿಗಾರರಾದ ತಾಯೂರು ವಿಠಲ ಮೂರ್ತಿ, ಮೂಗೂರು ನಂಜುಂಡಸ್ವಾಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದು ಉಚಿತ ಮೂಳೆ ಸಾಂದ್ರತೆ ತಪಾಸಣಾ ಶಿಬಿರ


ಮೈಸೂರು, ಡಿ. 2- ಮೈಸೂರಿನ ದಟ್ಟಗಳ್ಳಿ 3ನೇ ಹಂತದಲ್ಲಿರುವ ನಯನ್ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಡಿ. 3 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ಉಚಿತ ಮೂಳೆ ಸಾಂದ್ರತೆ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821-2371000, ಮೊ. 9513310100, 9513310102 ಸಂಪರ್ಕಿಸಬಹುದು.

ಕೆನರಾ ಬ್ಯಾಂಕ್‌ಗೆ 'ಬ್ಯಾಂಕರ್ಸ್ ಬ್ಯಾಂಕ್ ಆಫ್ ದಿ ಇಯರ್' ಪ್ರಶಸ್ತಿ

ಬೆಂಗಳೂರು, ಡಿ.2- ಭಾರತದ ಪ್ರತಿಷ್ಠಿತ ಕೆನರಾ ಬ್ಯಾಂಕ್‌ಗೆ 2022ನೇ ಸಾಲಿನ 'ಬ್ಯಾಂಕರ್ಸ್ ಬ್ಯಾಂಕ್ ಆಫ್ ದಿ ಇಯರ್ ಪ್ರಶಸ್ತಿ' ಒಲಿದಿದೆ. ಲಂಡನ್‌ನಲ್ಲಿ ನ.29ರಿಂದ ಡಿ.1ರವರೆಗೆ ಫೈನಾನ್ಷಿಯಲ್ ಟೈಮ್ಸ್ ಆಯೋಜಿಸಿದ್ದ ಗ್ಲೋಬಲ್ ಬ್ಯಾಂಕಿಂಗ್ ಶೃಂಗಸಭೆಯಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಗೆ 'ಭಾರತದ ಕೆನರಾ ಬ್ಯಾಂಕ್' ಆಯ್ಕೆಯಾಯಿತು. ಡಿಸೆಂಬರ್ 1ರಂದು ಲಂಡನ್‌ನಲ್ಲಿ ಕೆನರಾ ಬ್ಯಾಂಕ್‌ನ ಎಂಡಿ, ಸಿಇಒ ಎಲ್.ವಿ. ಪ್ರಭಾಕರ್ ಅವರು ಸಂಸ್ಥೆಯ ಪರವಾಗಿ ಪ್ರಶಸ್ತಿ ಸ್ವೀಕರಿಸಿದರು. 12 ತಿಂಗಳಲ್ಲಿ ಆಯಾ ಭೌಗೋಳಿಕತೆಯಲ್ಲಿ ಉತ್ಪನ್ನ ಮತ್ತು ಸೇವೆಯಲ್ಲಿ ಬ್ಯಾಂಕ್‌ಗಳ ಸಾಮರ್ಥ್ಯವನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಆದಾಯ, ತಂತ್ರಗಾರಿಕೆ, ನಾವೀನ್ಯತೆ, ತಂತ್ರಜ್ಞಾನ, ಉತ್ಪನ್ನ ಮತ್ತು ಸೇವೆ ಹೀಗೆ ಈ ಎಲ್ಲ ಅಂಶದಲ್ಲೂ ಕೆನರಾ ಬ್ಯಾಂಕ್ ಅಭೂತಪೂರ್ವ ಸಾಧನೆ ಮಾಡಿದ್ದು, ಅದಕ್ಕೆ ಪ್ರಶಸ್ತಿ ಒಲಿದಿದೆ. 2022ನೇ ಸಾಲಿನಲ್ಲಿ ಭಾರತದ ಅತ್ಯುತ್ತಮ ಬ್ಯಾಂಕ್ ಎಂದು ಸಾರಿದೆ. ದಿ ಬ್ಯಾಂಕ್ ಆಫ್ ದಿ ಇಯರ್ ಪ್ರಶಸ್ತಿಗಳು ಬ್ಯಾಂಕಿಂಗ್ ಕ್ಷೇತ್ರಕ್ಕೆ ಆಸ್ಕರ್ ಪ್ರಶಸ್ತಿಗಳಿದ್ದಂತೆ. ಕೆನರಾ ಬ್ಯಾಂಕ್ ಭಾರತದ ಅತ್ಯುತ್ತಮ ಬ್ಯಾಂಕ್ ಎಂದು ಗುರುತಿಸಲ್ಪಟ್ಟಿದೆ. ಈ ಪ್ರಶಸ್ತಿಯನ್ನು ಕೆನರಾ ಬ್ಯಾಂಕ್ ತನ್ನ ಎಲ್ಲ ಗ್ರಾಹಕರು, ಹೂಡಿಕೆದಾರರು, ಸಿಬ್ಬಂದಿ ಮತ್ತು ಷೇರುದಾರರಿಗೆ ಅರ್ಪಿಸುವುದಾಗಿ ತಿಳಿಸಿದೆ.



ಮೈಸೂರು ಜಿಲ್ಲಾ ಆಸ್ಪತ್ರೆಯಲ್ಲಿ ಫಾಸ್ಟ್ ಟ್ರಾಕ್ ಓಪಿಡಿ ಕೌಂಟರ್ ಆರಂಭ



ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್ ಅವರು ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಫಾಸ್ಟ್ ಟ್ರಾಕ್ ಓಪಿಡಿ ಕೌಂಟರ್ ಉದ್ಘಾಟಿಸಿದರು. ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ. ನಯಾಜ್ ಪಾಷ, ಡ್ರೀಫ್‌ಕೇರ್ ಹೆಲ್ತ್ ಟೆಕ್ ಪ್ರೈ.ಲಿ. ಪ್ರತಿನಿಧಿ ಚಿತ್ರದಲ್ಲಿದ್ದಾರೆ.

ಮೈಸೂರು, ಡಿ.2(ಆರ್‌ಕೆ)- ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿ ಹೊರ ರೋಗಿಗಳ ಅನುಕೂಲಕ್ಕಾಗಿ ಗುರುವಾರ ಫಾಸ್ಟ್ ಟ್ರಾಕ್ ಓಪಿಡಿ ಕೌಂಟರ್ ಆರಂಭಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮೈಸೂರು ಜಿಲ್ಲೆ ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಫಾಸ್ಟ್ ಟ್ರಾಕ್ ಓಪಿಡಿ ಕೌಂಟರ್‌ಗೆ ಚಾಲನೆ ನೀಡಲಾಗಿದ್ದು, ಮರು ದಿನವೇ ಜಿಲ್ಲೆಯ 2ನೇ ಕೌಂಟರ್ ಅನ್ನು ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್ ಉದ್ಘಾಟಿಸಿದ್ದಾರೆ.

ನೋಂದಣಿ ಮಾಡಿಸಲು ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರ ರೋಗಿಗಳು ಗಂಟೆ ಗಟ್ಟಲೆ ಸಾಲುಗಟ್ಟಿ ನಿಲ್ಲುವುದನ್ನು ತಪ್ಪಿಸಲು ಆರೋಗ್ಯ ಮತ್ತು ಕುಟುಂಬ ಇಲಾಖೆಯು ಕ್ಯೂಆರ್ ಕೋಡ್ ಅಳವಡಿಸಿ ಫಾಸ್ಟ್‌ಟ್ರಾಕ್ ಓಪಿಡಿ ಕೌಂಟರ್ ವ್ಯವಸ್ಥೆ ಕಲ್ಪಿಸಿದೆ. ರೋಗಿಗಳು ತಮ್ಮ ಆಂಡ್ರಾಯ್ಡ್ ಮೊಬೈಲ್ ಫೋನ್‌ನಿಂದ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿದರೆ ರೋಗಿಗೆ ಟೋಕನ್ ಸೃಜನವಾಗುತ್ತದೆ. ಎರಡೇ ನಿಮಿಷದಲ್ಲಿ ಅವರು ಹೊರ ರೋಗಿ ಚೀಟಿ ಪಡೆದು ಸಂಬಂಧಪಟ್ಟ ವೈದ್ಯರ ಬಳಿ ಚಿಕಿತ್ಸೆ ಪಡೆಯಬಹುದಾಗಿದೆ.

ಒಮ್ಮೆ ಈ ಪದ್ಧತಿಯಲ್ಲಿ ರೋಗಿ ನೋಂದಾವಣಿಯಾದಲ್ಲಿ ಅವರ ರೋಗದ ಸಂಪೂರ್ಣ ಮಾಹಿತಿ ನಮೂದಾಗುತ್ತದೆ. ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ಎಬಿಡಿಎಂ) ಯೋಜನೆಯಡಿಯೂ ಫಾಸ್ಟ್ ಟ್ರಾಕ್ ಓಪಿಡಿ ಕೌಂಟರ್‌ನಲ್ಲಿ ಹೊರ ರೋಗಿ ಚಿಕಿತ್ಸೆ ಚೀಟಿ ಲಭ್ಯವಾಗಲಿದ್ದು, ಇದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾಲುಗಟ್ಟಿ ನಿಲ್ಲುವುದು ತಪ್ಪುತ್ತದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾ ಆಸ್ಪತ್ರೆ ಮತ್ತು ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ಡ್ರೀಫ್‌ಕೇಸ್ ಹೆಲ್ತ್ ಟೆಕ್ ಪ್ರೈವೇಟ್ ಲಿಮಿಟೆಡ್ ತಂತ್ರಜ್ಞಾನದ ನೆರವಿನೊಂದಿಗೆ ಫಾಸ್ಟ್ ಟ್ರಾಕ್ ಓಪಿಡಿ ಕೌಂಟರ್‌ಗಳನ್ನು ತೆರೆಯಲಾಗಿದ್ದು, 15 ದಿನದೊಳಗಾಗಿ ಜಿಲ್ಲೆಯ ಉಳಿದ ಸರ್ಕಾರಿ ಆಸ್ಪತ್ರೆಗಳಲ್ಲೂ ಈ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಅವರು ನುಡಿದರು.

ಪ್ರತಿಯೊಬ್ಬರೂ ಆಂಡ್ರಾಯ್ಡ್ ಮೊಬೈಲ್ ಫೋನ್ ಮತ್ತು ಆಧಾರ್ ಕಾರ್ಡ್ ಅನ್ನು ಕೊಂಡೊಯ್ದರೆ ಹೆಚ್ಚು ಸಮಯ ಕಾಯದೇ ಬೇಗ ಓಪಿಡಿ ಚೀಟಿ ಪಡೆದು ಚಿಕಿತ್ಸೆಯನ್ನೂ ಪಡೆಯಬಹುದಾಗಿದೆ. ಸ್ಮಾರ್ಟ್ ಫೋನ್ ಇಲ್ಲದವರಿಗೆ ಮುಂದೆ ಬಯೋ ಮೆಟ್ರಿಕ್ ಸಿಸ್ಟಂ ತಂದು ರೋಗಿಗಳ ಕೀಪ್ಯಾಡ್ ಫೋನ್‌ಗಳಿಗೂ ಮೆಸೇಜ್ ಬರುವ ಹಾಗೆ ಮಾಡುತ್ತೇವೆ ಎಂದೂ ಡಾ.ಪ್ರಸಾದ್ ತಿಳಿಸಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಬರುವ ಕೆ.ಆರ್. ಚೆಲುವಾಂಬ ಹಾಗೂ ಪಿಕೆಟಿಬಿ ಆಸ್ಪತ್ರೆಗಳಲ್ಲೂ ಕಳೆದ 10 ದಿನಗಳಿಂದ ಕ್ಯೂ ಆರ್ ಕೋಡ್ ಫಾಸ್ಟ್ ಟ್ರಾಕ್ ಸಿಸ್ಟಂ ಅನ್ನು ಓಪಿಡಿ ಕೌಂಟರ್‌ಗಳಲ್ಲಿ ಆರಂಭಿಸಲಾಗಿದೆ. ಇದರಿಂದ ಸಾಲುಗಟ್ಟಿ ನಿಂತು ನೂಕು ನುಗ್ಗಲಿನಲ್ಲಿ ಓಪಿಡಿ ಚೀಟಿ ಪಡೆಯಲು ಪರದಾಡುತ್ತಿದ್ದ ರೋಗಿಗಳು ಇದೀಗ ಒಂದೇ ನಿಮಿಷದಲ್ಲಿ ಟೋಕನ್ ಪಡೆದು ನಂಬರ್ ಕರೆದಾಗ ಹೊರ ರೋಗಿ ಚೀಟಿಯೊಂದಿಗೆ ವೈದ್ಯರ ಬಳಿ ತೆರಳುವ ವ್ಯವಸ್ಥೆ ಜಾರಿಗೆ ಬಂದಿದೆ ಎಂದು ಕೆ.ಆರ್. ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ. ರಾಜೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಆಪ್ ಮೂಲಕ ಓಪಿಡಿ ನೋಂದಣಿ ಮಾಡಿಕೊಳ್ಳುವ ಪ್ರಕ್ರಿಯೆ ಬಗ್ಗೆ ಎಲ್ಲಾ ಆಸ್ಪತ್ರೆಗಳ ಕೌಂಟರ್‌ಗಳಲ್ಲಿ ಮಾಹಿತಿ ಫಲಕಗಳನ್ನು ಹಾಕಲಾಗಿದ್ದು, ಸಿಬ್ಬಂದಿಯೂ ಸಹಾಯ ಮಾಡುತ್ತಿದ್ದಾರೆ. ಒಮ್ಮೆ ಕ್ಯೂ ಆರ್ ಕೋಡ್ ಬಳಸಿ ನೋಂದಣಿಯಾದರೆ ರೋಗಿಗಳ ಸಂಪೂರ್ಣ ಮಾಹಿತಿ ತಂತ್ರಾಂಶದಲ್ಲಿ ಸ್ಟೋರ್ ಆಗುತ್ತದೆ ಎಂದು ಅವರು ತಿಳಿಸಿದರು.

ಉನ್ನತ ಶಿಕ್ಷಣ ಪರಿಷತ್‌ಗೆ ತಜ್ಞರ ನಾಮ ನಿರ್ದೇಶನ

ಬೆಂಗಳೂರು, ಡಿ.2(ಕೆಎಂಶಿ)–ಮೈಂಡ್‌ಟ್ರೀ ಕಂಪನಿಯ ಸಿಇಒ ದೇವಶಿಶ್ ಚಟರ್ಜಿ ಮತ್ತು ಅಜೀಂ ಪ್ರೇಂಜಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಅನುರಾಗ್ ಬೆಹಾರ್ ಸೇರಿದಂತೆ ಹತ್ತು ತಜ್ಞರನ್ನು ಮುಂದಿನ ಐದು ವರ್ಷಗಳ ಅವಧಿಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ನಾಮನಿರ್ದೇಶನ ಸದಸ್ಯರನ್ನಾಗಿ ನೇಮಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಮಿಕ್ಕಂತೆ ವಿಶಾಖಪಟ್ಟಣ ಕೇಂದ್ರೀಯ ಬುಡಕಟ್ಟು ವಿವಿ ಕುಲಪತಿ ಪ್ರೊ. ಟಿ.ವಿ.ಕಟ್ಟೀಮನಿ, ಕುವೆಂಪು ವಿವಿ ವಿಶ್ರಾಂತ ಕುಲಪತಿ ಜೋಗಿನ್ ಶಂಕರ್, ಅಕ್ಕಮಹಾದೇವಿ ವಿವಿ ವಿಶ್ರಾಂತ ಕುಲಪತಿ ಮೀನಾ ಚಂದಾವರ್ಕರ್, ಐಸಿಎಸ್‌ಎಸ್‌ಆರ್ ನಿರ್ದೇಶಕಿ ಪ್ರೊ. ಉಷಾರಾಣಿ, ಎಂಎಆರ್‌ಸಿಕೆ ಲೈಫ್ ಸೈನ್ಸಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎನ್ ಎಸ್ ಶ್ರೀನಾಥ್, ಕ್ವೆಸ್ಟ್ ಗ್ಲೋಬಲ್ ಕಂಪನಿ ಅಧ್ಯಕ್ಷ ಅಜಯ್ ಪ್ರಭು ಮತ್ತು ಬಾಶ್ ಗ್ಲೋಬಲ್ ಸಾಫ್ಟ್‌ವೇರ್‌ನ ಮುಖ್ಯ ಕಾರ್ಯತಂತ್ರ ಅಧಿಕಾರಿ ರಾಘವೇಂದ್ರ ಕೃಷ್ಣಮೂರ್ತಿ ಅವರನ್ನು ಉನ್ನತ ಶಿಕ್ಷಣ ಪರಿಷತ್ತಿಗೆ ನಾಮನಿರ್ದೇಶಕ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಉದ್ಯಮದ ಪ್ರಮುಖರನ್ನು ಶಿಕ್ಷಣ ಕ್ಷೇತ್ರದ ಜತೆ ಜೋಡಿಸುವ ಉದ್ದೇಶದಿಂದ ಈ ಬಾರಿ ಪರಿಷತ್ತಿಗೆ ಉದ್ಯಮಿಗಳನ್ನೂ ನೇಮಿಸಲಾಗಿದೆ ಎಂದು ಈ ನೇಮಕಾತಿಗಳನ್ನು ಅವರು ಸಮರ್ಥಿಸಿಕೊಂಡಿದ್ದಾರೆ.

ಇಂದು 'ವಚನ–ದಾಸ–ಸಂಭ್ರಮ' ಪುಸ್ತಕ ಬಿಡುಗಡೆ; ದಾಸಸಾಹಿತ್ಯ ವಿಚಾರಗೋಷ್ಠಿ

ಮೈಸೂರು,ಡಿ.2–ನಗರದ ಸಾಹಿತ್ಯ ವಿಚಾರ ವೇದಿಕೆ ಮತ್ತು ವಿಜಯ ಸಂಜೆ ಪದವಿ ಪೂರ್ವ ಕಾಲೇಜು ಸಂಯುಕ್ತ ಆಶ್ರಯದಲ್ಲಿ 67ನೇ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಪ್ರಾಧ್ಯಾಪಕ ಸಂಶೋಧಕ ಡಾ.ಆರ್.ವಾದಿರಾಜು ಸಂಪಾದಿಸಿರುವ 'ವಚನ–ದಾಸ–ಸಂಭ್ರಮ' ಕೃತಿ ಲೋಕಾರ್ಪಣೆ ಹಾಗೂ ದಾಸ ಸಾಹಿತ್ಯ ವಿಚಾರಗೋಷ್ಠಿಯನ್ನು ಬೆಂಗಳೂರಿನ ಜಯನಗರ 4ನೇ ಬ್ಲಾಕ್ ವಿಜಯ ಸಂಜೆ ಪದವಿಪೂರ್ವ ಕಾಲೇಜಿನ ಆವರಣದ ರಾಮಸ್ವಾಮಿ ಸಭಾಂಗಣದಲ್ಲಿ ಡಿ.3ರ ಶನಿವಾರ ಸಂಜೆ 4:30ಕ್ಕೆ ಆಯೋಜಿಸಲಾಗಿದೆ.

ಹಿರಿಯ ದಾಸ ಸಾಹಿತ್ಯ ಸಂಶೋಧಕ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ ಕೃತಿ ಲೋಕಾರ್ಪಣೆ ಮಾಡುವರು. ಸಂಸ್ಕೃತಿ ಚಿಂತಕ ಡಾ.ಗುರುರಾಜ ಪೋಶೆಟ್ಟಿಹಳ್ಳಿ, ಕಾಲೇಜಿನ ಪ್ರಾಂಶುಪಾಲ ಪಿ.ಸಿ.ನಾಗರಾಜು, ಕೆಕೆ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಶಿವರಾಮ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕನ್ನಡ ಪ್ರಾಧ್ಯಾಪಕ ಡಾ.ಎಸ್.ಎಲ್.ಮಂಜುನಾಥ ಕೃತಿ ಕುರಿತು ಮಾತನಾಡುವರು. ನಿವೃತ್ತ ಪ್ರಾಂಶುಪಾಲ ಪ್ರೊ.ಚಂದ್ರಶೇಖರ್ ಅವರಿಗೆ ಅಭಿನಂದನೆ ಹಮ್ಮಿಕೊಳ್ಳಲಾಗಿದೆ. ನಂತರ ನಡೆಯುವ ದಾಸ ಸಾಹಿತ್ಯ ವಿಚಾರ ಗೋಷ್ಠಿಯಲ್ಲಿ ಡಾ.ವಿದ್ಯಾ ಕಸಬೇ ಅಧ್ಯಕ್ಷತೆಯಲ್ಲಿ ಡಾ.ವಾದಿರಾಜ ಅಗ್ನಿ ಹೋತ್ರಿರವರು 'ಹರಿದಾಸರ ಛಂದೋ ಮಾಲಿಕೆ' ಕುರಿತು ಡಾ.ವಿದ್ಯಾರಾವ್ ಅವರು 'ಶ್ರೀ ವ್ಯಾಸರಾಯರ ಸುಳಾದಿಯ ಅಂಕಿತ ಸಂದಿಗ್ಧ ಸ್ಪಷ್ಟೀಕರಣ' ಬಗ್ಗೆ, ಡಾ.ಎಲ್.ಸುಧಾ ಅವರು' ಪಾಠ ಪರಿಷ್ಕರಣೆ 'ವಿಷಯ ಮಂಡನೆ ಮಾಡುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಮೈಸೂರು ಜಿಪಂ ವಿಮರ್ಶೆ ಸಭೆ

ಮೈಸೂರು, ಡಿ.2– ಜಿಲ್ಲಾ ಪಂಚಾಯತ್ ವತಿಯಿಂದ ಜಲಮಂಡಳಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಜಯರಾಮ್ ಅಧ್ಯಕ್ಷತೆಯಲ್ಲಿ ಡಿ.3ರಂದು ಬೆಳಗ್ಗೆ 10.30 ಗಂಟೆಗೆ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪಂಚಾಯತ್ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಹಾಗೂ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳೊಂದಿಗೆ ಇಲಾಖೆ ನಿಗಮ ಮಂಡಳಿಗಳ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ವಿಮರ್ಶೆ ಸಭೆ ನಡೆಸಲು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳ ಸಭೆ ಕರೆಯಲಾಗಿದೆ ಎಂದು ಜಿಪಂ ಸಿಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿಮಗೆ ಕೆಲಸದ ಅಗತ್ಯ ಇದೆಯಾ?
ಹುಡುಗರು, ಹುಡುಗಿಯರು ಕರೆ ಮಾಡಿ. ಕೇಕ್ ಶಾಪ್‌ಗೆ, ಜ್ಯೂಸ್ ಅಂಗಡಿಗೆ ಕುವೆಂಪುನಗರ ಸುತ್ತಮುತ್ತ ಇರುವವರಿಗೆ ಆದ್ಯತೆ. ಸಂಪರ್ಕಿಸಿ:
Mob: 94480-54151
ಬೆಳಿಗ್ಗೆ 10 ರಿಂದ ರಾತ್ರಿ 8ರ ಒಳಗೆ

WANTED
For Property Company
* Marketing Executives.
* Telecallers
* Freelancers
(Salary + Attractive incentives)
Location: Gayathripuram, Near PF Office. Contact:
8088062828

ಮಂಟಪ ಮನೆ

ನಮ್ಮಲ್ಲಿ ಬೀಟೆ, ಹಲಸು ಮರಗಳಿಂದ ತಯಾರಾದ ಮಂದಾಸನ, ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ. ಶ್ರೀನಗರ, ಮೈಸೂರು
9448207634
9036742526

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಹಾಗೂ ಹಂಪಾಪುರ ಹೋಬಳಿಯಲ್ಲಿ ತೋಟಗಳು ಮತ್ತು ಜಮೀನುಗಳು ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿವೆ. ಸಂಪರ್ಕಿಸಿ:
9945661696
8618848886

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

ಮನೆ ಬಾಡಿಗೆಗೆ ಇದೆ
2BHK
(ನೆಲ ಮಹಡಿ), ಸುಣ್ಣದಕೇರಿ, 8ನೇ ಕ್ರಾಸ್, ನಾಲಬೀದಿ.
9742210516

GOLD FINANCE
ಗಿರವಿ ಚಿನ್ನಾಭರಣ ಖರೀದಿ
24 ಕ್ಯಾರೆಟ್-5300
22 ಕ್ಯಾರೆಟ್-4700
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ.
9964522225

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಾಳೂರು ಸರ್ಕಲ್‌ನಲ್ಲಿ ನಿರ್ಮಾಣ ಲೇ ಔಟ್ ಪಕ್ಕದಲ್ಲಿ ಲೇಔಟ್ ಅಥವಾ ಫಾರಂ ಹೌಸ್ ಮಾಡಲು ಯೋಗ್ಯವಾದ 18 1/2 ಗುಂಟೆ ಹಾಗೂ 1 ಎಕರೆ, 4 ಗುಂಟೆ ಮಾವಿನ ತೋಟ ಮಾರಾಟಕ್ಕಿದೆ. ಸಂಪರ್ಕಿಸಿ.:
7483381701
9945661696

HOUSE FOR SALE
20x30 East Face Ground & First Floor, LBS Nagar, MUDA Layout. Contact:
9972828808

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ – 10th, PUC, (Age 30yrs to 45 yrs) ಸ್ಥಳ: (ಸಿದ್ಧಾರ್ಥನಗರ, ಆಲನಹಳ್ಳಿ, ಬನ್ನೂರು ರಸ್ತೆ, ಬೋಗಾದಿ)
2) ಗಾರ್ಡನ್ ಸೂಪರ್‌ವೈಸರ್ – ಕಟ್ಟಿಂಗ್ ಅನುಭವವಿರಬೇಕು. (ಸ್ಥಳ: ಮೇಟಗಳ್ಳಿ)
ESI, PF ಮತ್ತು ಊಟದ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9739166772

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 12,000 ದಿಂದ 18,000 (ESI, PF ಸೌಲಭ್ಯ ಇರುತ್ತದೆ)
8050699742 / 7892480649

MAKE - UP STUDIO BY BHADRA
* Bridal Make Up Course
* Basic to Advance Level in One Month Free Port Folio Shoot & Certification
* Marketing Ideas and Business Establishment Lifetime Support in Business
* 19th Batch Starts from 12th December 2022.
* Limited Seats Only, Individual Attention is given to all Students, To Enroll Contact :
9964398988

LOANS
ಮನೆ ಸಾಲ – ನಿವೇಶನ ಸಾಲ
11ಎ ಮತ್ತು 11ಬಿ, ಮನೆ ಸಾಲ ಹಾಗೂ ಪ್ರಾಪರ್ಟಿ ಸಾಲ, ವ್ಯಾಪಾರ ಸಾಲ ಮಾಡಿಕೊಡಿಸಲಾಗುವುದು. ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕಿಗೆ ವರ್ಗಾವಣೆ ಮಾಡಿಸಲಾಗುವುದು.
7975453083 / 7259784408

ಮೇಕಪ್ ಸ್ಟುಡಿಯೋ ಬೈ ಭದ್ರಾ
* ಬ್ರೈಡಲ್ ಮೇಕಪ್ ಕಲಿಯಿರಿ ಒಂದು ತಿಂಗಳಲ್ಲಿ ಉಚಿತ ಫೋರ್ಟ್ ಫೋಲಿಯೊ ಶೂಟ್ ಮತ್ತು ಸರ್ಟಿಫಿಕೇಟ್ ಕೂಡ ದೊರೆಯುತ್ತದೆ.
* ಬಿಸ್‌ನೆಸ್ ಮತ್ತು ಮಾರ್ಕೆಟಿಂಗ್ ಐಡಿಯಾಗಳು ಮತ್ತು ಸಹಾಯ.
* ೧೯ನೇ ಬ್ಯಾಚ್ ಡಿಸೆಂಬರ್ ೧೨ಕ್ಕೆ ರಿಂದ ಪ್ರಾರಂಭವಾಗಲಿದೆ, ಲಿಮಿಟೆಡ್ ಸೀಟ್‌ಗಳು ಮಾತ್ರ, ಕೂಡಲೇ ಕರೆ ಮಾಡಿ :
9964398988

ಬೇಕಾಗಿದ್ದಾರೆ
ಯುವಕ/ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಶುಕ್ರ ಪ್ಯಾಕೆಜಿಂಗ್ ಪ್ರೈವೇಟ್ ಲಿ., # 19/ಎ, ಇಂಡಸ್ಟ್ರಿಯಲ್ ಸಬರ್ಬ್, ಮೈಸೂರು ದಕ್ಷಿಣ, ಮೈಸೂರು.
9632620077 / 9845835677

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

ಸುವರ್ಣ ಯಾತ್ರ
7 ದಿನಗಳ ಕಾಶಿ ಪ್ರವಾಸ 22/12/22
4 ದಿನಗಳ ಓಂಕಾರೇಶ್ವರ ಹಾಗೂ ಉಜ್ಜಯಿನಿ ಪ್ರವಾಸ 06/01/23
8 ದಿನಗಳ ಗುಜರಾತ್ ಪ್ರವಾಸ 25/01/23
9 ದಿನಗಳ ರಾಜಸ್ಥಾನ ಪ್ರವಾಸ 21/02/23
9019462508
9008381022

SITE FOR SALE
30x40 Sites,
Bank Loan upto 80%, Near Guru Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road
8660105902

FOR RENT
1 or 2 BHK House at Vijayanagar 4th Stage, Sadhanalayout, Near SVEI School / Rastrothana School. Contact:
8762059656 / 9980355558

ತಕ್ಷಣ ಬೇಕಾಗಿದ್ದಾರೆ
ಕಡಕೊಳ ಏರಿಯಾದ TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ಸಂಬಳ: 15,000/- ,8 hours, 26 days, ವಯೋಮಿತಿ: 45 ವರ್ಷದೊಳಗೆ, ವಿದ್ಯಾರ್ಹತೆ: SSLC ಮೇಲ್ಪಟ್ಟು, ESI, PF ಮತ್ತು ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819
9538567819

ಬೇಕಾಗಿದ್ದಾರೆ
ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
20 to 40 age, Time to meet - 10 am to 2 pm
ಚೇತನ್ ಬುಕ್ಸ್‌ಹೌಸ್, ನಾರಾಯಣಶಾಸ್ತ್ರಿ ರೋಡ್, ಮೈಸೂರು.

MUDA APPROVED SITES FOR SALE
30x40, 30x50, 40x60 & 50x80 Ready for Registration & Bank Loan Available. Sree Sapthamathruka LYT Phase-1. Next to Lalbahadurshastri Nagar, 2 kms from Ring Road.
7337786007

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 MANGALORE 9343142258

ಅಡುಗೆಯವರು ಬೇಕಾಗಿದ್ದಾರೆ
ಮೈಸೂರು ಜಯಲಕ್ಷ್ಮೀಪುರಂನ ಹುಡುಗರ ಹಾಸ್ಟೆಲ್‌ನಲ್ಲಿ ವೆಜ್ ಅಡುಗೆ ಕೆಲಸ ಮಾಡಲು ಅನುಭವವುಳ್ಳ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಬಳ: 10000/– ಸಂಪರ್ಕಿಸಿ
9448307116

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

SITE FOR SALE
40x60
South Face Site Sale Suvarna Layout (Gaddige Road). Call:
9880273834

SITE FOR SALE
30x40
North Face Site Sale Sandalwood Layout (Near Maramma Temple University Layout)
9880273834


V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

HOUSE FOR SALE
30x40
Vijayanagar 4th Stage, 2nd Phase, 3.5 Floor and 2.5 Floor (MUDA allotted site).
Mob: 9743532664

ಪ್ರವಾಸ
8–1–2023 ನಿಗದಿತ ಕಾಶಿ, ಗಯಾ, ಬುದ್ಧ ಗಯಾ, ಪ್ರಯಾಗ್, ಅಯೋಧ್ಯೆ ಪ್ರವಾಸ ವಿಮಾನದಲ್ಲಿ. ಮೈಸೂರು ನಾಗರೀಕರಿಗಾಗಿ ವಿಶೇಷ ದರದಲ್ಲಿ 5 ಸೀಟ್‌ಗಳು ಲಭ್ಯ. ಆಸಕ್ತರು ಕೂಡಲೇ ಸಂಪರ್ಕಿಸಿ: ಅನುಗ್ರಹ ಯಾತ್ರ, ಬೆಂಗಳೂರು
9880079351, 8073200725

ಸೈಟು ಮಾರಾಟಕ್ಕಿದೆ
ಶ್ರೀರಾಂಪುರ, 2ನೇ ಹಂತ, ಕಂದಾಯ ಬಡಾವಣೆ, 1ನೇ ಹಂತ, 30x40 W/F, ಖರೀದಿದಾರರು ಸಂಪರ್ಕಿಸಿ: 65 ಲಕ್ಷ, ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
9342119411

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರಿಗೆ ಶೀಘ್ರ ಕಂಕಣಭಾಗ್ಯ ಹಾಗೂ ಉತ್ತಮ ಸಂಬಂಧಕ್ಕೆ ಕೂಡಲೇ ಸಂಪರ್ಕಿಸಿ:
ಡಾ.ಗುರೂಜಿ ಮೈಸೂರು
6361740552
7899625268
www.bhandhana.com

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
31/12: ಪುರಿ ಜಗನ್ನಾಥ್, ಕೋನಾರ್ಕ್ ಸೂರ್ಯ ದೇವಸ್ಥಾನ, ಚಂದ್ರಭಾಗ್ ಬೀಚ್. 29/12: ಎಂಪಿ 2 ಜ್ಯೋತಿರ್ಲಿಂಗ, ಮಹಾ ಕಾಳೇಶ್ವರ, ಓಂಕಾರೇಶ್ವರ. 4/1/2023: ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್ ರಾಜ್, ಅಯೋಧ್ಯೆ. 18/1/2023: ರಾಯಲ್ ರಾಜಸ್ಥಾನ್, ಜೈಪುರ, ಜೋಧ್‌ಪುರ, ಜೈಸಲ್ಮಾರ್, ಮೌಂಟ್‌ಅಬು, ಅಹಮದಾಬಾದ್, ಅಂಬಾಜಿ, ದೆಹಲಿ. 29/1/2023: ದೆಹಲಿ ವೈಷ್ಣೋ ದೇವಿ, ಅಮೃತಸರ್, ಕುರುಕ್ಷೇತ್ರ, ವಾಘಾಬಾರ್ಡರ್.
9591017782, 9535688296

ಕೆಲಸಕ್ಕೆ ಬೇಕಾಗಿದ್ದಾರೆ
ಕೈಗಾರಿಕ ಘಟಕದ ಕ್ಯಾಂಟೀನ್ ಕೆಲಸಕ್ಕೆ 18 ರಿಂದ 35 ವಯಸ್ಸಿನ ಹುಡುಗರು ಬೇಕಾಗಿದ್ದಾರೆ. 12 hours duty (ಪಾಳ್ಯ) ಹೆಲ್ಪರ್ಸ್, ಕೌಂಟರ್, ಸಪ್ಲೇಯರ್. ಆಸಕ್ತಿವುಳ್ಳವರು ಸಂಪರ್ಕಿಸಿ:
Mob: 9844900510

ಸೈಟು ಮಾರಾಟಕ್ಕಿದೆ
ಮುಡಾ ಅಪ್ರೂವ್ಡ್
30x40 East Face
30x30 South Face
40x60 West Face
40x60 North Face.
Mob: 9900372792

Free training on communication skills
* Speaking English effectively.
* Correspondence (Office & General).
Contact:
Mob: 9844456981

ಬೇಕಾಗಿದ್ದಾರೆ
1) ಸಸ್ಯಾಹಾರಿ ಕುಕ್ (ಜೈನ್ ಕುಕ್ ಆದಲ್ಲಿ ಉತ್ತಮ).
2) ಹೆಲ್ಪರ್ಸ್
3) ಸ್ವೀಟ್ ಮತ್ತು ಚಾಟ್ ಮಾಡುವವರು.
ಉತ್ತಮ ವೇತನದೊಂದಿಗೆ ಊಟ ಮತ್ತು ವಸತಿ ಸೌಲಭ್ಯ ಕೊಡುತ್ತೇವೆ. ಸಂಸಾರದೊಂದಿಗೆ ಬಂದರು ಪರವಾಗಿಲ್ಲ. ಸಂಪರ್ಕಿಸಿ: ಶ್ರೀದೀಪ್
Mob: 9620208168

SITES FOR SALE
MUDA Approved Sites for Sale Near M S Ramaiah Layout, Vijaynagar 4th Stage.
7026901111

SRA PACKAGE TOURS
ಶಿರಡಿ ಪ್ರವಾಸ – ರೂ.13,000/– 6 ದಿನಗಳು ಹೊರಡುವ ದಿನಾಂಕ: 24/12/2022, ಶಿರಡಿ, ಶನಿಸಿಂಗ್ನಪುರ, ಪಂಡರಾಪುರ, ಜ್ಯೋತಿರ್ಲಿಂಗ, ಎಲ್ಲೋರ, ಕೊಲ್ಹಾಪುರ ಹಾಗೂ ಇತರ ಸ್ಥಳಗಳು. ಗೋವಾ ಪ್ರವಾಸ – ರೂ.7000/– 3 ದಿನಗಳು ಹೊರಡುವ ದಿನಾಂಕ: 07/01/2023 ಬಾಗ ಬೀಚ್, ಕಲಂಗುಟ್ ಬೀಚ್, ಬಾಸಲಿಕ ಚರ್ಚ್, ಡಾಲ್ಫಿನ್ ಬೋಟ್, ಡಿಜೆ ಬೋಟ್, ಧೂದ್ ಸಾಗರ್ ವಾಟರ್ ಫಾಲ್.
7022271023

ಮನೆ ಆಲ್ಟ್ರೇಷನ್ ಕೆಲಸ
ಗಾರೆ ಕೆಲಸ, ನಲ್ಲಿ ರಿಪೇರಿ, ಸ್ಯಾನಿಟರಿ, ಟೈಲ್ಸ್, ಬಣ್ಣದ ಕೆಲಸ, ಕಾರ್ಪೆಂಟರ್ ಕೆಲಸ A to Z ಸಿವಿಲ್ ಕೆಲಸ ಮಾಡಿಕೊಡಲಾಗುತ್ತದೆ
7090832865

ಬೇಕಾಗಿದ್ದಾರೆ
ವಾರ್ಡನ್ ಕಂ ಶಿಕ್ಷಕರು
ವೇತನ 15000+ ಉಚಿತ ಸಸ್ಯಹಾರಿ ಊಟ+ವಸತಿ. ಸಂಪರ್ಕಿಸಿ: ಕಲಿಯುವ ಮನೆ, ಕೆಂಚಲಗೂಡು, ಮಾನಂದವಾಡಿ ರಸ್ತೆ ಸಮೀಪ, ಮೈಸೂರು–8,
9538499901, 9341369901, 8088586087

ಜಮೀನುಗಳು ಮತ್ತು ಸೈಟು ಮಾರಾಟಕ್ಕಿವೆ
ಮೈಸೂರು ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ಮುಡಾ ಮತ್ತು ಡಿಸಿ ಕನ್ವರ್ಷನ್ ನಿವೇಶನ ಮಾಡಲು ಮತ್ತು ತೋಟ ಮಾಡಲು ಒಳ್ಳೆಯ ಜಮೀನುಗಳು ಮಾರಾಟಕ್ಕಿವೆ ಸಂಪರ್ಕಿಸಿ:
9611320189

ಷೆಡ್ ಬಾಡಿಗೆಗೆ ಇದೆ
ಅಳತೆ 2500 ಚದರ ಅಡಿ, ಪ್ರೀಮಿಯರ್ ಸ್ಟೂಡಿಯೋ ಮುಂಭಾಗ ಹುಣಸೂರು ರಸ್ತೆ, ಮೈಸೂರು, ಸಂಪರ್ಕಿಸಿ
9448011470

ಜಮೀನು ಮಾರಾಟಕ್ಕಿದೆ
$1^1/_2$ ಎಕರೆ, ಮೈಸೂರು–ಸುತ್ತೂರು ಮುಖ್ಯರಸ್ತೆ, ವರುಣ ಮಾರ್ಗ, ಮೈಸೂರು ರಿಂಗ್ ರಸ್ತೆಯಿಂದ 12.ಕಿಮಿ ದೂರ ಮರಡಿಹುಂಡಿ ಗೇಟ್ ಗ್ಯಾಸ್ ಗೋಡೌನ್ ಹತ್ತಿರ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗೆ ಅನುಕೂಲವಿದೆ.
8105544664, 9945260880

ಮನೆ ಮಾರಾಟಕ್ಕಿದೆ
2 ಮನೆ, 1 ಅಂಗಡಿ ಮಂಗಳೂರು ಹೆಂಚಿನ ಎರಡು ಮನೆ, ಒಟ್ಟು ಅಳತೆ 19.5 ಅಡಿ ಅಗಲ, 85 ಅಡಿ ಉದ್ದ, 100 ಅಡಿ ಬಿ.ಆರ್.ಹಿಲ್ಸ್ ಮುಖ್ಯ ರಸ್ತೆ, ಪೊಲೀಸ್ ಠಾಣೆ ಹತ್ತಿರ, ರಾಮಸಮುದ್ರ ಟೌನ್, ಚಾಮರಾಜನಗರ – 571342. ಸಂಪರ್ಕಿಸಿ:
9916598088

ಬೇಕಾಗಿದ್ದಾರೆ
Graphic Desinger, DTP ಆಪರೇಟರ್ ಬೇಕಾಗಿದ್ದಾರೆ. ಕನ್ನಡ, English, Typist ಬೇಕಾಗಿದ್ದಾರೆ. (Junior / Senior Typing ಆಗಿರಬೇಕು) Office Supervisor ಬೇಕಾಗಿದ್ದಾರೆ, B.Com ಆಗಿರಬೇಕು.
7349057709

ಮನೆ ಬಾಡಿಗೆಗೆ ಇದೆ
(ಸಸ್ಯಹಾರಿಗಳಿಗೆ ಮಾತ್ರ) 2 ಬೆಡ್ ರೂಂಗಳ್ಳುಳ್ಳ ಮಹಡಿ ಮನೆ, 316, 8ನೇ ಮುಖ್ಯರಸ್ತೆ, 'ಸಿ' ಬ್ಲಾಕ್, ಜೆ.ಪಿ.ನಗರ, ಮೈಸೂರು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
9448979224

S.K.CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ Engineer Plan ವಾಸ್ತು ಪ್ರಕಾರ 3D Elivation ಸಹಿತ ಉತ್ತಮ ಗುಣಮಟ್ಟದಲ್ಲಿ Loan ಮಾಡಿಸಿ Construction ಮಾಡಿಕೊಡುತ್ತೇವೆ.
9620528490

ನಿವೃತ್ತ ನೌಕರರಿಗೆ ಉದ್ಯೋಗ
ವಿದ್ಯಾರ್ಹತೆ: SSLC, PUC, Degree ಉತ್ತೀರ್ಣ, ವೇತನ: 10,000/–, 20,000/–, 30,000/– ಸಂದರ್ಶನಕ್ಕೆ ಹಾಜರುಪಡಿಸಬೇಕಾದ ದಾಖಲೆಗಳು: 1) ವಿದ್ಯಾರ್ಹತೆ ಅಂಕಪತ್ರ, 2) ಆಧಾರ್ ಕಾರ್ಡ್, 3) ಪಾನ್ ಕಾರ್ಡ್, 4) ಬ್ಯಾಂಕ್ ಪಾಸ್ ಪುಸ್ತಕ, 5) ಪಾಸ್‌ಪೋರ್ಟ್ ಅಳತೆ ಫೋಟೋ. ಸಂಪರ್ಕಿಸಿ:
9886647852

WANTED
ITI, Diploma or Engineering Candidate Fresher or 1 or 2 years Experience.
Marketing Executive
Fresher or 1 or 2 Years Experience with Own vehicle Mandatory. Contact: MANAS Industries, Hebbal Industiral Estate
9591511227 / 9448056492
Mail: manas_industries@outlook.com

ಮನೆ ಮಾರಾಟಕ್ಕಿದೆ
19x50
345/L17, 4ನೇ ಕ್ರಾಸ್, ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು. ಕರ್ನಾಟಕ – 570001
9964321918
9611067615

WANTED
REQUIRED: B.Sc or M.Sc Chemistry with Good Communication skill interest candidates send your CV to snsoperations95@gmail.com Contact: with Bio-data: #380/D, 14/A, 2nd Floor, Krishna Vilasa Road, Mysore - 570001
9513999755

WANTED
Drivers for Pre School in Bogadi.
Call:
9611776677

ತಕ್ಷಣ ಬೇಕಾಗಿದ್ದಾರೆ
ಗೃಹಿಣಿಯರು, ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಮತ್ತು ಹುಡುಗ, ಹುಡುಗಿಯರು ಬಿಡುವಿನ ವೇಳೆಯಲ್ಲಿ ಮನೆಯಲ್ಲೇ ಕುಳಿತುಕೊಂಡು ಹೆಚ್ಚು ಸಂಪಾದಿಸಬಹುದಾಗಿದೆ. ನಮ್ಮಲ್ಲಿ ಅತೀ ಸರಳವಾದ ರೀತಿಯಲ್ಲಿ 'Part Time' 'Full TIme' Job ಸೌಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೂಡಲೇ ಸಂಪರ್ಕಿಸಿ.
8951706409 / 7019702033

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ (8000 ದಿಂದ 10000 ರವರೆಗೆ) Team Leader ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನವುಳ್ಳವರು) ಸಂಬಳ: 10000. ಸ್ಥಳ: ಎನ್.ಆರ್.ಮೊಹಲ್ಲಾ ಮತ್ತು ಚಾಮುಂಡಿಪುರಂ, GTR Hotel ಹತ್ತಿರ
8150005111

ಬೇಕಾಗಿದ್ದಾರೆ
ನಾನ್ ವೆಜ್ ಕುಕ್ ಹಾಗೂ ಹೆಲ್ಪರ್ಸ್ (ಗಂಡಸರು ಹಾಗೂ ಹೆಂಗಸರು) ಸಯ್ಯಾಜಿರಾವ್ ರಸ್ತೆಯಲ್ಲಿರುವ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಬೇಕಾಗಿದ್ದಾರೆ.
8951609961
9342492525

ಬೇಕಾಗಿದ್ದಾರೆ
ಬನ್ನಿಮಂಟಪ ಹೋಟೆಲ್ ಕೆಲಸಕ್ಕೆ ಹೆಂಗಸರು ಮತ್ತು ರೂಂ ಬಾಯ್, ರಿಸೆಪ್ಷನಿಸ್ಟ್‌ಗಳು ಬೇಕಾಗಿದ್ದಾರೆ.
9886903321

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ಸಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

HOUSE FOR SALE
27x40, MUDA, 3BHK Duplex House, N / E Corner, 3 years Old, Park Facing at Vijayanagar 4th Stage, Mysuru - Price 1.20 Cr.
30x40, MUDA Allotted, S/F Demolish old House at Gokulam 3rd Stage, Near Doctors Corner, Mysuru - Price 95 Lakhs
8660105902

HOUSE FOR SALE
30x50, MUDA app, 3 BHK Duplex New House with Borewell, N/F, Close to Vijayanagar 4th Stage, Mysuru - Price 1.25 Cr.
2 BHK Unused Flat, East Facing, 1310 Sq.ft. 1st Floor, Fully Furnished at Foundation Silver Springs, Hootgalli, Mysuru. Price - 76 Lakhs
8660105902

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

SSLC PASSING PACKAGE TUITION FOR SLOW LEARNER
Classes Start from 5-12-2022 to 30-03-2023, Timings : 5.30 pm to 7.30 pm, Place: Kuvempunagar Complex. Contact: Pushpa, M.Sc (Maths)., B.Ed
7975567004 / 8453360347

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

OFFICE / COMMERCIAL SPACE FOR RENT
12x22 Ft First Floor, D Subbaiah Road, Near Marimallappa College, Mysore.
8147833038

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಅಭಿವೃದ್ಧಿ ಮಾಡುವವರು ಚುನಾವಣೆಯಲ್ಲಿ ಸೋಲಬಾರದು

ಹೆಮ್ಮಿಗೆಯಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ತಿ.ನರಸೀಪುರ ಡಿ.2– ಜನಪರ, ಅಭಿವೃದ್ಧಿ ಕಾರ್ಯ ಮಾಡುವವರು ಯಾವುದೇ ಚುನಾವಣೆಗಳಲ್ಲಿ ಸೋಲಬಾರದು. ಕೆಲಸ ಮಾಡುವವರು ಸೋತಾಗ ನಷ್ಟವಾಗುವುದು ಜನರಿಗೆ ಎಂದ ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪನವರು ಕಾಂಗ್ರೆಸ್ ಸರ್ಕಾರದಲ್ಲಿ ಕ್ಷೇತ್ರದ ಯಾವುದಾದರೂ ಒಂದು ಹಳ್ಳಿ ನನ್ನಿಂದ ಅಭಿವೃದ್ಧಿಯಾಗಿಲ್ಲ ಎನ್ನುವುದಾದರೆ ರಾಜಕೀಯ ಮಾಡುವುದಿಲ್ಲ ಎಂದು ತಿಳಿಸಿದರು.

ತಾಲೂಕಿನ ಹೆಮ್ಮಿಗೆ ಗ್ರಾಮದಲ್ಲಿ ಶುಕ್ರವಾರ ನಡೆದ ಗ್ರಾಪಂ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಚುನಾವಣೆಯಲ್ಲಿ ಸೋತೆನೆಂದು ಜನರ ಮೇಲಿನ ಗೌರವ ಕಿಂಚಿತ್ತು ಕಡಿಮೆಯಾಗಿಲ್ಲ. ಕೆಲವರು ತೀಟೆಗೆ ನನ್ನ ಬೇಳೆ ಬೇಯಲಿಲ್ಲ ಎಂದು ಯಾರನ್ನೋ ಎತ್ತಿ ಕಟ್ಟಿ, ದಾರಿ ತಪ್ಪಿಸಿ, ಅಪಪ್ರಚಾರ ಮಾಡುತ್ತಿರುವವರಿಗೆ ಸೊಪ್ಪು ಹಾಕಿದರೆ ಕ್ಷೇತ್ರದ ಜನರ ಸಮಸ್ಯೆಗಳು ಬಗೆಹರಿಯಲ್ಲವೆಂದು ಭಿನ್ನಮತೀಯರ ವಿರುದ್ಧ ಹರಿಹಾಯ್ದರು.

ಮಹದೇವಪ್ಪ ಅಧಿಕಾರ ಕಳೆದುಕೊಂಡ ಮೇಲೆ ಗ್ರಾಪಂಗಳಿಗೆ ಅನುದಾನ ಮತ್ತು ವಸತಿ ಯೋಜನೆಗಳು ಮರೀಚಿಕೆಯಾಗಿದೆ. ಈ ಹಿಂದೆ ನಾನು ಶಾಸಕ, ಸಚಿವನಾಗಿದ್ದ ವೇಳೆ ಒಂದೊಂದು ಗ್ರಾಪಂಗೆ 400 ರಿಂದ 500 ವಸತಿ ಯೋಜನೆ ಮಂಜೂರು ಮಾಡಿದ್ದೇವು. ನರೇಗಾ ಯೋಜನೆಯಡಿ ಕೋಟಿಗೂ ಹೆಚ್ಚಿನ ಅನುದಾನ ನೀಡಲಾಗಿತ್ತು. ಈಗಿನ ಬಿಜೆಪಿ ಸರ್ಕಾರ ಕನಿಷ್ಠ 10 ರಿಂದ 15 ವಸತಿ ಯೋಜನೆಗಳನ್ನೂ ನೀಡಿಲ್ಲ. ಕೊಳವೆ ಬಾವಿ ಯೋಜನೆಯನ್ನು ಯಾವೊಬ್ಬ ಫಲಾನುಭವಿಗೆ ಕೊಟ್ಟಿಲ್ಲ. ಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ಪ.ಜಾತಿ/ಪ.ಪಂಗಡ ಸಮುದಾಯಗಳ ಅಭಿವೃದ್ಧಿಗೆ ಮಂಜೂರು ಮಾಡಿದ್ದ 42000 ಕೋಟಿ ಅನುದಾನದಲ್ಲಿ ಶೇ.30 ರಷ್ಟು ಹಣವನ್ನು ಬಿಜೆಪಿ ಸರ್ಕಾರ ಬಳಕೆ ಮಾಡಿಲ್ಲ ಎಂದು ಆರೋಪಿಸಿದರು.



ಮಾಧವ ಮಂತ್ರಿ ಅಣೆಕಟ್ಟೆ ಮರು ನಿರ್ಮಾಣಕ್ಕೆ ನಮ್ಮ ಸರ್ಕಾರ ನೀಡಿದ್ದ 64 ಕೋಟಿ ರೂ. ಯೋಜನೆಯ ಕಾಮಗಾರಿ ಕುಂಟುತ್ತಾ ಸಾಗಿದೆ. ನೆನೆಗುದಿಗೆ ಬಿದ್ದಿರುವ 2 ಕೋಟಿ ರೂ. ವೆಚ್ಚದ ಕೆರೆ ಅಭಿವೃದ್ಧಿ, ನಾಲೆ ಏರಿ ರಸ್ತೆ ನಿರ್ಮಾಣ ಹಾಗೂ ಚಂದಹಳ್ಳಿ ಏತ ನೀರಾವರಿ ಯೋಜನೆಯನ್ನು, 2023ರ ಸಾರ್ವತ್ರಿಕ ಚುನಾವಣೆ ಬಳಿಕ ಕೈಗೆತ್ತಿಕೊಳ್ಳೋಣ. ಕೆಲವರನ್ನು ನಂಬಿ ಜವಾಬ್ದಾರಿ ನೀಡಿದ್ದರಿಂದ ಇಂದಿನ ಸರ್ಕಾರದ ಯೋಜನೆಗಳು ಹಲವು ಬಡವರಿಗೆ ಕೈ ತಪ್ಪಿವೆ. ಕುಂಬಾರ ಸಮುದಾಯದ ಭವನಕ್ಕೂ ಅನುದಾನ ನೀಡಬೇಕೆನ್ನುವಷ್ಟರಲ್ಲಿ ಅಧಿಕಾರ ಕೈತಪ್ಪಿ ಹೋಗಿತ್ತು. ಈ ಬಾರಿ ಕ್ಷೇತ್ರದ ಜನರು ಕಾಂಗ್ರೆಸ್ ಕೈಹಿಡಿದು ಬೆಂಬಲಿಸಿದರೆ ಬಾಕಿ ಉಳಿದಿರುವ ಅಭಿವೃದ್ಧಿ ಕೆಲಸವನ್ನು ಎಲ್ಲರೂ ಒಗ್ಗೂಡಿ ಪೂರ್ಣಗೊಳಿಸಲು ದುಡಿಯೋಣ ಎಂದರು.

ಮಂಡಲ ಪಂಚಾಯ್ತಿ ಮಾಜಿ ಪ್ರಧಾನ ಹೆಚ್.ವಿ. ಶೇಷಾದ್ರಿ ಮಾತನಾಡಿ, ಡಾ.ಹೆಚ್.ಸಿ.ಮಹದೇವಪ್ಪ ಸಚಿವರಾಗಿದ್ದಾಗ ಹೆಮ್ಮಿಗೆ ಗ್ರಾಮವನ್ನು ಕೇಂದ್ರವನ್ನಾಗಿಟ್ಟುಕೊಂಡು ಅಭಿವೃದ್ಧಿಗೊಳ್ಳದ ಸುತ್ತಲಿನ ಗ್ರಾಮಗಳ ರಸ್ತೆಗಳನ್ನು ವರ್ತುಲ ರಸ್ತೆ ಮಾದರಿ ಅಭಿವೃದ್ಧಿಪಡಿಸಿ ಮೂಲ ಸೌಕರ್ಯ ಕಲ್ಪಿಸಿದ್ದಾರೆ. ಅಭಿವೃದ್ಧಿ ಜೊತೆಗೆ ಸರ್ಕಾರದ ಯೋಜನೆಗಳನ್ನೂ ಜನರಿಗೆ ನೀಡಿದ್ದರೂ ಪ್ರತಿಭಾನ್ವಿತ ವಿದ್ಯಾರ್ಥಿ ಪರೀಕ್ಷೆಯಲ್ಲಿ ಫೇಲಾದಂತೆ ಚುನಾವಣೆಯಲ್ಲಿ ಅವರನ್ನು ಸೋಲಿಸಿಬಿಟ್ಟೆವು. ಮುಂಬರುವ ಚುನಾವಣೆ ಯಲ್ಲಿ ಮಹದೇವಪ್ಪ ಅಥವಾ ಸುನೀಲ್ ಬೋಸ್ ಇಬ್ಬರಲ್ಲಿ ಯಾರೇ ನಿಂತರೂ ಬೆಂಬಲಿಸಬೇಕು. ನೆನೆಗುದಿಗೆ ಬಿದ್ದಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮುಖಂಡರ ವರ್ತನೆಗೆ ಬೇಸತ್ತು ಜೆಡಿಎಸ್ ಸೇರಿದ್ದ ಹೆಚ್.ಸಿ.ಹೇಮಯ್ಯ ಚೌಡಶೆಟ್ಟಿ, ಮಹದೇವಯ್ಯ, ಚಿಕ್ಕ ವೆಂಕಟಯ್ಯ ಹಾಗೂ ಹಲವು ಯುವ ಮುಖಂಡರು ಡಾ.ಹೆಚ್.ಸಿ.ಮಹದೇವಪ್ಪ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಜಿಪಂ ಮಾಜಿ ಸದಸ್ಯೆ ಸುಧಾ, ಯುವ ಮುಖಂಡ ಸುನೀಲ್ ಬೋಸ್, ಗ್ರಾಪಂ ಮಾಜಿ ಅಧ್ಯಕ್ಷ ಅಕ್ಕೂರು ಗುರುಮೂರ್ತಿ, ಮಾಜಿ ಸದಸ್ಯ ಸಿ.ಸೋಮಣ್ಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಮುಖಂಡರಾದ ನಂಜುಂಡ ನಾಯಕ, ಸಿ.ಬಿ.ಹುಂಡಿ ನಂಜುಂಡ ಸ್ವಾಮಿ, ಪರಮೇಶ, ಮಹದೇವಪ್ಪ, ಕಟ್ಟೇಪುರ ಮಹದೇವಸ್ವಾಮಿ, ಗೌಡ್ರು ಗುರು, ಆಕ್ಕೂರು ನಂಜುಂಡ ನಾಯಕ, ಪುಟ್ಟಮಾದ ನಾಯಕ, ಸುರೇಶ್, ಸಿದ್ದನಾಯಕ, ಚಂದಹಳ್ಳಿ ಮಲ್ಲೇಶ, ರಾಮಸ್ವಾಮಿ ಹಾಗೂ ಇನ್ನಿತರರಿದ್ದರು.

ಶಾಸಕನೇ ಧರಣಿ ಕುಳಿತರೇ ಕೆಲಸ ಮಾಡ್ಸೋರ್ ಯಾರು?

ತಾಲೂಕಿನಲ್ಲಿ ಚಿರತೆ ಹಾವಳಿಗೆ ವಿದ್ಯಾವಂತ ಯುವಕ, ಯುವತಿ ಬಲಿಯಾಗಿದ್ದಾರೆ. ಅಧಿಕಾರಿಗಳಿಗೆ ಚುರುಕು ಮುಟ್ಟಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶ ಹೊರಡಿಸುವುದನ್ನು ಬಿಟ್ಟು ಶಾಸಕನೇ ಧರಣಿ ಕೂತರೆ ಕೆಲ್ಸ ಮಾಡ್ಸೋರ್ ಯಾರು? ಫೋನ್ ಮಾಡಿದರೇ ಸ್ವೀಕರಿಸುತ್ತೇನೆ. ದಿನ ಬೆಳಗಾದರೆ ಸಂಜೆವರೆಗೂ ಓಡಾಡುತ್ತಿದ್ದೇನೆ ಎಂದು ಗಿಮಿಕ್ ಮಾಡುವುದರಿಂದ ಯಾವುದೇ ಪ್ರಯೋಜನ ಆಗಲ್ಲ. ಕ್ಷೇತ್ರದಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಹಾಳಾಗಿದೆ.

–ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ.

ಸರಗೂರು: ಕಾಡಂಚಿನ ರೈತರ ಸಮಸ್ಯೆಗಳಿಗೆ ನೆರವಾಗಿ

ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡ



ಸರಗೂರು, ಡಿ.2– ಕಾಡಂಚಿನ ರೈತರಿಗೆ ಸಮಸ್ಯೆಯಾದಾಗ ಅವರ ನೆರವಿಗೆ ಸಂಘ ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ತಿಳಿಸಿದರು.

ತಾಲೂಕಿನ ನುಗು ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘ ಹೆಚ್.ಡಿ.ಕೋಟೆ ತಾಲೂಕಿನ ನೂತನ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಮಾತನಾಡಿದ ಅವರು, ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಾಗುವುದು. ಇದಕ್ಕೆ ನೂತನ ಪದಾಧಿಕಾರಿಗಳ ಬೆಂಬಲ ಪ್ರಮುಖವಾಗಿರುತ್ತದೆ ಎಂದರು.

ಹೆಚ್.ಡಿ.ಕೋಟೆ ತಾಲೂಕು ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷರಾಗಿ ಉಮೇಶ್, ಉಪಾಧ್ಯಕ್ಷ ಬಸವರಾಜು, ಗೌರವಾಧ್ಯಕ್ಷ ದಾಸೇಗೌಡ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಕಾರ್ಯಾಧ್ಯಕ್ಷ ಎಂ.ಡಿ.ಮಂಚಯ್ಯ, ಸಂಘಟನಾ ಕಾರ್ಯದರ್ಶಿ ಶಿವಮಲ್ಲಪ್ಪ, ಪತ್ರಿಕಾ ಕಾರ್ಯದರ್ಶಿ ಸಿದ್ದಲಿಂಗೇಗೌಡ, ಕಾರ್ಯದರ್ಶಿ ಶಿವಣ್ಣಗೌಡ, ಸಂಚಾಲಕರು ಸಫಿ, ಸಹ ಕಾರ್ಯದರ್ಶಿ ಗೋವಿಂದೇಗೌಡ, ಸಹ ಕಾರ್ಯದರ್ಶಿ ವೆಂಕಟೇಶ್, ಗುರುಸ್ವಾಮಿ, ಸಂಚಾಲಕ ಯೋಗೇಶ್, ಯುವ ಘಟಕದ ಅಧ್ಯಕ್ಷ ರವಿಕುಮಾರ್, ಉಪ ಘಟಕದ ಅಧ್ಯಕ್ಷ ದಿಲೀಪ್, ಹಂಪಾಪುರ ಹೋಬಳಿ ಅಧ್ಯಕ್ಷರಾಗಿ ಶಂಕರ್ ಆಯ್ಕೆಯಾಗಿದ್ದಾರೆ.

ಬಿಜೆಪಿ ಬೆಂಬಲಿಸುವಂತೆ ಅಪ್ಪಣ್ಣ ಮನವಿ



ಹೆಚ್.ಡಿ.ಕೋಟೆ, ಡಿ.2– ರೈತರ ಆದಾಯ ದ್ವಿಗುಣಗೊಳಿಸುವ ಸಂಕಲ್ಪ ತೊಟ್ಟಿರುವ ಪ್ರಧಾನಿ ಮೋದಿ, ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಪಕ್ಷ ಬೆಂಬಲಿಸುವಂತೆ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಉಸ್ತುವಾರಿ ಎಂ.ಅಪ್ಪಣ್ಣ ಮನವಿ ಮಾಡಿದರು.

ತಾಲೂಕಿನ ಬೀಚನಹಳ್ಳಿ ಗ್ರಾಪಂ ವ್ಯಾಪ್ತಿಯ ಗಣೇಶಗುಡಿ, ನೇರಳೆ, ಮಾಗುಳ್ಳಿ, ಬೀಚನಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿ ಪಕ್ಷ ಸಂಘಟನಾ ಸಭೆ ನಡೆಸಿ ಅವರು ಮಾತನಾಡಿದರು.

ಸಭೆಯಲ್ಲಿದ್ದ ಗ್ರಾಮಸ್ಥರು ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಸೇರಿದಂತೆ ಇನ್ನಿತರ ಸಮಸ್ಯೆಗಳನ್ನು ಬಗೆಹರಿಸಿಕೊಡುವಂತೆ ಮನವಿ ಸಲ್ಲಿಸಿದರು. ಈ ವೇಳೆ ಪ್ರತಿಕ್ರಿಯಿಸಿದ ಅಪ್ಪಣ್ಣ, ಸಂಸದ ಶ್ರೀನಿವಾಸಪ್ರಸಾದ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಮುಖಂಡರಾದ ಮೊತ್ತ ಬಸವರಾಜಪ್ಪ ರೈತ ಮೋರ್ಚಾ ಉಪಾಧ್ಯಕ್ಷ ಕಾಶಿಪತಿ, ಗೋವಿಂದ, ಜನಾರ್ಧನ, ರಾಜು, ನಂಜುಂಡ ನಾಯಕ, ಲೋಕೇಶ್, ರಾಮು, ಭೋಜೇಗೌಡರು, ಶಿವಕುಮಾರ್, ಮನು, ಮಧು, ನಂಜುಂಡಸ್ವಾಮಿ, ಚಂದ್ರಶೇಖರ್, ನಂಜೇಗೌಡರು, ಪ್ರಕಾಶ್, ವೆಂಕಟೇಶ್, ಕರಿಗೌಡರು, ನಾಗಾಚಾರಿ, ಚಲುವಾಚಾರಿ, ಸೋಮನಾಯಕ, ನಟರಾಜು, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಚನ್ನಪ್ಪ, ಬಿ.ಟಿ.ನರಸಿಂಹಮೂರ್ತಿ, ಗಣಪತಿ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಹದೇವಪ್ಪ, ಮುಳ್ಳೂರು ಶಕ್ತಿಕೇಂದ್ರ ಅಧ್ಯಕ್ಷ ಶಿವಕುಮಾರ್, ಮಂಜು, ರಾಜಣ್ಣ, ಕೆಂಡಗಣಪ್ಪ, ಸೋಮನಾಯಕ, ಗೋಕುಲ್, ದಾಸಪ್ಪನಾಯಕ, ನಾಗಯ್ಯ ಇತರರಿದ್ದರು.

50 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಜಿಟಿಡಿ ವಿರುದ್ಧ ಬಂಡಾಯ ಸಾರಿದವರು ನನ್ನ ಆಪ್ತರಲ್ಲ: ಸಾರಾ ಮಹೇಶ್

ಕೆಆರ್.ನಗರ, ಡಿ.2– ಸೋಲು–ಗೆಲುವನ್ನು ತಾಲೂಕಿನ ಮತದಾರ ಪ್ರಭುಗಳು ತೀರ್ಮಾನಿಸುತ್ತಾರೆ. ಕಾಂಗ್ರೆಸ್ ಮುಖಂಡರ ತೀರ್ಮಾನದಂತೆ ನಡೆಯುವುದಿಲ್ಲ ಎಂದು ಡಿ.ರವಿಶಂಕರ್ ಹೇಳಿಕೆಗೆ ಶಾಸಕ ಸಾ.ರಾ.ಮಹೇಶ್ ತಿರುಗೇಟು ನೀಡಿದರು.

ಪಟ್ಟಣದ ರೈಲ್ವೆ ಸ್ಟೇಷನ್ ರಸ್ತೆಯ 50 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು 2013ರ ಚುನಾವಣೆಯಲ್ಲಿ ತಂದಿದ್ದ ಪಟಾಕಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾದಾಗ ಹೊಡೆಯಲಾಯಿತು. ಅದೇ ರೀತಿ 2018ರ ಚುನಾವಣೆಯಲ್ಲಿ ಫಲಿತಾಂಶಕ್ಕೂ ಮುನ್ನ ವಿಜಯೋತ್ಸವ ಆಚರಿಸಿದ ಕಾಂಗ್ರೆಸ್ ಮುಖಂಡರ ಹೇಳಿಕೆಗಳು ಬಾಲಿಷವಾದುದು. ಅದಕ್ಕೆಲ್ಲ ಪ್ರತಿಕ್ರಿಯಿಸುವ ಅಗತ್ಯವಿಲ್ಲ ಎಂದರು.

ನನಗೆ ಚುನಾವಣೆ ಭಯವಿದ್ದರೆ ಬೆಂಗಳೂರಿನ ಕಾರ್ಯಕ್ರಮ, ದೊಡ್ಡಬಳ್ಳಾಪುರದ ಜೆಡಿಎಸ್ ಕಾರ್ಯಕ್ರಮ ಹಾಗೂ ತಾಲೂಕಿನ ಮತದಾರರ ಮದುವೆ ಮತ್ತು ಇನ್ನಿತರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿತ್ತೇ ಎಂದು ಪ್ರಶ್ನಿಸಿದ ಅವರು, ತಾಲೂಕಿನ ಜೆಡಿಎಸ್ ಕಾರ್ಯಕರ್ತರು ಮತ್ತು ಮತದಾರರು ಚುನಾವಣೆ ಎದುರಿಸಲು ಸನ್ನದ್ಧರಾಗಿದ್ದು, ಭಯ ಏನಿದ್ದರೂ ಕಾಂಗ್ರೆಸ್ ಮುಖಂಡರಿಗೆ ಎಂದು ವ್ಯಂಗವಾಡಿದರು.



ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಮುಖಂಡರು ಶಾಸಕ ಜಿ.ಟಿ.ದೇವೇಗೌಡರ ವಿರುದ್ಧ ಬಂಡಾಯ ಸಾರಿರುವುದು ಹೊಸದನಲ್ಲ. ಕೆ.ಆರ್.ನಗರ ಸೇರಿದಂತೆ ಇತರೆ ಭಾಗಗಳಲ್ಲಿಯೂ ಕೆಲವು ಭಿನ್ನಭಿಪ್ರಾಯಗಳಿವೆ. ಆದರೆ ಚುನಾವಣೆ ಇನ್ನೂ ದೂರ ವಿರುವುದರಿಂದ ಎಲ್ಲವನ್ನೂ ಸರಿಪಡಿಸುವ ಶಕ್ತಿ ಜೆಡಿಎಸ್ ವರಿಷ್ಠರಿಗಿದೆ ಎಂದರು.

ಬಂಡಾಯ ಸಾರಿದ್ದ ಮುಖಂಡರ್‍ಯಾರು ನನ್ನ ಆಪ್ತರಲ್ಲ. ಅವರೆಲ್ಲರೂ ಜಿ.ಟಿ.ದೇವೇಗೌಡರ ಪರಮಾಪ್ತರೇ. ಆದರೆ ಜೆಡಿಎಸ್‌ನಲ್ಲಿ ಗುರು–ಶಿಷ್ಯನಿಗೆ, ಶಿಷ್ಯ–ಗುರುವಿಗೆ ಎದುರಾಳಿಯಾಗಿರುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮಾಜಿ ಸಿಎಂ ಸಿದ್ದರಾಮಯ್ಯ ಆದಿಯಾಗಿ ಜೆಡಿಎಸ್ ವಿರುದ್ಧ ಬಂಡಾಯ ಸಾರಿದ್ದ ನಾಯಕರಿದ್ದಾರೆ. ಆದ್ದರಿಂದಲೇ ಕರ್ನಾಟಕದಲ್ಲಿ ಜೆಡಿಎಸ್ ಕಾರ್ಯಕರ್ತರ ಪಕ್ಷವಾಗಿ ಉಳಿದಿದೆ ಎಂದರು.

ಈ ವೇಳೆ ಪುರಸಭಾಧ್ಯಕ್ಷ ಪ್ರಕಾಶ್, ಸದಸ್ಯರಾದ ಶಂಕರ್, ಕೆ.ಎಲ್.ಜಗದೀಶ್, ಕೆ.ಪಿ. ಪ್ರಭುಶಂಕರ್, ತೋಂಟದಾರ್ಯ, ಸಂತೋಷ್ ಗೌಡ, ಮಾಜಿ ಸದಸ್ಯರಾದ ಎನ್.ಶಿವಕುಮಾರ್, ರಾಜಾಶ್ರೀಕಾಂತ, ಮುಖಂಡರಾದ ವೀರಭದ್ರಾಚಾರ್, ಜೆಡಿಎಸ್ ನಗರ ಕಾರ್ಯದರ್ಶಿ ರುದ್ರೇಶ್, ರಾಜು, ಮಾಗಳಿ, ಸಾ.ರಾ. ಸ್ನೇಹ ಬಳಗದ ನಿರ್ದೇಶಕ ಮಹೇಶ್, ಮುಖ್ಯಾಧಿಕಾರಿ ಡಾ.ಜಯಣ್ಣ, ಇಂಜಿನಿಯರ್ ಪುಟ್ಟಸ್ವಾಮಿ ಇನ್ನಿತರರಿದ್ದರು.

ಚಿರತೆ ಸೆರೆ ಹಿಡಿಯುವಂತೆ ಅಶ್ವಿನ್ ಕುಮಾರ್ ಸೂಚನೆ

ತಿ.ನರಸೀಪುರ, ಡಿ.2– ತಾಲೂಕಿನ ಜನ ಆತಂಕದಲ್ಲಿದ್ದು ಕೂಡಲೇ ಚಿರತೆ ಸೆರೆ ಹಿಡಿಯಲು ಕ್ರಮ ವಹಿಸುವಂತೆ ಅರಣ್ಯಾಧಿಕಾರಿಗಳು ಮತ್ತು ತಾಲೂಕು ಅಧಿಕಾರಿಗಳಿಗೆ ಶಾಸಕ ಎಂ.ಅಶ್ವಿನ್ ಕುಮಾರ್ ಸೂಚಿಸಿದರು.

ಚಿರತೆ ದಾಳಿಗೆ ಗುರುವಾರ ಯುವತಿ ಬಲಿಯಾದ ಹಿನ್ನೆಲೆಯಲ್ಲಿ ಶುಕ್ರವಾರ ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ಅರಣ್ಯ ಇಲಾಖೆ ಹಾಗೂ ತಾಲೂಕು ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ನರಭಕ್ಷಕ ಚಿರತೆಯಿಂದಾಗಿ ಜನರು ಭಯಭೀತರಾಗಿದ್ದಾರೆ. ಹೀಗಾಗಿ ಚಿರತೆ ಸೆರೆ ಬಡಿದು ಜನರ ಭಯ ದೂರ ಮಾಡುವಂತೆ ತಿಳಿಸಿದರು.

ಡಿಸಿಎಫ್ ಕಮಲಾ ಕರಿಕಾಳನ್ ಮಾತನಾಡಿ, ನರಭಕ್ಷಕ ಚಿರತೆ ಸೆರೆ ಹಿಡಿಯಲು 10 ತಂಡಗಳನ್ನು ರಚಿಸಲಾಗಿದ್ದು, ಈಗಾಗಲೇ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ. ಕಂಡಲ್ಲಿ ಶೂಟ್ ಮಾಡಲು ಅನುಮತಿ ಸಿಕ್ಕಿದ್ದು, ಅದಕ್ಕಾಗಿ ಶೂಟರ್ಸ್ ಬಂದಿದ್ದಾರೆ. ಪ್ರಾಣಿ ವೈದ್ಯಾಧಿಕಾರಿಗಳನ್ನು ಕರೆಸಲಾಗಿದೆ. ಪಿಡಿಓ ಹಾಗೂ ಕಂದಾಯಾಧಿಕಾರಿಗಳ ಮೂಲಕ ಜನರಿಗೆ ಜಾಗೃತಿ ಮೂಡಿಸಿ ರಾತ್ರಿ ವೇಳೆ ಹೊರಬರದಂತೆ ಮಾಹಿತಿ ನೀಡಲಾಗುತ್ತಿದೆ. ಕೃಷಿ ವಿದ್ಯುತ್ ಪಂಪ್ ಸೆಟ್‌ಗಳಿಗೆ ರಾತ್ರಿ ವೇಳೆ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸುವಂತೆ ಸೂಚಿಸಲಾಗಿದೆ. ವಾರದೊಳಗೆ ಚಿರತೆ ಸೆರೆ ಹಿಡಿಯಲು ಕ್ರಮ ವಹಿಸುವ ಭರವಸೆ ನೀಡಿದರು.



ಸಭೆಯಲ್ಲಿ ತಹಸೀಲ್ದಾರ್ ಸಿ.ಜಿ.ಗೀತಾ, ಇಓ ಸಿ.ಕೃಷ್ಣ, ಸಿಎಫ್‌ಓ ಮಾಲತಿಪ್ರಿಯ, ಡಿಸಿಎಫ್ ಕರಿಕಾಳನ್, ಎಸಿಎಫ್‌ಓ ಲಕ್ಷ್ಮೀಕಾಂತ್ ಅರಣ್ಯಾಧಿಕಾರಿ ನದೀಮ್, ಉಪ ಅರಣ್ಯಾಧಿಕಾರಿ ಮಂಜುನಾಥ್, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಮುಖಂಡರಾದ ಪ್ರಭುಸ್ವಾಮಿ ಚಂದ್ರಶೇಖರ್, ಶಶಿಕಾಂತ್, ರಾಜಶೇಖರ್, ಸೋಮಣ್ಣ, ಮನೋಜ್, ಮರಿಸ್ವಾಮಿ, ಗ್ರಾಪಂ ಅಧಿಕಾರಿಗಳು ಹಾಜರಿದ್ದರು.

ಯುವತಿ ಅಂತ್ಯಸಂಸ್ಕಾರ

ಚಿರತೆ ದಾಳಿಯಿಂದ ಸಾವನ್ನಪ್ಪಿದ ತಾಲೂಕಿನ ಎಸ್.ಕೆಬ್ಬೇಹುಂಡಿ ಗ್ರಾಮದ ಯುವತಿ ಮೇಘನಾಳ ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ನೆರವೇರಿತು. ಈ ವೇಳೆ ಶಾಸಕ ಅಶ್ವಿನ್ ಕುಮಾರ್, ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ತಾಲೂಕು ಅಧಿಕಾರಿಗಳು ಹಾಗೂ ಅರಣ್ಯಾಧಿಕಾರಿಗಳು ಭಾಗವಹಿಸಿದ್ದರು.

ಕರ್ತವ್ಯದ ವೇಳೆ ಕುಸಿದು ಬಿದ್ದು ಇನ್‌ಸ್ಪೆಕ್ಟರ್ ಸಾವು

ಬೆಂಗಳೂರು, ಡಿ.2– ವಿಧಾನಸೌಧ ಸೆಕ್ಯೂರಿಟಿ ಕರ್ತವ್ಯದಲ್ಲಿದ್ದ ಇನ್ಸ್‌ಪೆಕ್ಟರ್ ಧನಂಜಯ್ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ.

ಮೂಳೆ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಇನ್ಸ್‌ಪೆಕ್ಟರ್ ಧನಂಜಯ್ ಕಳೆದ ಒಂದು ವರ್ಷದಿಂದ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿದ್ದರು. ಒಂದು ವಾರದ ಹಿಂದೆ ಡ್ಯೂಟಿಗೆ ಬಂದಿದ್ದ ಅವರು ಇಂದು ಕರ್ತವ್ಯದ ವೇಳೆ ಕುಸಿದು ಬಿದ್ದಿದ್ದಾರೆ. ಕೂಡಲೇ ಸ್ಥಳೀಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೇ ಇನ್ಸ್‌ಪೆಕ್ಟರ್ ಧನಂಜಯ್ ಮೃತಪಟ್ಟಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡಿದ್ದ ಶಿಕ್ಷಕನ ಪತ್ನಿ ವಿರುದ್ಧ ಸಾಲು ಸಾಲು ಕ್ರಿಮಿನಲ್ ಪ್ರಕರಣ

ಚೀಟಿ ವ್ಯವಹಾರದಲ್ಲಿ 250ಕ್ಕೂ ಹೆಚ್ಚು ಮಂದಿಗೆ 15 ಕೋಟಿ ವಂಚನೆ ಆರೋಪ

- ಸಂಬಂಧಿಕರ ಹೆಸರಲ್ಲಿ ಅಪಾರ ಆಸ್ತಿ ಮಾಡಿ ಪರಾರಿಯಾದ ದಾಕ್ಷಾಯಿಣಿ
- ತಮ್ಮ ಹಣ ಕೊಡಿಸುವಂತೆ ಪೊಲೀಸರಲ್ಲಿ ಬೇಡುತ್ತಿರುವ ಚೀಟಿದಾರರು

ನಂಜನಗೂಡು, ಡಿ.2–ಇತ್ತೀಚೆಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಶಿಕ್ಷಕನ ಪತ್ನಿ ಪರಾರಿಯಾಗಿದ್ದು ಆಕೆಯ ವಿರುದ್ಧ ಸಾಲು ಸಾಲಾಗಿ ವಂಚನೆ ಪ್ರಕರಣಗಳು ದಾಖಲಾಗುತ್ತಿವೆ.



ದಾಕ್ಷಾಯಿಣಿ

ಶಿಕ್ಷಕ ಶಂಭುಲಿಂಗ ಅವರ ಪತ್ನಿ ದಾಕ್ಷಾಯಿಣಿ ಪರವಾನಗಿ ಪಡೆದು ಚೀಟಿ ವ್ಯವಹಾರ ನಡೆಸುತ್ತಿದ್ದರು. ಪತಿ ಶಂಭುಲಿಂಗ ತನ್ನ ಪತ್ನಿಯ ಚೀಟಿ ವ್ಯವಹಾರಕ್ಕೆ ಗ್ರಾಹಕರನ್ನು ಸೇರ್ಪಡೆಗೊಳಿಸುತ್ತಿದ್ದರು ಎಂದು ಹೇಳಲಾಗಿದ್ದು, ಪತಿ ಆತ್ಮಹತ್ಯೆಯ ನಂತರ ದಾಕ್ಷಾಯಿಣಿ ತನ್ನ ಬಳಿ ಚೀಟಿ ಹಾಕಿದ್ದವರಿಗೆ ಹಣ ಮರು ಪಾವತಿ ಮಾಡದೇ ಪಾರಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ.

ಕಳೆದ ನ.3ರಂದು ಶಿಕ್ಷಕ ಶಂಭುಲಿಂಗ ತನ್ನ ಮನೆಯ ಕಾರ್ ಶೆಡ್‌ನಲ್ಲಿ ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾಗಿದ್ದರು. ಆನಂತರ ಅವರ ಪತ್ನಿ ದಾಕ್ಷಾಯಿಣಿ ಬಳಿ ಚೀಟಿ ಹಾಕಿದ್ದ ನೂರಾರು ಮಂದಿ ಪೊಲೀಸರ ಮೊರೆ ಹೋಗಿದ್ದರು. ಆ ವೇಳೆ ಠಾಣೆಗೆ ಆಗಮಿಸಿದ್ದ ದಾಕ್ಷಾಯಿಣಿ ಪತಿಯ ವೈಕುಂಠ ಆರಾಧನೆ ನಂತರ ಎಲ್ಲರಿಗೂ ಹಣ ಹಿಂತಿರುಗಿಸುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿದ್ದು, ಆನಂತರ ಮನೆ ಬೀಗ ಹಾಕಿಕೊಂಡು ಪರಾರಿಯಾಗಿದ್ದಾರೆ.



ಈ ಸಂಬಂಧ ದಾಕ್ಷಾಯಿಣಿ ಬಳಿ ಹಣ ಕಳೆದುಕೊಂಡಿರುವ ಶಿವಸ್ವಾಮಿ, ಗೌರವಾಂಬಿಕ, ಮಹದೇವಸ್ವಾಮಿ, ವೀರೇಂದ್ರ ಪಾಟೀಲ್, ಶಾಂತ, ನಾಗೇಂದ್ರ ಸೇರಿದಂತೆ ಕೆಲವರು ಜಂಟಿ ಪತ್ರಿಕಾಗೋಷ್ಠಿ ನಡೆಸಿ ತಾವು ವಂಚನೆಗೊಳಗಾಗಿರುವ ಬಗ್ಗೆ ವಿವರಿಸಿದರು.

ಶಿಕ್ಷಕರಾಗಿದ್ದ ಶಂಭುಲಿಂಗ ಅವರ ಪರಿಚಯದ ಮೇರೆಗೆ ಅವರ ಪತ್ನಿ ದಾಕ್ಷಾಯಿಣಿ ಬಳಿ 250ಕ್ಕೂ ಹೆಚ್ಚು ಮಂದಿ ಚೀಟಿ ಹಾಕಿದ್ದರು. ಶಂಭುಲಿಂಗ ನಂಬಿಕಸ್ಥ ಶಿಕ್ಷಕರಾಗಿದ್ದು, ಹಾಗೂ ಅವರ ಪತ್ನಿ ಪರವಾನಗಿ ಪಡೆದು ಚೀಟಿ ನಡೆಸುತ್ತಿದ್ದಾರೆ ಎಂಬ ಕಾರಣದಿಂದ ತಮ್ಮ ಹಣಕ್ಕೆ ಭದ್ರತೆ ಇರುತ್ತದೆ ಎಂದು ನಂಬಿ ಚೀಟಿ ಹಾಕಿದ 250ಕ್ಕೂ ಹೆಚ್ಚು ಮಂದಿಗೆ ಸುಮಾರು 15 ಕೋಟಿ ರೂ. ವಂಚಿಸಲಾಗಿದೆ ಎಂದು ಆರೋಪಿಸಿದರು. ದಾಕ್ಷಾಯಿಣಿ ಅವರು ಚೀಟಿಯಿಂದ ಸಂಗ್ರಹಿಸಿದ ಹಣದಲ್ಲಿ ತಮ್ಮ ಸಂಬಂಧಿಕರ ಹೆಸರಲ್ಲಿ ಕೋಟ್ಯಾಂತರ ರೂ. ಮೌಲ್ಯದ ಆಸ್ತಿ ಮಾಡಿದ್ದಾರೆ ಎಂಬ ಮಾಹಿತಿ ಇದ್ದು, ಪೊಲೀಸರು ತನಿಖೆ ನಡೆಸಿ ಚೀಟಿದಾರರಿಂದ ಸಂಗ್ರಹವಾದ ಹಣದಲ್ಲಿ ಖರೀದಿಸಿರುವ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಎಲ್ಲರಿಗೂ ಹಣ ಕೊಡಿಸುವಂತೆ ಅವರು ಮನವಿ ಮಾಡಿದರು.



ಹೆಚ್.ಡಿ.ಕೋಟೆ ತಾಲೂಕಿನ ಹೇರಗಳ್ಳಿ ಹಾಲು ಉತ್ಪಾದಕರ ಸಂಘದ ನೂತನ ಕಟ್ಟಡವನ್ನು ಅಧ್ಯಕ್ಷ ಸೋಮೇಗೌಡ ಉದ್ಘಾಟಿಸಿದರು. ಈ ವೇಳೆ ಮೈಮುಲ್ ನಿರ್ದೇಶಕರಾದ ಕೆ.ಈರೇಗೌಡ, ದಾಕ್ಷಾಯಿಣಿ, ವ್ಯವಸ್ಥಾಪಕ ಸಣ್ಣತಮ್ಮೇಗೌಡ, ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್, ಹಿರಿಯ ಸಹಕಾರಿ ಬಸವರಾಜಪ್ಪ, ಸಿಇಓ ಮರೀಗೌಡ, ಯೋಗೇಶ್, ತಾಹಿರಾ ಗರಗ, ಬಸವೇಗೌಡ, ಮಾದಪ್ಪ ಸೇರಿದಂತೆ ಇತರರಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ



ಜಯಪುರ, ಡಿ.2– ಸಾಲಬಾಧೆ ತಾಳಲಾರದೇ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಾರೋಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಶಿವರಾಜು(52) ಆತ್ಮಹತ್ಯೆ ಮಾಡಿಕೊಂಡವರು. ಇವರು ಕೃಷಿ ಹಾಗೂ ಮಗಳ ಮದುವೆಗಾಗಿ ಐದುವರೆ ಲಕ್ಷ ರೂ. ಸಾಲ ಮಾಡಿದ್ದರು. ಆದರೆ ಸಾಲ ತೀರಿಸಲಾಗದೇ ತೀವ್ರ ಮನನೊಂದಿದ್ದ ರೈತ ಶಿವರಾಜು ತಮ್ಮ ಜಮೀನಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಮೃತರ ಪುತ್ರ ನವೀನ್ ನೀಡಿದ ದೂರಿನ ಮೇರೆಗೆ ಜಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರ ಬಿ.ಶ್ರೀಕಂಠಯ್ಯ ನಿಧನ

ನಂಜನಗೂಡು, ಡಿ.2– ನಗರದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಪುರಸಭಾ ಸದಸ್ಯ, ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮಾಜಿ ಧರ್ಮದರ್ಶಿ ಬಿ.ಶ್ರೀಕಂಠಯ್ಯ (96) ಶುಕ್ರವಾರ ತಮ್ಮ ಶ್ರೀಕಂಠಪುರಿ ಬಡಾವಣೆಯ 5ನೇ ಕ್ರಾಸ್ ನಿವಾಸದಲ್ಲಿ ನಿಧನರಾದರು.



ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಶನಿವಾರ ಅಂತಿಮ ವಿಧಿ ವಿಧಾನಗಳ ನಂತರ ದೇಹವನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾನ ಮಾಡುವುದಾಗಿ ಕುಟುಂಬದ ಮೂಲಗಳು ತಿಳಿಸಿವೆ.

ಜಯಮ್ಮ ನಿಧನ



ಹೆಚ್.ಡಿ.ಕೋಟೆ, ಡಿ.2– ತಾಲೂಕಿನ ಹೆಬ್ಬಲಗುಪ್ಪೆ ಗ್ರಾಮದ ನಿವಾಸಿ ಜಯಮ್ಮ(70) ಗುರುವಾರ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ಶುಕ್ರವಾರ ನಡೆಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಡಿ.6ರಂದು ಎಂಜಿ ಕೊಪ್ಪಲಿನಲ್ಲಿ ವರಸಿದ್ಧಿ ವಿನಾಯಕ ದೇವಸ್ಥಾನ ಉದ್ಘಾಟನೆ

ಮೈಸೂರು, ಡಿ.2(ಆರ್‌ಕೆ)-ಮೈಸೂರಿನ ಮಂಚೇಗೌಡನಕೊಪ್ಪಲಿನಲ್ಲಿ ನಿರ್ಮಿಸಿರುವ ವರಸಿದ್ಧಿ ವಿನಾಯಕ ದೇವಸ್ಥಾನ ಹಾಗೂ ಶ್ರೀರಾಮ ಮಂದಿರವನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿಗಳು ಡಿಸೆಂಬರ್ 6ರಂದು ಉದ್ಘಾಟಿಸುವರು.



ಮಂಚೇಗೌಡನಕೊಪ್ಪಲು ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಿರ್ಮಿಸಿರುವ ದೇವಸ್ಥಾನ, ನವಗ್ರಹ ಪ್ರತಿಷ್ಠಾಪನೆ, ಶ್ರೀ ವರಸಿದ್ಧಿ ವಿನಾಯಕ ದೇವರ ಗೋಪುರ ಕಳಶ ಸ್ಥಾಪನಾ ಮಹೋತ್ಸವ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಮುಖ್ಯಸ್ಥರಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರು ಆಶೀರ್ವಚನ ನೀಡುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಶಾಸಕರು, ಕಾರ್ಪೊರೇಟರ್‌ಗಳು, ಸಂಘದ ಪದಾಧಿಕಾರಿಗಳು ಹಾಗೂ ಗ್ರಾಮದ ಮುಖಂಡರು ಭಾಗವಹಿಸಲಿದ್ದು, ಅಂದು ಮಧ್ಯಾಹ್ನ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಮುಂದುವರೆದ ವಾಹನ ತಪಾಸಣೆ; 2.27 ಲಕ್ಷ ರೂ. ದಂಡ ವಸೂಲಿ

1901 ವಾಹನ ತಪಾಸಣೆ

445 ಪ್ರಕರಣ ದಾಖಲು

19 ವಾಹನ ವಶಕ್ಕೆ

ಮೈಸೂರು, ಡಿ.2(ಜಿಎ)- ಸಂಚಾರ ನಿಯಮಗಳ ಜಾರಿ ಹಾಗೂ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕುವ ಹಿನ್ನೆಲೆಯಲ್ಲಿ ಮೈಸೂರು ನಗರದ ಎಲ್ಲಾ ಸಂಚಾರ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸರಿಂದ ವಾಹನಗಳ ವಿಶೇಷ ತಪಾಸಣಾ ಕಾರ್ಯಾಚರಣೆ ಮೂರನೇ ದಿನವಾದ ಶುಕ್ರವಾರವೂ ಮುಂದುವರೆಸಲಾಯಿತು.

ನಗರದ ಸಯ್ಯಾಜಿರಾವ್‌ರಸ್ತೆ, ಹುಣಸೂರು ಮುಖ್ಯರಸ್ತೆ ಬನ್ನೂರು ಮುಖ್ಯರಸ್ತೆ, ಮಹದೇವಪುರ ಮುಖ್ಯರಸ್ತೆ ಸೇರಿದಂತೆ ನಗರದ 25ಕ್ಕೂ ಹೆಚ್ಚು ಸ್ಥಳಗಳಲ್ಲಿ ತಪಾಸಣೆ ನಡೆಯಿತು.

ಸಂಜೆ 6ರಿಂದ ರಾತ್ರಿ9ರವರೆಗೆ ಜಂಟಿ ಕಾರ್ಯಚರಣೆ ನಡೆಸಿ, ಗೂಡ್ಸ್ ವಾಹನಗಳು, ಕಾರು, ಮಿನಿ ವ್ಯಾನ್, ತ್ರಿಬಲ್ ರೈಡಿಂಗ್ ಸೇರಿದಂತೆ ಅನುಮಾನಾಸ್ಪದವಾಗಿ ಕಂಡುಬರುವ ವಾಹನಗಳನ್ನು ನಿಲ್ಲಿಸಿ, ತಪಾಸಣೆ ನಡೆಸಿದರು. ನಗರದಾದ್ಯಂತ ನಡೆದ ಜಂಟಿ ಕಾರ್ಯಾಚರಣೆಯಲ್ಲಿ 1901 ವಾಹನಗಳನ್ನು ಪೊಲೀಸರು ತಪಾಸಣೆ ನಡೆಸಿದ, 445 ಪ್ರಕರಣ ದಾಖಲಿಸಿ 2,27,000 ರೂ. ದಂಡ ವಸೂಲಿ ಮಾಡಿ 19 ವಾಹನಗಳನ್ನು ವಶಕ್ಕೆ ಪಡೆಸಿಕೊಂಡಿದ್ದಾರೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ರತ್ನ

ಇವರು ದಿ: 23.11.2022 ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 03.12.2022 ಶನಿವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಮರುಳೇಶ್ವರ ಶಾಂತಿ ಧಾಮ, ಕಾವೇರಿ ಶಾಲೆ ಹತ್ತಿರ, ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಮಕ್ಕಳಾದ ಶ್ರೀ ಚಂದ್ರಶೇಖರ್, ಶ್ರೀ ಸ್ವಾಮಿ, ಸೊಸೆಯಂದಿರು, ಮೊಮ್ಮಗಳು ಹಾಗೂ ಅಪಾರ ಕುಟುಂಬವರ್ಗದವರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಭೈರೇಗೌಡರವರು
ನಿಧನ: 23.11.2022

ಇವರು ದಿ. 23.11.2022ರಂದು ದೈವಾಧೀನರಾಗಿದ್ದು ತತ್ಸಂಬಂಧವಾಗಿ ದಿ, 03.12.2022ನೇ ಶನಿವಾರ ಬೆಳಿಗ್ಗೆ 11.00 ಗಂಟೆಗೆ **ಉತ್ತರ ಕ್ರಿಯಾದಿ ಭೂಶಾಂತಿ** ಕಾರ್ಯವನ್ನು ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ, ಆಹ್ವಾನಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ
—ಪತ್ನಿ ಶ್ರೀಮತಿ ಚಿಕ್ಕತಾಯಮ್ಮ, ಮಗ ರಾಜು, ಸೊಸೆ, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು. ಮೊ: 9964064958
ಭೋಜನ: ಮಧ್ಯಾಹ್ನ 1.00 ಗಂಟೆಗೆ ಸ್ಥಳ: ಮಹದೇಶ್ವರ ಸಮುದಾಯ ಭವನ, ಕುಂಬಾರಕೊಪ್ಪಲು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ- 571234, ಸೋಮವಾರಪೇಟೆ ತಾ॥ ಕೊಡಗು ಜಿಲ್ಲೆ, ಕರ್ನಾಟಕ
ದೂರವಾಣಿ ಸಂಖ್ಯೆ: 08276-274365, ಫ್ಯಾಕ್ಸ್ ಸಂಖ್ಯೆ: 08276-274365,
ಇಮೇಲ್: eehrdksh@gmail.com

ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಪುವಿ/ಪಿಬಿಬಿ ಟೆಂಡರ್ ಪ್ರಕಟಣೆ
ಸಂಖ್ಯೆ: 20/22-23 ದಿನಾಂಕ: 02.12.2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ ಕರೆ)

(ಐಟಂವಾರು: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮುಖಾಂತರ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಈ ವಿಭಾಗ ವ್ಯಾಪ್ತಿಯಿಂದ ವಿರಾಜಪೇಟೆ ತಾಲ್ಲೂಕು, ಮಡಿಕೇರಿ ತಾಲ್ಲೂಕು ಮತ್ತು ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಎಸ್‌ಸಿಪಿ-ಟಿಎಸ್‌ಪಿ ಲೆಕ್ಕಶೀರ್ಷಿಕೆಯಡಿ ಒಟ್ಟು 9 ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳ ಅಂದಾಜು ಮೊತ್ತ ರೂ 50.00 ಲಕ್ಷಗಳಿಂದ 300.00 ಲಕ್ಷಗಳಿದ್ದು, ಈ ಕಾಮಗಾರಿಗಳಿಗೆ ನಿಗದಿತ ದರ್ಜೆ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಮಾತ್ರ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.
ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ: 09.12.2022 ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: 12.12.2022ರ ಪೂರ್ವಾಹ್ನ 11.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ವಿಳಾಸ: http://eproc.karnataka. gov.in ರಲ್ಲಿ ಪಡೆಯಬಹುದಾಗಿದೆ. ಈ ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗಧಿಯಾಗಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯ ಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಹಾರಂಗಿ ಪುನರ್ವಸತಿ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕುಶಾಲನಗರ, ಸೋಮವಾರಪೇಟೆ ತಾ., ಕೊಡಗು ಜಿಲ್ಲೆ - 571234